ಮಂಡನೆಗೆ ಅನುಮತಿ ಕೋರಿಕೆ

ಶ್ರೀ. ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೆ,

"೧೯೮೨ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ.—

"೧೯೮೨ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿಯನ್ನು ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು.

ಶ್ರೀ. ಎ. ಲಕ್ಷ್ಮೀಸಾಗರ್.— ೧೯೮೨ನೇ ಕರ್ನಾಟಕ ಸ್ಟ್ಯಾಂಪ್ಸ್ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ.

೧೯೮೨ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯಮಂತ್ರಿಗಳು).—ಮಾನ್ಯ ಅಧ್ಯಕ್ಷರೆ,

"೧೯೮೨ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ತಮ್ಮ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು.— ಪ್ರಸ್ತಾವ ಏನೆಂದರೆ.—

"೧೯೮೨ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲಾಯಿತು ಮತ್ತು ಮಂಡನೆಗೆ ಅನುಮತಿ ನೀಡಲಾಯಿತು

ಶ್ರೀ ವೀರಣ್ಣ.— ೧೯೮೨ನೇ ಇಸವಿಯ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.— ವಿಧೇಯಕವನ್ನು ಮಂಡಿಸಲಾಗಿದೆ.

೧೯೮೨ ನೇ ಇಸವಿಯ ಕರ್ನಾಟಕ ಧನವಿನಿಯೋಗ ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೆ,

"೧೯೮೨ನೇ ಇಸವಿಯ ಧನವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಬಗ್ಗೆ ಇಲ್ಲಿ ಚರ್ಚೆಯಾಗಿಲ್ಲವೆಂದು ನಾನು ಹೇಳುತ್ತಿದ್ದೇನೆ......

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಅನುಮತಿಯನ್ನು ತೆಗೆದುಕೊಂಡು ಹೇಳಬೇಕಾಗುತ್ತದೆ. ಪ್ರತಿಯೊಂದನ್ನು ನೀವು "ಇಲ್ಲ, ಇಲ್ಲ" ಎಂದು ಹೇಳುವುದೇ ನಿಮ್ಮ ಪದ್ಧತಿ ಆಗಿದೆ. ಒಂದು ವೇಳೆ ಚರ್ಚೆ ಇಲ್ಲದೆ ಈ ವಿಧೇಯಕವನ್ನು ಪಾಸ್ ಮಾಡಿಕೊಳ್ಳಬೇಕೆಂದು ನಿಮ್ಮ ಧೋರಣೆ ಇದ್ದರೆ ಆ ರೀತಿಯೇ ಆಗಬಹುದು.

೫-೩೫ ಪಿ. ಎಂ.

ಶ್ರೀ. ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ ಇದು ಎರಡನೆಯ ಕಂತಿನ ಅನುಪೂರಕ ಬೇಡಿಕೆ ಇದರಲ್ಲಿ ೨೮೦.೬೮ ಕೋಟಿ ರೂಪಾಯಿಗಳು ಇದ್ದರೂ ಕೂಡ ಸರ್ಕಾರದ ಬೊಕ್ಕಸದಿಂದ ಹೊರಗಡೆ ಹೋಗತಕ್ಕಂಥ ಹಣದ ಮೊತ್ತ ೯೨.೨೭ ಕೋಟಿ ರೂಪಾಯಿಗಳು ಮಾತ್ರ. ಇವುಗಳಲ್ಲೂ ಕೂಡ ವರ್ಷದ ಕಾಲದಲ್ಲಿ ಅತಿ ಜರೂರಾಗಿ ಖರ್ಚುಮಾಡಬೇಕಾದಂಥ ವಿಷಯಗಳಿಗೆ ಸಂಬಂಧಪಟ್ಟ ಖರ್ಚಿನ ಬಾಬುಗಳಿಗೆ ಸಂವಿಧಾನದ ರೀತಿ ಖರ್ಚು ಮಾಡಲು ಸಂವಿಧಾನದಲ್ಲಿ ಅವಕಾಶ ಇದೆ. ಪ್ರಥಮತಃ ಎಷ್ಟರಮಟ್ಟಿಗೆ ಇರಬೇಕು, ಎಲ್ಲಿಯವರೆಗೆ ಇರಬೇಕು ಎನ್ನುವುದನ್ನು ಮುಖ್ಯವಾಗಿ ಗಮನಕ್ಕೆ ತೆಗೆದುಕೊಳ್ಳತಕ್ಕಂಥ ವಿಚಾರ. ಆಯವ್ಯಯವನ್ನು ಕೂಲಂಕುಶವಾಗಿ ಯೋಚನೆ ಮಾಡಿ ದೂರದೃಷ್ಟಿಯ ಮನಸ್ಸಿನಿಂದ ಮುಂದೆ ಒದಗಬಹುದಾದಂಥ ಖರ್ಚುಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ಸರಿಯಾದಂಥ ಖರ್ಚನ್ನು ಆಯವ್ಯಯದಲ್ಲಿ ಒದಗಿಸತಕ್ಕಂಥ ಜಾಣತನದ ಲಕ್ಷಣ ಸಾಮಾನ್ಯವಾಗಿ ಇದು ಆರ್ಥಿಕ ನೀತಿಗೆ ಸಂಬಂಧಪಟ್ಟ ವಿಚಾರ. ಆದರೆ ನನ್ನ ಅನುಭವದಲ್ಲಿ ಹಲವಾರು ವರ್ಷಗಳಿಂದ ಏನು ಬಂದಿದೆ. ಎಂದರೆ ಎಷ್ಟೇ ಜಾಣತನದಿಂದ ವ್ಯಯ ಮೊತ್ತವನ್ನು ಲೆಕ್ಕ ಹಾಕಿದರೂ ಯೋಚನೆ ಮಾಡಿದ ಯೋಚನೆಗೆ ಅಗೋಚರವಾದ ಸನ್ನಿವೇಶಗಳು ಬಂದು ಆ ಅಗೋಚರವಾದ ಸನ್ನಿವೇಶಗಳಿಗೆ ಖರ್ಚನ್ನು ಮಾಡಬೇಕಾದಂಥ ಸನ್ನಿವೇಶಗಳು ಬಂದೇ ಬರುತ್ತವೆ. ಇವು ಅನುಭವಕ್ಕೆ ಬಂದಿತಕ್ಕಂಥ ವಿಚಾರ. ಇದಕ್ಕೆ ಕನಿಷ್ಠ ಪ್ರಮಾಣದ ಮೊತ್ತವನ್ನು ಖರ್ಚು ಮಾಡುವುದು ಒಟ್ಟು ಕೇವಲ ೯೨.೨೭ ಕೋಟಿ ರೂಪಾಯಿಗಳು ಮಾತ್ರ. ಒಟ್ಟು ರಾಜ್ಯ ಸರ್ಕಾರದ ಆದಾಯವನ್ನು ಗಣನೆಗೆ ತೆಗೆದುಕೊಂಡದ್ದೆ ಆದರೆ ೮೨.೨೭ ಕೋಟಿ ರೂಪಾಯಿಗಳು ಶೇಕಡ ಅಂಶ ಬಹಳ ಕಡಿಮೆ ಎಂಬ ಅಂಶವನ್ನು ಹೇಳಲಿಕ್ಕೆ ನಾನು ಇಚ್ಛೆಪಡುತ್ತೇನೆ. ಇವೆಲ್ಲವೂ ಕೂಡ ಜರೂರಾಗಿ ಮಾಡಬೇಕಾದಂಥ ಖರ್ಚಿನ ಬಾಬುಗಳಿಗೆ ಈ ಸದನದ ಮಾನ್ಯ ಸದಸ್ಯರು ತಮ್ಮ ಒಪ್ಪಿಗೆಯನ್ನು ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೇ ಈ ಪೂರಕ ಡಿಮ್ಯಾಂಡ್‌ಗಳ ಬಗ್ಗೆ ವಿಸ್ತಾರವಾಗಿ ಚರ್ಚೆ ಮಾಡಬೇಕೆಂಬ ಉದ್ದೇಶ ನಮಗೆ ಇತ್ತು. ಆದರೆ ಸರ್ಕಾರದ ಉದ್ದೇಶವೇ ಬೇರೆಯಾಗಿರುತ್ತದೆ. ಇಲ್ಲಿ ಯಾವುದನ್ನು ಚರ್ಚೆ ಮಾಡದೇ, ಚರ್ಚೆಗೆ ಅವಕಾಶವನ್ನು ಕೊಡದೆ ಪೂರಕ ಡಿಮ್ಯಾಂಡ್‌ಗಳನ್ನು ಮಂಜೂರು ಮಾಡಿಸಬೇಕೆಂದು ಒಂದು ಉದ್ದೇಶ ಇಟ್ಟುಕೊಂಡು ಸರ್ಕಾರ ಕೆಲಸ ಮಾಡುತ್ತಿದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ.

ಸನ್ಮಾನ್ಯ ಮುಖ್ಯಮಂತ್ರಿಯವರು ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತಿರುವಾಗ ಕೆಲವು ಸ್ಪಷ್ಟೀಕರಣಗಳನ್ನು ಕೇಳುತ್ತಿದ್ದೆವು. ಮುಖ್ಯವಾಗಿ ಮಂಡಲ್ ಪಂಚಾಯತ್‌ಗಳಿಗೆ ನಾಮಕರಣದ ಬಗ್ಗೆ. ಆ ಸಂದರ್ಭದಲ್ಲಿ ಬಹಳ ಚೆನ್ನಾಗಿ ಅವರು ಉತ್ತರವನ್ನು ಕೊಡುತ್ತಿದ್ದರು. ಈ ಮಧ್ಯೆ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ಬಂದುಬಿಟ್ಟರು. ಅವರು ಏಕೋ ಬಂದ ಕೂಡಲೇ ಏತಕ್ಕೋ ಉತ್ತರವನ್ನು ಕೊಡತಕ್ಕಂಥ ಧಾಟಿ ಸದನದ ವಿರೋಧ ಪಕ್ಷದವರನ್ನು ನೋಡತಕ್ಕಂಥ ವೈಖರಿ ಅದನ್ನೆಲ್ಲಾ ನೋಡುವಾಗ ಬಹುಶಃ ಈ ಸದನದ ಕಾರ್ಯಕಲಾಪಗಳಲ್ಲಿ ಮಾನ್ಯ ಮಂತ್ರಿಗಳಿಗೆ ನಂಬಿಕೆ ಇಲ್ಲವೋ ವಿಶ್ವಾಸ ಇಲ್ಲವೋ ಏನೋ ಗೊತ್ತಿಲ್ಲ ಎನ್ನುವ ರೀತಿ ಕಾಣುತ್ತದೆ. ಏತಕ್ಕೆಂದರೆ ಪ್ರಜಾಪ್ರಭುತ್ವದಲ್ಲಿ ಕೆಲವೊಂದು ವಿಧಾನಗಳು ಅಂದರೆ ಇಲ್ಲಿ ಚರ್ಚೆ ಮಾಡತಕ್ಕಂಥದ್ದು. ಸರ್ಕಾರ ಏನು ನಿರ್ಣಯ ಮಾಡಬೇಕು ಅದನ್ನು ನಿರ್ಣಯ ಮಾಡತಕ್ಕಂಥ ಹಕ್ಕು ಸರ್ಕಾರಕ್ಕೆ ಇರುತ್ತದೆ. ಅದರಂತೆ ವಿರೋಧ ಪಕ್ಷಕ್ಕೂ ಕೆಲವೊಂದು ವಿಚಾರಗಳನ್ನು ಹೇಳಿದನ್ನು ವಿರೋಧಿಸತಕ್ಕಂಥ ಹಕ್ಕು ಇದೆ. ಇದನ್ನು

ಹೇಳುವುದೇ ದೊಡ್ಡ ಪಾಪವೆಂದು ಮಾನ್ಯ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳು ತಿಳಿದು ಕೊಂಡಂತೆ ಇದೆ. ಏನಾದರೂ ವಿರೋಧ ಪಕ್ಷದವರು ಹೇಳಿದ ಕೂಡಲೇ ಅವರು ತಾರಕಕ್ಕೆ ಹೋಗಿ ಬಿಡುತ್ತಾರೆ. ಇದು Most undemocratic way ಒಂದು ರೀತಿಯಲ್ಲಿ ನಾವು ಇದನ್ನು ಹೇಳಬಾರದು. ಆದರೆ ಯಾವಾಗಲೂ ಸರ್ಕಾರದ ಮಂತ್ರಿಗಳು ಈ ಸದನದಲ್ಲಿ ನಡೆದುಕೊಳ್ಳುವಾಗ ತಮ್ಮ ಉದ್ಧಟತನವನ್ನು ತೋರಿಸಿ ಈ ಸದನವನ್ನು ನಡೆಸಲಿಕ್ಕೆ ಆಗುವುದಿಲ್ಲ. ನಾವು ಸ್ಪಷ್ಟೀಕರಣ ಕೇಳಿದರೆ ಯಾವ ರೀತಿ ನಡೆದುಕೊಂಡರು, ಯಾವ ರೀತಿ ಉತ್ತರ ಕೊಟ್ಟರು ಎಂದರೆ ನಮ್ಮನ್ನು ವಾಕ್‌ಔಟ್ ಮಾಡುವಂತೆ ಮಾಡಿದರು. ಆ ದಿವಸ ಅವರು ಮಾತನಾಡಿದ್ದರಿಂದ ನಾವು ಧರಣಿ ಮಾಡಬೇಕಾಯಿತು. ಇನ್ನೊಮ್ಮೆ ಮಾತನಾಡಿದರೆ ಸದನದ ಕಾರ್ಯಕಲಾಪ ಏನಾಗುತ್ತದೆಯೋ ಗೊತ್ತಿಲ್ಲ. ಸದನದ ಕಾರ್ಯಕಲಾಪವನ್ನು ಇದೇ ರೀತಿ ಕೊಂಡೊಯ್ಯಬೇಕೆಂದು ಇದ್ದರೆ, ಅದಕ್ಕೆ ಪ್ರಚೋದನೆ ಕೊಡುವುದು ಇದ್ದರೆ ಕಾರ್ಯಕಲಾಪ ನಡೆಸುವುದು ವ್ಯರ್ಥ ಅನ್ನಿಸುತ್ತದೆ. We were compelled to walk out. We have faith in these democratic institutions. This is a sovereign institution. ಆದರೆ ಇದರ ಬಗ್ಗೆ ಸರ್ಕಾರಕ್ಕೆ ವಿಶ್ವಾಸ ಇದೆಯೋ ಇಲ್ಲವೆ ? ಏಕೆಂದರೆ ನಾನು ೧೯೭೨ ರಿಂದ ನೋಡಿದ್ದೇನೆ. ತಾವು ಕೂಡ ನೋಡಿದ್ದೀರಿ. ಮಾನ್ಯ ರಾಚಯ್ಯನವರ ಹಾಗೆ, ಶ್ರೀಮತಿ ನಾಗರತ್ನಮ್ಮನವರ ಹಾಗೆ ಹೆಚ್ಚು ಅನುಭವ ಇಲ್ಲದಿದ್ದರೂ ಬಹಳ ವರ್ಷಗಳಿಂದ ನೋಡಿದ್ದೇನೆ. ೧೯೭೨ ರಿಂದ ನೋಡಿದ ಹಾಗೆ ಯಾವಾಗಲೂ ಕೂಡ ಯಾವುದೇ ಬೇಡಿಕೆಗಳು ಚರ್ಚೆ ಇಲ್ಲದೆ ಪಾಸ್ ಆಗಿರತಕ್ಕ ಪ್ರಶ್ನೆ ಇಲ್ಲ. ಗಿಲಟಿನ್ ಮಾಡಿದ್ದೇ ಇಲ್ಲ. ಈ ರೀತಿಯಾಗಿ ಹಿಂದಿನಿಂದ ನಡೆದುಕೊಂಡು ಬಂದಿದೆ. ವಿಶೇಷವಾಗಿ ಒಮ್ಮೆ ಆಯಿತು ಎಂದು ಕಾಣುತ್ತದೆ. ಕೆಲವು ಬೇಡಿಕೆಗಳನ್ನು ಗಿಲಟಿನ್‌ಗೆ ಹಾಕಿದರೂ ಆಮೇಲೆ ಚರ್ಚಿಸಲು ಅವಕಾಶ ಸಿಕ್ಕಿತ್ತು. ಸಹಕಾರ ಇಲಾಖೆ ಬೇಡಿಕೆಯು ಮೇಲೆ ನಂತರ ಚರ್ಚೆ ಆಗಿತ್ತು. ರೆಕಾರ್ಡ್‌ಗಳಲ್ಲಿ ನೋಡಿದರೆ, ಯಾವುದೇ ಬೇಡಿಕೆಗಳ ಬಗ್ಗೆ ಆಕಸ್ಮಾತ್ ಒಂದು ಘಟನೆಯಿಂದ ಮಾತನಾಡುವುದಕ್ಕೆ ಅವಕಾಶ ಸಿಕ್ಕದಿದ್ದರೂ ಆಮೇಲೆ ಚರ್ಚೆ ಆಗಿದೆ. ಬೇರೆ ಕಡೆ ಎಲ್ಲಾ ಆಗಿದೆ ಎಂದು ಅದನ್ನು ಕಂಪಾರಿಸನ್ ಮಾಡುತ್ತಾರೆ. ನಮ್ಮ ಕರ್ನಾಟಕದ ಸತ್ವ ಪರಂಪರೆ ಯಾವುದೂ ತಮಗೆ ಬೇಕಿಲ್ಲವೆ ? ಅದನ್ನು ಗಾಳಿಗೆ ತೂರಲಾಗಿದೆ. ಇದರಲ್ಲಿ ನಮ್ಮ ಸಂಪ್ರದಾಯಗಳು ವಿಲೀನವಾಗಿವೆ ಎಂದು ಹೇಳ ತಕ್ಕ ಒಂದು ಪರಿಪಾಠವನ್ನು ಈ ಸರ್ಕಾರದವರು ಇಟ್ಟುಕೊಂಡ ಹಾಗೆ ಕಾಣುತ್ತದೆ. ಅದು ಒಳ್ಳೆಯ ಲಕ್ಷಣ ಅಲ್ಲ. ಈ ಸದನದಲ್ಲಿ ನಾನು ಮಾತನ್ನು ಬಹಳ ಜವಾಬ್ದಾರಿಯಿಂದ ಆಡುತ್ತಿದ್ದೇನೆ. ಕೊನೆಯ ಪಕ್ಷ ಇವರಿಗೆ ಸೌಜನ್ಯವಾದರೂ ಬೇಡವೆ ? ಇಂಥ ಬೇಡಿಕೆಗಳು ಪಾಸ್ ಆಗಿವೆ, ಅದರ ಬಗ್ಗೆ ನಂತರ ಮಾತನಾಡೋಣ, ಚರ್ಚೆಗೆ ಅವಕಾಶ ಮಾಡುತ್ತೇವೆ ಎಂಬುದು ಬೇಡವೆ? That good gesture has not come from the Government even till today before this House. ಎರಡು ಸಾವಿರ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬೇಡಿಕೆಗಳನ್ನು ಯಾವುದೇ ಚರ್ಚೆ ಇಲ್ಲದೆ ಪಾಸ್ ಮಾಡಿದ್ದಾರೆ. ನಮಗೆ ಇಲ್ಲಿ ಮಾತನಾಡುವ ಚಟದ ಪ್ರಶ್ನೆ ಅಲ್ಲ. ಸಾರ್ವಜನಿಕರ ಗಮನಕ್ಕೆ ಬಾರದೆ, ಸದನದಲ್ಲಿ ಏನು ಇದೆ, ಏನು ನಡೆಯುತ್ತಿದೆ, ಯಾವ ಬೇಡಿಕೆಗಳು ಇವೆ, ನಮ್ಮ ಆಶೋತ್ತರಗಳು ಎಷ್ಟು, ಆ ಬೇಡಿಕೆಗಳಲ್ಲಿ ಅಡಕವಾಗಿವೆ—ಇದನ್ನೆಲ್ಲ ಯಾವುದನ್ನೂ ಸಾರ್ವಜನಿಕರ ಗಮನಕ್ಕೆ ತಾರದೆ, ಸದನದ ವಿಶ್ವಾಸವನ್ನೂ ತೆಗೆದುಕೊಳ್ಳದೆ ಪಾಸ್ ಮಾಡಿಕೊಂಡಿರುವುದು ಸರಿಯೆ ? ಏನೋ ಒಂದು ಘಟನೆ ನಡೆಯಿತು, ಚರ್ಚೆ ಆಗಲಿಲ್ಲ. ಆಮೇಲಾದರೂ ಚರ್ಚೆ ಮಾಡೋಣ ಎಂಬುದು ಎಲ್ಲಿಯೂ ಬರಲಿಲ್ಲ. That good gesture has not been expressed at all. ಇದಕ್ಕೆ ಏನು ಹೇಳಬೇಕು ಅಧ್ಯಕ್ಷರೆ ? ಇದೊಂದು ಬಂಡ ಸರ್ಕಾರ, ಎಂದು ಹೇಳಬೇಕಾಗಿದೆ.

ಶ್ರೀ ಆರ್. ಎನ್. ನಾಯಕ್.—ಸರಿಯಾಗಿ ಹೇಳಿದಿರಿ.

(ಗೊಂದಲ)

ಅಧ್ಯಕ್ಷರು.—ನೇರವಾಗಿ ತಾವು ವಿಷಯಕ್ಕೆ ಬನ್ನಿ. ಮಾನ್ಯ ನಾಯಕರೇ ನಿಮ್ಮದು ಅವರು ಮಾತನಾಡುವಾಗಲೂ ಇಂಟರ್‌ಫಿಯರೆನ್ಸ್. ಇವರು ಮಾತನಾಡುವಾಗಲೂ ಇಂಟರ್‌ಫಿಯರೆನ್ಸ್.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ.—ತಮಗೆ ಪೂರ್ತಿ ಅಧಿಕಾರ ಇದೆ. ಪೂರಕ ಬೇಡಿಕೆಗಳ ಬಗ್ಗೆ ಬೆಳಿಗ್ಗೆ ಚರ್ಚಿಸುವುದಕ್ಕೆ ಅವಕಾಶ ಸಿಕ್ಕಲಿಲ್ಲ. ಈಗಲೂ ಮಾತನಾಡಬೇಡಿ ಪಾಸ್ ಮಾಡಿಕೊಳ್ಳುತ್ತೇವೆ ಅಧಿಕಾರ ಇದೆ, ಮೆಜಾರಿಟಿ ಇದೆ, ಕುಳಿತುಕೊಳ್ಳಿ ಎಂದು ಅಪ್ಪಣೆ ಕೊಟ್ಟರೆ ಕುಳಿತುಕೊಳ್ಳುತ್ತೇನೆ. ತಾವು ಸುಮ್ಮನೆ ಏತಕ್ಕೆ ಚರ್ಚಿಸಬೇಕು ?

ಅಧ್ಯಕ್ಷರು.—ಮಾತನಾಡಿ, ಹೇಳುವುದೆಲ್ಲ ಹೇಳಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದಕ್ಕೆ ಏನು ಹೇಳುವುದು ? ಈ ಪರಿಪಾಠವನ್ನು ಹಾಕಿ ಕೊಂಡರೆ ಮುಂದೆ ಬರತಕ್ಕವರು ಹಿಂದಿನ ಸರ್ಕಾರ, ಹೆಗಡೆ ಸರ್ಕಾರ ಈ ರೀತಿ ಮಾಡಿದೆ. ಇದೇ ಸದನದಲ್ಲಿ ಇಂಥ ಮಾದರಿ ಮಾಡಿಕೊಟ್ಟಿದೆ ಎಂದು ಮುಂದಿನ ಸರ್ಕಾರ ಅನುಸರಿಸಬೇಕೆಂಬ ಇಚ್ಛೆ ಇದ್ದರೆ ಹೇಳಿ. ನಾವು ಅದನ್ನು ಒಪ್ಪದೆ ಇರಬಹುದು......

ಅಧ್ಯಕ್ಷರು.—ತಾವು ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ಒಪ್ಪದೇ ಇರಬಹುದು. ಆದರೆ ತಮಗೆ ರೆಗ್ಯುಲೇಟ್ ಮಾಡತಕ್ಕ ಅಧಿಕಾರ ಇದೆ.

ಅಧ್ಯಕ್ಷರು.—ಸಾಕು, ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಜನತೆಯ ಆಶೋತ್ತರಕ್ಕೆ ಅಥವಾ ಆಸೆಆಕಾಂಕ್ಷೆಗಳಿಗೆ ಪ್ರತಿ ಸ್ಪಂದನ ಇಲ್ಲದೇ ಇರತಕ್ಕ ಒಂದು ಸಂದರ್ಭ, ಒಂದು ಪರಿಸ್ಥಿತಿ ಇಲ್ಲಿ ಉದ್ಭವವಾಗಿದೆ ಎಂದು ನಾನು ಹೇಳ ಬೇಕಾಗುತ್ತದೆ. ಇಲ್ಲಿ ಪೂರಕವಾದ ಡಿಮ್ಯಾಂಡ್ಸ್ ಕೊಟ್ಟಿದ್ದಾರೆ.

ಅಧ್ಯಕ್ಷರು.—ಪೇಜ್ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಪ್ರಾರಂಭಿಕ ಟಿಪ್ಪಣಿಯಲ್ಲಿ ಮೊದಲನೆಯ ಪುಟದಲ್ಲೇ ಹೇಳಿದ್ದಾರೆ. ಪೂರಕ ಅಂದಾಜಿನಲ್ಲಿ ಇರತಕ್ಕ ಒಟ್ಟು ಮೊತ್ತ ೨೮೩.೬೮ ಕೋಟಿ ರೂಪಾಯಿಗಳು. ಇದರಲ್ಲಿ ಹೊಂದಾಣಿಕೆ, ಕೇಂದ್ರದ ಹಣ ಎಲ್ಲಾ ಬಿಡೋಣ. ನಿವ್ವಳವಾಗಿರತಕ್ಕ ಹಣ, ರಾಜಸ್ವದಿಂದ ಎಷ್ಟು ಹೋಗುತ್ತದೆಂದರೆ ೯೨.೨೭ ಕೋಟಿ ರೂಪಾಯಿಗಳು ಹೋಗುತ್ತದೆ. ಸರ್ಕಾರಕ್ಕೆ ಒಂದು ನಿಮಿಷ ತಾಳ್ಮೆ ಅಥವಾ ಹಿಡಿತ ಇದ್ದಿದ್ದರೆ ಇದರ ಬಗ್ಗೆ ಪರಿಪೂರ್ಣವಾದ ಚರ್ಚೆ ಆಗುತ್ತಿರಲಿಲ್ಲವೆ ? We walked out in view of the most undemocratic response shown by the Minister for Rural Development. ಯಾವಾಗಲೂ ವಾಕ್ ಔಟ್ ಆಗಿರಲಿಲ್ಲವೆ ? But Government was not prepared for discussion. We have some good suggestions to make. ಒಟ್ಟು ೨೮೩.೬೮ ಕೋಟಿ ರೂಪಾಯಿಗಳಲ್ಲಿ ನಿವ್ವಳ ೯೨ ಕೋಟಿ ರೂಪಾಯಿಗಳನ್ನು ರಾಜಸ್ವದಿಂದ ಮಂಜೂರು ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಒಂದು ನಿಮಿಷ ಕಾಯತಕ್ಕ ವ್ಯವಧಾನ ಈ ಸರ್ಕಾರಕ್ಕೆ ಇಲ್ಲದೇ ಇದ್ದರೆ ಏನು ಹೇಳಬೇಕು ?

ಶ್ರೀ ಆರ್. ಎನ್. ನಾಯಕ್.—ಬಂಡೆ ಸರ್ಕಾರ ಎನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಂಡೆ ಸರ್ಕಾರವೂ ಅಲ್ಲ. ಈ ಸರ್ಕಾರಕ್ಕೆ ಕಿವಿ, ಬಾಯಿ ಎಲ್ಲಾ ಮುಚ್ಚಿಕೊಂಡ ಸರ್ಕಾರ ಎಂದು ಹೇಳಬೇಕು. ನಿರ್ಲಿಪ್ತವಾದ ವಾಸನಾರಹಿತವಾದ ಪ್ರಪಂಚದಲ್ಲಿ ನಾವು ಬದುಕಬೇಕು. ಅಂದರೆ ಈ ಸರ್ಕಾರ......

ಅಧ್ಯಕ್ಷರು.—ತಾವು ವಿಷಯಕ್ಕೆ ಬನ್ನಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ವಿಷಯಕ್ಕೆ ಬಂದಿಲ್ಲವೆ ?

ಶ್ರೀ ಬಿ. ಆರ್. ನೀಲಕಂಠಪ್ಪ.—ಅವರು ಚರ್ಚೆ ಮಾಡುತ್ತಿಲ್ಲ.

ಅಧ್ಯಕ್ಷರು.—ಸ್ವಾಮಿ ತಾವು ಕುಳಿತುಕೊಳ್ಳಿ, ಮಾನ್ಯ ವೀರಪ್ಪನವರೆ, ತಾವು ಮಾತನಾಡಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಒಂದೇ ಒಂದು ಮಾತು......

ಅಧ್ಯಕ್ಷರು.—ಎಷ್ಟು ಸಾರಿ ಹೇಳ್ತೀರಿ ? ಕುಳಿತುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—೯೨.೨೭ ಕೋಟಿ ರೂಪಾಯಿಗಳ ನಿವ್ವಳ ಹಣ ಏನಿದೆ ಇದು ಬಹಳ ದೊಡ್ಡ ಮೊತ್ತ. ಇದು ಹಗುರವಾಗಿ ಕಾಣತಕ್ಕದ್ದಲ್ಲ. This is the largest amount, largest net outgo ಇಷ್ಟು ನಿವ್ವಳವಾದ ಪೂರಕ ಡಿಮ್ಯಾಂಡನ್ನು ಏನು ಮಂಜೂರಂ ಮಾಡುತ್ತಿದ್ದೇವೆ ಇದು ಕರ್ನಾಟಕದ ಪರಿಸ್ಥಿತಿ ನೋಡಿದರೆ ಬಹಳ ದೊಡ್ಡ ಮೊತ್ತ. ಇದರ ಐಟಂ ಗಳನ್ನು ತಾವು ನೋಡಿ. ಸನ್ಮಾನ್ಯ ಲಕ್ಷ್ಮೀಸಾಗರ್ ಅವರು ಪ್ರಾಮಾಣಿಕತನದಿಂದ ಹೇಳಿದರು. ಯಾವ ಖರ್ಚನ್ನು ನಾವು ನಿರೀಕ್ಷೆ ಮಾಡಿರುವುದಿಲ್ಲ, ಯಾವುದು ನಮ್ಮ ದೂರದರ್ಶಿತ್ವದ ಅಥವಾ ನಮ್ಮ ಜಾಣ್ಮೆಯ ಪರಿಧಿಯಿಂದ ಹೊರಗಿರುತ್ತದೆ ಅಂಥ ಸಂದರ್ಭದಲ್ಲಿ ಪೂರಕ ಬೇಡಿಕೆಗಳನ್ನು ಮಂಡಿಸ ಬೇಕಾಗುತ್ತದೆ ಎಂದು ಬಹಳ ಚೆನ್ನಾಗಿ ಹೇಳಿದರು. ನನಗನ್ನಿಸುತ್ತದೆ, ಅವರ ಜಾಣ್ಮೆ ದೂರದರ್ಶಿತ್ವದ ಪರಿಧಿ ಬಹಳ ಒಳ್ಳೆಯದು. It is very close to their chest, very transparent. ಅವರ ದೂರದರ್ಶಿತ್ವದ ಡಿಗ್ರಿ ಇದರಲ್ಲಿ ಸ್ಪಷ್ಟವಾಗಿ ಅರ್ಥವಾಗುತ್ತದೆ.

ಏಕೆಂದರೆ ಒಂದೇ ಒಂದು ಐಟಂ ತೆಗೆದುಕೊಳ್ಳಿ. ಪೇಜ್ ೮೦. ಜಿಲ್ಲಾ ಪರಿಷತ್ತು ಹಾಗೂ ಮಂಡಲ್ ಪಂಚಾಯಿತಿಗಳಿಗೆ ಚುನಾವಣೆಗಳನ್ನು ನಡೆಸಬೇಕೆಂದು ಇವರು ನಿರೀಕ್ಷೆ ಮಾಡಿರಲಿಲ್ಲವೆ ? ಅದಕ್ಕಾಗಿ ೩.೧೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಜಿಲ್ಲಾ ಪರಿಷತ್ತಿನ ಬಗ್ಗೆ ಯಾವಾಗಲೂ ಹೇಳುತ್ತಿರುತ್ತಾರೆ ನಮ್ಮ ಮಂತ್ರಿಗಳು. ಹಾಗಾದರೆ ಅವರಿಗೆ ದೂರದರ್ಶಿತ್ವ ಇರಲಿಲ್ಲವೆ ? ಇಷ್ಟೆಲ್ಲಾ ಸಿದ್ಧಾಂತದ ಬಗ್ಗೆ ಮಾತನಾಡತಕ್ಕ ನಮ್ಮ ಗ್ರಾಮೀಣ ಅಭಿವೃದ್ಧಿ ಮಂತ್ರಿಗಳಿಗೆ ಚುನಾವಣೆಯನ್ನು ೧೯೮೬–೮೭ರಲ್ಲಿ ಅಂಬೇಕೆಂಬ ತಿಳುವಳಿಕೆ ಇವರಿಗೆ ಇರಲಿಲ್ಲವೆ ? ಇಷ್ಟು ಅವರ ತಲೆಗೆ ಹೊಳೆದಿರಲಿಲ್ಲವೇ ?

ಶ್ರೀ ಆರ್. ಎನ್. ನಾಯಕ್.—ಬಂಡೆ ಸರ್ಕಾರ ಇದ್ದ ಹಾಗೆ.

ಅಧ್ಯಕ್ಷರು.—ಅದು ಅನ್‌ಪಾರ್ಲಿಮೆಂಟರಿ ಆಗುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಬಂಡೆ ಸರ್ಕಾರ ಎಂದು ಅವರು ಹೇಳುತ್ತಾರೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಬಂಡೆ ಹಾಗೆ ಇರುವ ಸರ್ಕಾರ ಬಂಡೆ ಸರ್ಕಾರ.

ಶ್ರೀ ಎಂ. ವೀರಪ್ಪಮೊಯಿಲಿ.—ಬಂಡರ ಸರ್ಕಾರ ಬಂಡೆ ಸರ್ಕಾರ ಎಂದು ಶ್ರೀಮಾನ್ ನೀಲಕಂಠಪ್ಪನವರು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಯಾವ ಸರ್ಕಾರವೂ ಅಂಥದ್ದು ಅಲ್ಲ. ಎಲ್ಲರದ್ದೂ ಪ್ರಜೆಗಳ ಸರ್ಕಾರ. ಈಗ ತಾವು ಮಾತನಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.—ಆ ರೀತಿ ಶ್ರೀಮಾನ್ ನೀಲಕಂಠಪ್ಪನವರು ಹೇಳಿದರು. ಅದನ್ನು ಅವರು ಮೊದಲು ತಿದ್ದಿಕೊಳ್ಳಲಿ.

ಅಧ್ಯಕ್ಷರು.—ಅವರು ತಪ್ಪು ಮಾಡಿದ್ದಾರೆ ಎಂದು ನಾವೂ ನೀವೂ ಮಾತನಾಡುವುದು ಬೇಡ. ಅವರು ಹೊಸಬರು.

ಶ್ರೀ ಎಂ. ವೀರಪ್ಪಮೊಯಿಲಿ.—ನಮ್ಮದೇನಾದರೂ ಸ್ವಲ್ಪ ತಪ್ಪಾಗಿದ್ದರೆ ನಡೆಯುತ್ತದೆ. ಆದರೆ ಸರ್ಕಾರ ನಡೆಸುವವರೇ ಬಂಡೆ ಸರ್ಕಾರ ಬಂಡರ ಸರ್ಕಾರ ಎಂದು ಹೇಳಿಬಿಟ್ಟರೆ ಸರಿ ಹೋಗುವುದಿಲ್ಲ. ಅವರು ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಅಧ್ಯಕ್ಷರು.—ಅವರು ಹೇಳಿರುವುದೂ ಸರಿಯಲ್ಲ. ನೀವು ಹೇಳುವುದೂ ಸರಿಯಲ್ಲ.

ಶ್ರೀ ಆರ್. ಎನ್. ನಾಯಕ್.—ನಾನು ಹೇಳಿದ್ದುದ್ದು ಸರಿಯಾಗಿಯೇ ಇದೆ. ಬಂಡೆಯಂತೆ ಇರುವ ಸರ್ಕಾರ ಬಂಡೆ ಸರ್ಕಾರ ಎಂದು ಹೇಳಿದ್ದೇನೆ.

ಅಧ್ಯಕ್ಷರು.—ತಾವು ವಿಷಯದ ಮೇಲೆ ಮಾತನಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ತೀರ್ಮಾನಕ್ಕೆ ನಾನು ಹೋಗುವುದಿಲ್ಲ. ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾಪರಿಷತ್ತಿಗೆ ಚುನಾವಣೆಯನ್ನು ೧೯೮೬–೮೭ನೇ ಇಸವಿಯಲ್ಲಿ ಮಾಡತಕ್ಕ

ಆಲೋಚನೆ ಇವರಿಗೆ ಇರಲಿಲ್ಲವೆ ? ಹಾಗಾದರೆ ಹೊಸದಾಗಿ ಯಾವಾಗ ಈ ಆಲೋಚನೆ ಬಂತು ? ಯಾವ ತಿಂಗಳಲ್ಲಿ ಬಂತು ? ಯಾವ ದಿವಸದಲ್ಲಿ ಬಂತು ? ಇವರ ದೂರದರ್ಶಿತ್ವ ಯಾವಾಗ ಹೊಳೆಯಿತು ? ಮಂಡಲ್ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ಚುನಾವಣೆಯನ್ನು ನಡೆಸಿ ಎಂದು ಯಾವಾಗ ಅಶರೀರವಾಣಿ ಬಂತು ? ಒಂದೊಂದು ಸಾರಿ ಇವರ ದೂರದರ್ಶಿತ್ವ ಎಷ್ಟು ಇದೆ ಎಂಬುದನ್ನು ಹೇಳುವುದಾದರೆ ಸರ್ಕಾರದ ದೂರದರ್ಶಿತ್ವ ಶೂನ್ಯ ಎಂದು ಹೇಳುವುದಕ್ಕೆ ಇದು ಒಂದೇ ನಿದರ್ಶನ ಸಾಕು.

ಎರಡನೆಯದಾಗಿ, ಇದನ್ನು ವರ್ಕ್‌ಔಟ್ ಮಾಡಿದರೆ ಇದರಲ್ಲಿ ೩.೦೫ ಕೋಟಿ ರೂಪಾಯಿಗಳ ಅನವಶ್ಯಕ ಖರ್ಚು ಇದರಲ್ಲಿ ಸೇರಿದೆ. ಒಂದೇ ಸಾರಿ ಚುನಾವಣೆಯನ್ನು ಮಾಡಬಹುದಾಗಿತ್ತು. They could have easily saved one and a half crores of rupees. ಒಂದೇ ಸಾರಿ ಚುನಾವಣೆಯನ್ನು ಮಾಡಿ ಇಷ್ಟು ಹಣವನ್ನು ಉಳಿಸಬಹುದಾಗಿತ್ತು. ಏಕೆಂದರೆ ಸ್ವೇಚ್ಛಾನುಸಾರವಾಗಿ ಖರ್ಚು ಮಾಡಿರತಕ್ಕ ಪೂರಕ ಡಿಮ್ಯಾಂಡ್ ಇದು. ಪೊಲಿಟಿಕಲ್ ಕನ್ಸಿಡರೇಷನ್ ಮೇಲ ಮಾಡಿರತಕ್ಕದ್ದು. ಕರ್ನಾಟಕ ರಾಜ್ಯದ ಹಿತಾಸಕ್ತಿ ಅಲ್ಲ. ಎರಡು ಸಾರಿ ಚುನಾವಣೆ ಮಾಡಿದ್ದಾರೆ ? ಎರಡು ಸಾರಿ ಚುನಾವಣೆಯನ್ನು ಮಾಡುವುದರಲ್ಲಿ ಕರ್ನಾಟಕ ರಾಜ್ಯದ ಹಿತಾಶಕ್ತಿ ಎಲ್ಲಿದೆ ? ಜನತೆಯ ಹಿತಾಶಕ್ತಿ ಎಲ್ಲಿದೆ ? ಅದೇ ಹಣವನ್ನು ಉಳಿಸಿ ಜಿಲ್ಲಾಪರಿಷತ್ತು ಹಾಗೂ ಮಂಡಲ್ ಪಂಚಾಯಿತಿ ಸಿಬ್ಬಂದಿ ಆದ ಮೇಲೆ ಅದರ ಮೇಲೆ ಖರ್ಚು ಮಾಡಬಹುದಾಗಿತ್ತು. ಇದನ್ನು ವಿಶ್ಲೇಷಣೆ ಮಾಡುವುದರಲ್ಲೂ ಬಹಳ ಜಾಣ್ಮೆಯಿಂದ ಮಾಡಿದ್ದಾರೆ. ಏಕೆಂದರೆ ಈ ಪ್ರಶ್ನೆಯೆಲ್ಲಾ ಬರುತ್ತದೆ, ಇದು ವ್ಯಾಪಕವಾಗಿ ಚರ್ಚೆಯಾದರೆ ಇವರ ಬಂಡವಾಳವೆಲ್ಲಾ ಹೊರಗೆ ಬರುತ್ತದೆ ಎಂದು ಹೇಳಿ ಈ ಒಂದು ಚರ್ಚೆಯನ್ನು ಮಾಡಲಿಕ್ಕೆ ಅವಕಾಶವನ್ನೇ ಮಾಡಿಕೊಡಬಾರದು, ಎಂದು ಬಹಳ ಅವಸರವಾಗಿ ಒಂದು ನಿಮಿಷ ಕೂಡ ಕಾಯದೆ they have spent surreptiously, which they have spent without any foresight, and which they have spent with deliberate intention to achieve their political objectives. ಅದು ಅಲ್ಲದೇ ಬೇರೆ ಯಾವುದೂ ಇಲ್ಲ ಅಧ್ಯಕ್ಷರೇ, ಇದನ್ನು ದೇಶದ ಜನರಿಗೆ ಕೊಡಬಹುದಿತ್ತು. ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನು ಬದಲಾವಣೆ ಮಾಡಬಹುದಿತ್ತು. ಇದೇ ಹಣವನ್ನು ರೈತರಿಗೆ ಖರ್ಚು ಮಾಡಬಹುದಾಗಿತ್ತು. ಅದು ಯಾವುದನ್ನೂ ತಾವು ಮಾಡಿಲ್ಲ. They could have easily saved one and a half crores of rupees ಅಧ್ಯಕ್ಷರೇ, ಮತ್ತೊಂದು ಸುಮಾರು ೫೦ ಲಕ್ಷ ರೂಪಾಯಿಗಳನ್ನು ಇದರಲ್ಲಿ ಪುನಃ ಕೇಳಿದ್ದಾರೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಪ್ರತಿನಿಧಿಗಳ ಸಮ್ಮೇಳನಕ್ಕೆ ೫೦ ಲಕ್ಷ ರೂಪಾಯಿಗಳು. ಇದರಲ್ಲಿ ಎಷ್ಟು ಖರ್ಚುಮಾಡಿದ್ದೀರಿ ? ೫೦ ಲಕ್ಷ ರೂಪಾಯಿಗಳನ್ನು ಏಕೆ ಖರ್ಚು ಮಾಡಬೇಕಾಗಿತ್ತು ? ಅದು ಕೂಡಾ ಅನುದಾನ ಎಂದು ಮತ್ತೊಂದು ಸಪರೇಟಾಗಿ ಇದೆ. ಇವತ್ತು ೫೦ ಲಕ್ಷ ರೂಪಾಯಿಗಳು that means 2 crores I will come to that. ೨ ಕೋಟಿ ರೂಪಾಯಿ ಕಡಿಮೆ ಇದೆ. ಇನ್ನೊಂದು ಐಟಂ ಇದೆ. ೫೦ ಲಕ್ಷ ರೂಪಾಯಿದ್ದು ಇನ್ನೊಂದು ಕಡೆ ಇದೆ. ಒಟ್ಟಿಗೆ ಅದನ್ನು ಸೇರಿಸಿಲ್ಲ. ಇನ್ನೊಂದು, ೫೦ ಲಕ್ಷ ರೂಪಾಯಿಗಳನ್ನು ವಾರ್ತಾ ಇಲಾಖೆಯಲ್ಲಿ ಸೇರಿಸಿದ್ದಾರೆ. ಇದರಲ್ಲಿ ೨ ಕೋಟಿ ದುಂದುವೆಚ್ಚವನ್ನು ಈ ಸರ್ಕಾರ ಮಾಡಿದೆ. ಜನತೆಯ ಮತ್ತು ರೈತರ ಬಗ್ಗೆ ನಿಮಗೆ ಆಸಕ್ತಿ ಇಲ್ಲ ಎಂಬುದಕ್ಕೆ ಇದಕ್ಕಿಂತಲೂ ದೊಡ್ಡ ಸಾಕ್ಷಿ ಮತ್ತೊಂದು ಇಲ್ಲ. ಒಂದು ಐಟಮ್‌ನಲ್ಲಿ ವಾರ್ತಾ ಇಲಾಖೆಗೆ ಖರ್ಚು ಮಾಡಿದ್ದು ಎಂದು. ಹೇಳಿ, ವಾರ್ತಾ ಇಲಾಖೆಗೆ ಪ್ರಚಾರಕ್ಕೆ ಖರ್ಚು ಮಾಡಿದ ಒಂದು ಐಟಮ್‌ನ್ನು ಇದರಲ್ಲಿ ಕಾಣಿಸಿದ್ದೀರಿ. ಅದು ೫೦ ಲಕ್ಷ ರೂಪಾಯಿಗಳು. ಏನೆಂದರೆ. ಜಿಲ್ಲಾ ಪರಿಷತ್ ಬಗ್ಗೆ ಪ್ರಚಾರ. ಬರೀ ಪ್ರಚಾರಕ್ಕಾಗಿಯೇ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಆದರೆ ಪ್ರಚಾರ ಯಾರಿಗೆ ಅಧ್ಯಕ್ಷರೇ ? ಯಾರಿಗೆ ಪ್ರಚಾರ ಸಿಕ್ಕುವುದು ? ಬರೀ ಒಂದು ರಾಜಕೀಯ ಪಕ್ಷಕ್ಕೆ, ಅಧಿಕಾರದಲ್ಲಿರತಕ್ಕ ಪಕ್ಷಕ್ಕೆ ಪ್ರಚಾರ. ಪೂರಕ ಅಂದಾಜುಗಳ ೯೪ನೇ ಪುಟದಲ್ಲಿ ೨೭ನೇ ಬೇಡಿಕೆ ಸಂಖ್ಯೆ ಕೆಳಗೆ ಗೌರ್ನಮೆಂಟ್ ಆರ್ಡರ್‌ನ ಲಿಸ್ಟ್ ಕೊಟ್ಟಿದ್ದೀರಿ. ಅದರಲ್ಲಿ ನೀವು ವಾರ್ತಾ ಇಲಾಖೆಯ ಲೆಕ್ಕ ಶೀರ್ಷಿಕೆ ಕೆಳಗೆ "೨೮೫. ವಾರ್ತಾ ಮತ್ತು ಪ್ರಚಾರ-೨, ಜಾಹೀರಾತು ಮತ್ತು ವೀಕ್ಷಣಾ ಪ್ರಚಾರ-೫, ಪಂಚಾಯತ್ ರಾಜ್ ಬಗ್ಗೆ ಪ್ರಚಾರ (ಯೋಜನೇತರ) ಎಂದು ಕೊಟ್ಟಿದೀರಿ. ಇದರಲ್ಲಿ ಯಾವುದು ಅದಕ್ಕೂ ಇದಕ್ಕೂ ಸೇರಿ ಕಂಪೇರ್ ಮಾಡಿದರೆ ನಮಗೆ ಗೊತ್ತಾಗುತ್ತಾ ಇಲ್ಲ ; ಪೇಜ್ ೨೯ರಲ್ಲಿ

ಕೊಟ್ಟಿದ್ದೀರಿ. ಅದರಲ್ಲಿ ಒಟ್ಟು ನೀವು ಜಾಹಿರಾತು ಬಗ್ಗೆ ಕೊಟ್ಟಿರುವ ಹಣದ ಬಗ್ಗೆ ನೋಡಿದರೆ, ಪೇಜ್ ೯೪ರಲ್ಲಿ ಕೊಟ್ಟಿರುವುದನ್ನು ಕಂಪೇರ್ ಮಾಡಿ ನೋಡಿದರೆ we don't find that entry ೩೩ ಲಕ್ಷ ೨೪ ಸಾವಿರ ರೂಪಾಯಿಗಳಿಗೆ ಮಾತ್ರ ಅಲ್ಲಿ ಡೀಟೇಲ್ಸ್ ಕೊಟ್ಟಿದ್ದೀರಿ. ಹಾಗೂ ಪೇಜ್ ೯೪ ಪ್ರಕಾರ ೯೫ ಲಕ್ಷ ೯೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಅದರಲ್ಲಿ 'ವಾರ್ತಾ ಮತ್ತು ಪ್ರಚಾರ–೨ ಜಾಹಿರಾತು ಮತ್ತು ವೀಕ್ಷಣಾ ಪ್ರಚಾರ ಎಂದು ಹೇಳಿದ್ದೀರಿ. ಹಾಗೂ ಪಂಚಾಯತ್ ಬಗ್ಗೆ ಪ್ರಚಾರ ಎಂದು ಹೇಳಿದ್ದೀರಿ. Is it their case that they have spent Rs. 95.90 lakhs for the purpose of publicity in connection with Zilla Parishad and Mandal Panchayats ? ಇದಕ್ಕಿಂತಲ್ಲೂ ದುಂದು ವೆಚ್ಚದ ಪ್ರಚಾರ ಎಲ್ಲಿಯದು ? What kind of publicity you have done ? You have got to place all those details. ನಮಗೆ ಈ ಬಗ್ಗೆ ಲೆಕ್ಕ ಬೇಕಾಗುತ್ತದೆ. ನಾನ್ ಪ್ಲಾನ್‌ನಲ್ಲಿ ೯೫,೯೦,೦೦೦ ರೂಪಾಯಿಗಳನ್ನು ಪಂಚಾಯತ್ ರಾಜ್ ಬಗ್ಗೆ ಪ್ರಚಾರಕ್ಕೆ ತೆಗೆದುಕೊಂಡಿದ್ದೀರಿ. ನಾವೇನು ಇದನ್ನೆಲ್ಲಾ ಕಣ್ಣು ಮುಚ್ಚಿಕೊಂಡು ಪಾಸ್ ಮಾಡಬೇಕೇ ? ಪತ್ರಿಕೆಗಳಿಗೆ ಜಾಹಿರಾತು ಕೊಟ್ಟರೂ ಇಷ್ಟು ಹಣ ಖರ್ಚಾಗುವುದಿಲ್ಲ.

You have spent nearly One crore Rupees on the publicity about Panchayat Raj. But in Demand No. 27 it is shown as Rs. 1,000/- only. You have issued a Government Order No. 44 DCF. 86 dated : 29-9-1986. Please clarify on this point, otherwise it is again an instance of spendthrift ಇದಕ್ಕೆ ಸ್ಪಷ್ಟೀಕರಣ ಇದ್ದರೆ ದಯವಿಟ್ಟು ಕೊಡಿ. ಇಲ್ಲದಿದ್ದರೆ ಇದು ದುಂದುವೆಚ್ಚದ ಪರಮಾವಧಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿರತಕ್ಕ ಯಾವುದೇ ಸರ್ಕಾರ ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಹಿಟ್ಲರ್ ಕಾಲದಲ್ಲಿ ಗೋಬೆಲ್ ಎಂಬುವನು ಇನ್‌ಫರ್ಮೇಶನ್ ಮಿನಿಸ್ಟರ್ ಆಗಿದ್ದಾಗ ಅಧಿಕಾರ ಚಲಾಯಿಸಿದ್ದಾನೆ. ಇದು ಆ ರೀತಿ ಹಿಟ್ಲರ್ ರಾಜ್ಯವಾಗಿದೆ ನಿಮಗೆ ಹೇಳುವವರು ಕೇಳುವವರು ಯಾರಿದ್ದಾರೆ ? Please clarify on this point. Otherwise it will be most irregular. Are we expected to pass this blindly ?

ಇದಕ್ಕೇ ಹೇಳುವುದು ಶಾಸಕರು ಪುಸ್ತಕವನ್ನು ನೋಡುವುದಿಲ್ಲ. ಶಾಸನವನ್ನು ನೋಡದೆ ಪಾಸ್ ಮಾಡುತ್ತಾರೆಂದು ಹೇಳುವುದಕ್ಕೆ ಇದೊಂದು ಉದಾಹರಣೆಯನ್ನು ಜನತೆಗೆ ತೋರಿಸಬೇಕೆ ? ದಯವಿಟ್ಟು ಹೇಳಿ. ೯೫ ಲಕ್ಷದ ೯೦ ಸಾವಿರ ರೂಪಾಯಿ ಸುಮಾರು ೧ ಕೋಟಿ ರೂಪಾಯಿಗಳನ್ನು ಪಂಚಾಯತ್ ರಾಜ್ ಪ್ರದರ್ಶನದ ವೈಭವವನ್ನು ಈ ದೇಶಕ್ಕೆ ಜನತೆಗೆ ಹೇಳಲಿಕ್ಕೆ ಖರ್ಚು ಮಾಡಿದ್ದೀರಿ.

One and half crores plus 80 lakhs plus Rs. One crore totalling to 4½ crores. You have spent in total 4½ crores on this account. This is culpably an open dacoity committed by this Government against the people of this tate only on this single item. ಮಾನ್ಯ ಸದಸ್ಯರಾದ ವೀರಯ್ಯಸ್ವಾಮಿಯವರು ಜಿಲ್ಲಾಪರಿಷತ್ ಮತ್ತು ಪಂಚಾಯತ್ ರಾಜ್ ಸಮ್ಮೇಳನಕ್ಕೆ ಎಷ್ಟು ಹಣ ಖರ್ಚಾಗಿದೆ ಎಂದು ಪ್ರಶ್ನೆ ಕೇಳಿದ್ದಕ್ಕೆ ೧ ಕೋಟಿ ರೂಪಾಯಿ ಖರ್ಚಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಈಗ ಇಲ್ಲಿ ೫೦ ಲಕ್ಷ ಎಂದು ಹೇಳಿದ್ದಾರೆ. This reply is on record. Under Demand No. 58, you have shown the expenditure for the "Sammelan" as 50 lakhs where as in an answer to the question of hon'ble Member Sri Veerayya Swamy, you have stated the expenditure as Rs. One crore. So, another 50 lakhs means, 4½ crores plus 50 lakhs, which means that it comes to 5 crores ಇವತ್ತು ಸರ್ಕಾರದ ಖಜಾನೆಯಿಂದ ೫ ಕೋಟಿ ರೂಪಾಯಿಗಳನ್ನು ದರೋಡೆ ಮಾಡಲಾಗಿದೆ. ವಿಶೇಷ ಪ್ರಚಾರ ಆಂದೋಳನಕ್ಕಾಗಿ ೯೫ ಲಕ್ಷದ ೯೦ ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ. ಭಿತ್ತಿ ಚಿತ್ರಗಳು ತಲಾ ೫೦ ಸಾವಿರ

ಪ್ರತಿಗಳನ್ನು ಕೊಟ್ಟಿದ್ದಾರೆ. ಹ್ಯಾಂಡ್‌ಬಿಲ್‌ಗಳು ೫ ಲಕ್ಷ, ಕರಪತ್ರಗಳು, ಗುರಿನಂಡಿಗಳು ಪ್ರತಿ ವಿಷಯದಲ್ಲಿ ೧೦ ಸಾವಿರ ಪ್ರತಿಗಳು. ಸಿನಿಮಾ ಸ್ಲೈಡ್‌ಗಳು, ಜಿಲ್ಲಾಪರಿಷತ್ ಮತ್ತು ಪಂಚಾಯತ್‌ರಾಜ್ ಕುರಿತು ಸಚಿತ್ರ ಪುಸ್ತಕಗಳು ೫೦ ಸಾವಿರ. ಹೆದ್ದಾರಿಗಳನ್ನು ೪೦ ನಿರ್ಮಾಣ ಮಾಡಲಾಗಿದೆ. ಟಿನ್ ಬೋರ್ಡ್ ನಿರ್ಮಾಣ ಮಾಡಲಾಗಿದೆ ಅದಕ್ಕೆ ೯೫ ಲಕ್ಷ. ಒಟ್ಟು ಇವರು ವೆಚ್ಚ ಮಾಡಿರತಕ್ಕದ್ದು ೧ ಕೋಟಿ ರೂಪಾಯಿ. This huge sum which has been spent on Zilla Parishads and Mandal Panchayats would have otherwise been spent on the farmers and other developmental works.

೬-೦೫ ಪಿ. ಎಂ.

ಇದಕ್ಕೆ ಏನು ಹೇಳುತ್ತೀರಿ ? It is misleading the House. ಒಂದು ಕೋಟಿ ಕಣಕೊಟ್ಟು ಜಿಲ್ಲಾಪರಿಷತ್ ಸಮ್ಮೇಳನ ಆಗಿದೆಯೆಂದು ಹೇಳಿದ್ದೀರಿ. ಇಲ್ಲಿ ೫೦ ಲಕ್ಷವೆಂದು ಹೇಳಿದ್ದೀರಿ. How are you going to explain ? ಇನ್ನು ಇದರ ಮೇಲೆ ರಿವೈಸ್ಡ್ ಎಸ್ಟಿಮೇಟ್ ಎಷ್ಟು ಬರುತ್ತದೆ ಎಂದು ನೋಡಬೇಕು. ಇನ್ನೂ ಅನೇಕ ಬಿಲ್ಲುಗಳು ಸೆಟಲ್ ಆಗಿಲ್ಲ. ಒಂದೊಂದು ತಾಲ್ಲೂಕಿನಿಂದ ಹದಿನೈದು, ಕೆಲವು ಇಪ್ಪತ್ತು ಬಸ್ಸುಗಳು, ಪ್ರೈವೇಟ್ ಟೂರಿಸ್ಟ್ ಬಸ್ಸುಗಳು ಬಂದಿವೆ ನನಗೆ ತಿಳಿದ ಮಟ್ಟಿಗೆ ಈ ಹಣವನ್ನು ಅವರಿಗೆ ಸಂದಾಯ ಮಾಡಿಲ್ಲ. ಈ ಬಿಲ್‌ಗಳು ಬರಲಿಲ್ಲ. ಇದು ಎಷ್ಟು ಬರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಆದ್ದರಿಂದ ಅಧ್ಯಕ್ಷರೇ ಈ ಐಟಮ್‌ಗಳನ್ನೆಲ್ಲಾ ಮುಂದಿಟ್ಟುಕೊಂಡು, ೯೨ ಕೋಟಿ ರೂಪಾಯಿಗಳಲ್ಲಿ ಕೂಡ ಸ್ಪಷ್ಟೀಕರಣ ಮಾಡಬೇಕಾಗಿದೆ, ಇದರಲ್ಲಿ ನಾನ್‌ಪ್ಲಾನ್‌ನಲ್ಲಿ ಎಷ್ಟು ಮತ್ತು ಪ್ಲಾನ್‌ನಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ? ಟೋಟಲ್ ಹೇಳಿ. Please furnish the total to enlighten the Members. ಆ ವಿವರಗಳು ಎಲ್ಲಿವೆ ? ನಮಗೆ ಅವಕಾಶವನ್ನೇ ಕೊಡಲಿಲ್ಲ. ಒಂದೇ ನಿಮಿಷದಲ್ಲಿ ಪಾಸ್ ಮಾಡಿಸಿಕೊಂಡು ಹೋಗಿಬಿಟ್ಟಿರಿ. ನಾವು ಎಲ್ಲಿಂದ ಲೆಕ್ಕ ಮಾಡುವುದು ? ನಮ್ಮ ಹತ್ತಿರ ಕಂಪ್ಯೂಟರ್ ಇಲ್ಲ. ಈ ಪುಸ್ತಕ ನನಗೆ ಸಿಕ್ಕಿದ್ದು ಇಲ್ಲಿಯೇ, ಮೊದಲೆ ಸಿಕ್ಕಿದ್ದರೆ ಮನೆಯಲ್ಲಿ ಆದರೂ ಲೆಕ್ಕಹಾಕಿಕೊಂಡು ಬರಬಹುದಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ತಲೆಯೇ ಕಂಪ್ಯೂಟರ್ ಇದ್ದ ಹಾಗೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಆಯಿತು. ಇದರಲ್ಲಿ ನಾನ್‌ಪ್ಲಾನ್ ಎಷ್ಟು ಮತ್ತು ಪ್ಲಾನ್ ಎಷ್ಟು ? ಇದರಲ್ಲಿ ಡೆವಲಪ್‌ಮೆಂಟ್ ಎಷ್ಟು ನಾನ್ ಡೆವಲಪ್‌ಮೆಂಟ್ ಎಷ್ಟು ? We are entitled to know about it. Let the House know about it. ನನಗೆ ತಿಳಿದ ಪ್ರಕಾರ ನಾನ್‌ಪ್ಲಾನ್ ಐಟಮ್‌ಗಳೇ ಜಾಸ್ತಿ. ನಾನ್‌ಡೆವಲಪ್‌ಮೆಂಟ್ ಐಟಮ್‌ಗಳೇ ಜಾಸ್ತಿ. ಡೆವಲಪ್‌ಮೆಂಟ್‌ಗೆ ಸಪ್ಲಿಮೆಂಟರಿ ಡಿಮಾಂಡ್‌ನ್ನು ಇಟ್ಟುಕೊಂಡು ಕೊಟ್ಟಿದ್ದರೆ ಶಹಭಾಸ್ ಎನ್ನಬಹುದಿತ್ತು. ತಾವು ಕರ್ನಾಟಕ ರಾಜ್ಯವನ್ನು ಕಟ್ಟುವುದಕ್ಕೆ, ಆರ್ಥಿಕವಾಗಿ ಬಡವರಿಗೆ ಸಹಾಯ ಮಾಡಲಿಕ್ಕೆ ಹೊರಟಿದ್ದೀರಿ ಎನ್ನಬಹುದಿತ್ತು. ೨-೩ ಐಟಮ್ ರೈತರಿಗೆ ಕೊಟ್ಟಿದ್ದು ಇದರಲ್ಲಿ ಇದೆ, ಇಲ್ಲವೆಂದು ಇಲ್ಲ. ಆದರೆ ರೈತರಿಗೆ ಕೊಟ್ಟಿದ್ದು ಎಷ್ಟು ? ನಮ್ಮ ರೈತರ ಹೆಸರಿನಲ್ಲಿ ಒಂದು ಐಟಮ್ ಹೇಳುತ್ತೀರಿ. ಇದನ್ನು ರೈತರ ಹೆಸರಿಗೆ ಹಾಕಬೇಡಿ. You must have given to some institute. ಅಧ್ಯಯನಕ್ಕೆ ಕೊಟ್ಟಿದ್ದೀರಿ. ೩೦ ಲಕ್ಷ ರೂಪಾಯಿಗಳನ್ನು ಸಾಲ ನೀಡಿಕೆ ಬಗ್ಗೆ ಯೋಜನಾ ದೃಷ್ಟಿಯ ಅಧ್ಯಯನ ಎಂದಿದೆ, ಸಹಕಾರ ಸಂಸ್ಥೆಗಳು ಎಂದರೆ ರೈತರಿಗೆ ಸಿಗುತ್ತದೆಯೋ ಹೇಳಿ ? ಗ್ರಾಮಾಂತರ ಸಾಲ ನೀಡಿಕೆಯ ಬಗ್ಗೆ ಯೋಜನಾ ದೃಷ್ಟಿಯ ಅಧ್ಯಯನ ಎಂದರೆ, ಯಾವ ಏಜೆನ್ಸಿಗೆ ಹಣ ಕೊಟ್ಟಿದ್ದೀರಿ ? ಯಾರು ಅಧ್ಯಯನ ಮಾಡುತ್ತಿದ್ದಾರೆ, ಸ್ಟಡಿಟೂರ್‌ಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಾ ? ರೈತರಿಗೆ ೩೦ ಲಕ್ಷ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. It should not run in the name of the farmers. ೫೫ನೇ ಬೇಡಿಕೆಯಲ್ಲಿ ಬರುತ್ತದೆ. ಇದರ ಬಗ್ಗೆ ವಿವರಗಳು ಬೇಕಾಗುತ್ತವೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಬಾಕಿ ಮೊತ್ತವನ್ನು ಒಳಗೊಳ್ಳುವಂತೆ ಕೆ.ಎಸ್.ಎನ್.ಡಿ.ಎಲ್. ಬ್ಯಾಂಕಿಗೆ ಸಾಲ. ಅದನ್ನು ಸ್ವಲ್ಪ ದಯಮಾಡಿ ಹೇಳಿ. ಮತ್ತೊಂದು ಐಟಮ್ – ಈ ಸಣ್ಣ ಕೈಗಾರಿಕೆ ಮೇಲಿನ

ಬಂಡವಾಳ ವೆಚ್ಚ ಒಂದು ಕೋಟಿ ಎಂದು ಹೇಳಿದ್ದೀರಿ. ಯಾವುದಕ್ಕೆ ಎಂದು ದಯಮಾಡಿ ಹೇಳಿ. ಏಕೆಂದರೆ ಸಬ್ಸಿಡಿಯನ್ನು ಯಾರಿಗೂ ಕೊಟ್ಟಿಲ್ಲ. ಯಾರಿಗಾದರೂ ಕೊಟ್ಟಿದ್ದೀರಾ ?

ಆದರೆ ಯಾರಿಗೂ ತಾವು ಸಬ್ಸಿಡಿ ಕೊಟ್ಟಿಲ್ಲ. ಬ್ಯಾಕ್‌ವರ್ಡ್ ಡಿಸ್ಟ್ರಿಕ್ಟ್‌ನಲ್ಲಿ ಇಷ್ಟರವರೆಗೆ ಸಬ್ಸಿಡಿ ಕೊಟ್ಟಿಲ್ಲ. ಮಾರ್ಚಿ ೩೧ ರೊಳಗೆ ಸಬ್ಸಿಡಿ ಕೊಡುವ ಅಂದಾಜು ಇದೆಯೋ, ಅದಕ್ಕಾಗಿ ಹಣವನ್ನು ತೆಗೆದುಕೊಳ್ಳುತ್ತೀರಾ ? ಯಾವ ಬಾಬಿಗಾಗಿ ಈ ಹಣವನ್ನು ತೆಗೆದುಕೊಳ್ಳುತ್ತೀರಿ ಎಂಬುದನ್ನು ದಯಮಾಡಿ ಹೇಳಬೇಕಾಗಿದೆ.

ಇನ್ನು ಸಾಲ ನೀಡಿಕೆ ಸಹಕಾರ ಸಂಸ್ಥೆಗಳು, ಐಟಂ ನಂ. ೩೧ ಪೇಜ್ ೯೭. ರೈತರ ಹೆಸರಿನಲ್ಲಿ ಇರತಕ್ಕ ರಾಜ್ಯವಲಯ ಯೋಜನೆಗಳು, ಅಲ್ಪಾವಧಿ. ಮಧ್ಯಮಾವಧಿ (ಪರಿವರ್ತಿತ) ದೀರ್ಘಾವಧಿ ಸಾಲಗಳನ್ನು ನಿಷ್ಠೆಯಿಂದ ಮರು ಸಂದಾಯ ಮಾಡಿರುವುದಕ್ಕೆ ಪ್ರೋತ್ಸಾಹಕ ಬಡ್ಡಿಯ ಸಹಾಯಧನ (ಯೋಜನೇತರ) ಇದರ ಬಗ್ಗೆಯೂ ದಯಮಾಡಿ ಹೇಳಬೇಕು. ಇದರಲ್ಲಿ ಎರಡು ಕೋಟಿ ರೂಪಾಯಿಗಳು ಇದೆ. ಕೇಂದ್ರದವರು ಡ್ರಾಫ್ಟ್‌ನಲ್ಲಿ ಆ ಬಗ್ಗೆ ಪರಿವರ್ತನೆ ಮಾಡುವುದಕ್ಕೆ ಬಡ್ಡಿ ಹಣವನ್ನು ಎಷ್ಟು ಕೊಟ್ಟಿದ್ದಾರೆ, ರಿಸರ್ವಬ್ಯಾಂಕ್ ಅಡ್ಜಸ್ಟ್‌ಮೆಂಟ್ ಎಷ್ಟು ? It is a question of adjustment. ನಮಗೆ ಬೇಕಾದದು ಎಷ್ಟು ? ರೈತರಿಗೆ ಈ ೯೨ ಕೋಟಿ ರೂಪಾಯಿಗಳಲ್ಲಿ, I am referring net to the gross amout, I am referring to the not out go of Rs. 92 crores. ಏಕೆಂದರೆ ಕೇಂದ್ರದಿಂದ ಸಹಾಯಧನ ಅಥವಾ account adjust ಮಾಡತಕ್ಕಂಥದ್ದು ಬಿಟ್ಟು, ೯೨ ಕೋಟಿ ರೂಪಾಯಿಗಳಲ್ಲಿ ತಾವು ರೈತರಿಗೆ ಸಹಾಯಧನ ಎಷ್ಟು ಕೊಡುತ್ತೀರಿ ? ರೈತರಿಗೆ ಸಹಕಾರ ಮಾಡುವುದು ಇದ್ದರೆ, ಮುಕ್ತ ಕಂಠದಿಂದ ಒಪ್ಪಿಗೆಯನ್ನು ಕೊಡುತ್ತೇವೆ. ಇದನ್ನೂ ತಾವು ಹೇಳಬೇಕಾಗುತ್ತದೆ. ಏಕೆಂದರೆ, ರೂರಲ್ ಡೆವಲಪ್‌ಮೆಂಟ್‌ಗೆ ಎಷ್ಟು ಕೊಡುತ್ತೀರಿ ? ಎಸ್. ಸಿ. ಎಸ್. ಟಿ. ಮತ್ತು ಬಿ. ಸಿ. ಗುಂಪಿನವರಿಗೆ ಡೆವಲಪ್‌ಮೆಂಟ್‌ಗಾಗಿ ಈ ೯೨ ಕೋಟಿಯಲ್ಲಿ ಎಷ್ಟು ಹಣ ಹೋಗುತ್ತದೆ ? ಈ ಪೂರಕ ಬೇಡಿಕೆಗಳು, ಇವೆಲ್ಲಾ ಅನ್‌ಫೋರ್‌ಸೀನ್. ಈ ಅನ್‌ಫೋರ್‌ಸೀನ್‌ನಲ್ಲಿ ನಿಮ್ಮ ನಿರೀಕ್ಷೆಗೆ ಮೀರಿದಂಥ ಖರ್ಚಿನ ಐಟಂ ಯಾವುದು ಕಾಣುತ್ತದೆ. ದಯಮಾಡಿ ಇದನ್ನು ಹೇಳಿ. ಪೂರಕ ಡಿಮ್ಯಾಂಡ್ ಸದನದ ಮುಂದೆ ಇಟ್ಟಿದ್ದೀರಿ. ಇದು ಒಂದು ರೀತಿಯಲ್ಲಿ, it is an open day-light dacoity committed on the exchequer of the Government. ಇಷ್ಟು ಬಹಳ ಸ್ಪಷ್ಟವಾಗಿ ಮಾಡಿದ್ದೀರಿ. ಇದರಲ್ಲಿ ಸರ್ಕಾರದ ದೂರದರ್ಶಿತ್ವದ ಸಂಪೂರ್ಣ ಕೊರತೆ ಕಾಣುತ್ತದೆ. ಇದು ದುಂದು ವೆಚ್ಚದ ಪರಮಾವಧಿ ಇದನ್ನು ಈ ಸರ್ಕಾರ ಕೊಟ್ಟಿದೆ. This is the most misleading account which is submitted by them, and this is not the true state of affairs. ಮುಂದೆ ಅಕೌಂಟ್ಸ್‌ನ್ನು ಎ. ಜಿ. ಆಡಿಟ್ ಮಾಡಿದಾಗ, perhaps true light ಮುಂದೆ ಬರುತ್ತದೆ. ಸರ್ಕಾರದ ನೈಜ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಿಗೊತ್ತಿ, ಒಂದು ರೀತಿಯಲ್ಲಿ ಈ ಪೂರಕ ಅಂದಾಜನ್ನು ಸಭೆಯ ಮುಂದೆ, ಇಟ್ಟು, ಈ ಸದನಕ್ಕೆ ಒಂದು ರೀತಿಯಲ್ಲಿ ಪರದೆಯನ್ನು ಹಾಕಿ ಪಾಸ್ ಮಾಡಬೇಕೆಂದು ನಮ್ಮ ಮುಂದೆ ಇಟ್ಟಿದ್ದಾರೆ. ಇದಕ್ಕೆ ನನ್ನ ಸಂಪೂರ್ಣವಾದ ವಿರೋಧವನ್ನು ವ್ಯಕ್ತಪಡಿಸಿ, ನನಗೆ ಅವಕಾಶವನ್ನು ಕೊಟ್ಟಿದ್ದಕ್ಕೆ ವಂದನೆಗಳನ್ನು ಸಮರ್ಪಿಸಿ, ಮತ್ತು ಸರ್ಕಾರಕ್ಕೂ ವಂದನೆಗಳನ್ನು ಸಮರ್ಪಿಸಬೇಕು. ಏಕೆಂದರೆ ನನಗೆ ಮಾತನಾಡ ಬೇಕೆಂಬ ಇಚ್ಛೆ ಇಲ್ಲದಿದ್ದರೂ, ಬಹಳ ಸಂತೋಷವಾಗಿ, ವಿಶ್ವಾಸವಾಗಿ ನಾನು ಹೇಳಿದ್ದನ್ನು ಆಲಿಸಿದ್ದಾರೆ, ಅದಕ್ಕಾಗಿ ಸರ್ಕಾರಕ್ಕೂ ವಂದನೆ ಸಲ್ಲಿಸಿ ನನ್ನ ಮಾತಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೇ, ಈ ಪೂರಕ ಅಂದಾಜುಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಅರ್ಪಿಸಬೇಕಾಗಿದೆ. ಏಕೆಂದರೆ ನಾನು ತಮ್ಮ ಹತ್ತಿರ ಬಂದಿದ್ದೆ. ನಾನು ಬಂದಾಗ ತಾವು ಆಗಿ ಹೋಯಿತು, ನಾವು ಏನು ಮಾಡುವುದು ಎಂದು ಹೇಳಿದಿರಿ.

ಅಧ್ಯಕ್ಷರು.—ತಾವು ಇರಲಿಲ್ಲ, ನಾನು ಏನು ಮಾಡಲಿ ?

ಶ್ರೀ ಎಂ ಎಸ್. ಕೃಷ್ಣನ್.—ನಾನು ಇರಲಿಲ್ಲ. ಇವರು ವಾಕ್‌ಔಟ್ ಮಾಡಿದರು. ಅಷ್ಟರೊಳಗೆ ವ್ಯವಹಾರ ನಡೆದುಹೋಯಿತು. ಆದರೂ ಸಹ ದೊಡ್ಡ ಮನಸ್ಸು ಮಾಡಿ, ಇವರ

ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ, ಸಂತೋಷದ ವಿಷಯ. ಮೊದಲನೆಯ ಪ್ರಶ್ನೆ ಏನೆಂದರೆ, ಇದನ್ನು ನಾನೂ ಸಹ ಗಮನಿಸಿದ್ದೇನೆ. ನನ್ನ ಅನುಭವದಲ್ಲಿ ಇಷ್ಟು ದೊಡ್ಡ ಪ್ರಮಾಣದ ಮೊತ್ತವನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಹಿಂದೆ ಎಂದೂ ಕಂಡಹಾಗೆ ಇಲ್ಲ. ೯೨.೨೭ ಕೋಟಿ ರೂಪಾಯಿಗಳ ಗಾತ್ರದ್ದು ಹಿಂದೆ ಎಂದೂ ಆಗಿರಲಿಲ್ಲ ಎಂದು ನನ್ನ ಅನುಭವ. ಏಕೆ ಇಷ್ಟು ದೊಡ್ಡ ಮೊತ್ತ ಹೋಗುತ್ತದೆಂದು ನೋಡಿದೆ. ಇದರ ಬಗ್ಗೆ ಕೆಲವು ಅಂಶಗಳನ್ನು ಮಾನ್ಯ ಮೊಯ್ಲಿಯವರು ಮಾತನಾಡಿದ್ದಾರೆ.

ನಾನು ಅದನ್ನು ಪುಷ್ಟೀಕರಿಸಿ ಇಷ್ಟು ಮಾತ್ರ ಹೇಳುತ್ತೇನೆ, ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ಇದೇ ಸಮಯಕ್ಕೆ ಇನ್ನೂ ಎರಡು ಮೂರು ವಿಚಾರಗಳು ಇವೆ. ಅದರಲ್ಲಿ ಒಂದು ಏನೆಂದರೆ, ಈ ಪುಸ್ತಕದ ಪೇಜ್ ೧೧ ರಲ್ಲಿ, ಅಭಿಯಾಚನೆ ಕ್ರಮಸಂಖ್ಯೆ ೯ ರಲ್ಲಿ ಮುದ್ರಣ ಮತ್ತು ಲೇಖನಸಾಮಗ್ರಿ ಬಾಬಿನಲ್ಲಿ ಇರುವುದು ೮ ಕೋಟಿ ೬೬ ಲಕ್ಷ ಆದರೆ ತಾವು ಯೋಜನೇತರ ಬಾಬಿನಲ್ಲಿ ಕೇಳಿರುವುದು ೫೦ ಲಕ್ಷ ಮಾತ್ರ. ಈ ೫೦ ಲಕ್ಷಕ್ಕೆ ವಿವರಣಾತ್ಮಕ ಟಿಪ್ಪಣಿ ಏನಿದೆ ಎಂದರೆ, "ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗಳು ಮತ್ತು ಬೆಂಗಳೂರಿನಲ್ಲಿ ನಡೆದ ಸಾರ್ಕ್ ಸಮ್ಮೇಳನದ ಸಂಬಂಧದಲ್ಲಿ ಲೇಖನ ಸಾಮಗ್ರಿ ಮತ್ತು ಕಾಗದ ಖರೀದಿಯಿಂದ ಅಧಿಕ ವೆಚ್ಚ ಉಂಟಾಗಿದೆ" ಎಂದು ಹೇಳಿದ್ದಾರೆ ಇದೊಂದು ಬಹಳ ಆಶ್ಚರ್ಯಕರವಾದುದು, ಏತಕ್ಕೆಂದರೆ ಸಾರ್ಕ್ ಸಮ್ಮೇಳನಕ್ಕೆ ಆದ ವೆಚ್ಚ ಇನ್ನೊಂದು ಕಡೆ ಬರುತ್ತದೆ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗೆ ಆದ ವೆಚ್ಚವೂ ಇನ್ನೊಂದು ಕಡೆ ಬರುತ್ತದೆ. ಅದನ್ನು ಮಾನ್ಯ ಮೊಯ್ಲಿಯವರು ಪಾಯಿಂಟ್ ಔಟ್ ಮಾಡಿದ್ದಾರೆ ಅವರು ಹೇಳಿದಹಾಗೆ ಈಗಾಗಲೇ ಅದನ್ನು ತೋರಿಸಿದ್ದೀರಿ. ಮತ್ತೆ ಇಲ್ಲಿ ಪುನಃ ಲೇಖನ ಸಾಮಗ್ರಿಗಳಿಗೆ ಇಲ್ಲೂ ೫೦ ಲಕ್ಷ ರೂಪಾಯಿ ಸೇರಿಸಿ ಬಿಟ್ಟಿದ್ದೀರಿ. ಈ ೫೦ ಲಕ್ಷ ರೂಪಾಯಿಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್ ಚುನಾವಣೆಗೆ ಎಷ್ಟು ಖರ್ಚು ಮಾಡಿದ್ದೀರಿ, ಸಾರ್ಕ್ ಸಮ್ಮೇಳನಕ್ಕೆ ಎಷ್ಟು ಖರ್ಚಾಗಿದೆ ಎಂಬ ಬಗ್ಗೆ ವಿವರಣೆ ಏನೂ ಹೇಳಿಲ್ಲ. ಸಾರ್ಕ್ ಸಮ್ಮೇಳನಕ್ಕೆ ೫.೧೨ ಕೋಟಿ ರೂಪಾಯಿ ಬೇರೆ ಕೇಳಿದ್ದೀರಿ. ಇದು ಪೇಜ್ ೩೧ ರಲ್ಲಿದೆ ೩೧ನೇ ಪೇಜ್‌ನಲ್ಲಿರತಕ್ಕ ವಿವರಣಾತ್ಮಕ ಟಿಪ್ಪಣಿಯಲ್ಲಿ ಏನು ಹೇಳಿದ್ದೀರಿ ಎಂದರೆ ಅಭಿಯಾಚನೆ ಕ್ರಮಾಂಕ ೨೯ರಲ್ಲಿ ಇದು ಬಂದಿದೆ. ಅದರಲ್ಲಿ ಹೇಗೆ ಬಂದಿದೆಯೋ ಗೊತ್ತಿಲ್ಲ. ಹೇಗೆ ಪ್ರಿಂಟ್ ಆಗಿದೆಯೋ ಗೊತ್ತಿಲ್ಲ.

ಶ್ರೀ ಎ ಲಕ್ಷ್ಮೀಸಾಗರ್.—ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಕನ್ನಡದಲ್ಲಿ ಮಾಡಿ ಸೇರಿಸಿದ್ದೇವೆ, ಅದನ್ನು ಸೇರಿಸಿಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಅಭಿಯಾಚನೆ ಕ್ರಮಾಂಕ ೯ ಅದರೊಳಗೆ, ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್ ಚುನಾವಣೆಗೆ ಮತ್ತು ಸಾರ್ಕ್ ಸಮ್ಮೇಳನಕ್ಕೆ ಲೇಖನ ಸಾಮಗ್ರಿಗಳ ಖರೀದಿಗಾಗಿ ೫೦ ಲಕ್ಷ ರೂಪಾಯಿಗಳನ್ನು ಹಾಕಿದ್ದೀರಿ. ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯತ್‌ಗೆ ಈಗಾಗಲೇ ಇನ್ನೊಂದು ಕಡೆ ಖರ್ಚನ್ನೂ ಹೇಳಿದ್ದೀರಿ. ಅದರ ಬಗ್ಗೆ ಮಾನ್ಯ ಮೊಯಿಲಿಯವರು ಪಾಯಿಂಟ್ ಔಟ್ ಮಾಡಿದರು. ಇದಕ್ಕೆ ಒಟ್ಟು ಬೇರೆ ಖರ್ಚನ್ನು ಮಾಡಿ ಮತ್ತೆ ಪುನಃ ಇಲ್ಲಿ ಲೇಖನ ಸಾಮಗ್ರಿಗಳ ಖರ್ಚನ್ನು ಹೇಗೆ ಸೇರಿಸಿದ್ದೀರಿ, ಇದನ್ನು ಹೇಗೆ ಕೊಡುವುದಕ್ಕಾಗುತ್ತದೆ ಇವೆರಡನ್ನೂ ಒಟ್ಟಿಗೆ ಸೇರಿಸಿದ್ದೀರಿ, ಇದರಲ್ಲಿ ಸಾರ್ಕ್‌ಗೆ ಎಷ್ಟು ಮಂಡಲ್ ಪಂಚಾಯತಿ ಮತ್ತು ಜಿಲ್ಲಾ ಪರಿಷತ್‌ಗೆ ಎಷ್ಟು ಎಂದು ಹೇಳಿಲ್ಲ. ಮುದ್ರಣ ಮತ್ತು ಲೇಖನಸಾಮಗ್ರಿಗಳ ಬಗ್ಗೆ ವಿವರಣಾತ್ಮಕ ಟಿಪ್ಪಣಿ ಏನು ಕೊಟ್ಟಿದ್ದೀರಿ ಅದು ೩ ೪ ಕಡೆ ಹೇಗೆ ಬರುತ್ತದೆ. ಈ ವಿವರಣಾತ್ಮಕ ಟಿಪ್ಪಣಿಯಲ್ಲಿ ಸಾರ್ಕ್ ಸಮ್ಮೇಳನವನ್ನು ಏತಕ್ಕೆ ಸೇರಿಸಿದ್ದೀರಿ ಎಂದು ನಾನು ಕೇಳುತ್ತಿರುವುದು. ಇದಕ್ಕೆ ಮೋಸ ಮಾಡುತ್ತಿದ್ದೀರಿ ಅಥವಾ ಅದಕ್ಕೆ ಮೋಸ ಮಾಡುತ್ತಿದ್ದೀರಿ, ಅಥವಾ ತಿಳುವಳಿಕೆ ಇಲ್ಲದೆ ಇದು ಆಗಿರಬಹುದು. ಏನಾಗಿದೆ ಎಂದು ಎಕ್ಸ್‌ಪ್ಲನೇಷನ್ ನಿಮ್ಮಿಂದ ಬೇಕು. ನೀವು ಕೇಳಿದ ತಕ್ಷಣ ಕೊಡುವುದಕ್ಕಲ್ಲ ನಾವು ಇರುವುದು ಅಷ್ಟು ಮಾತ್ರವಲ್ಲ, ಇನ್ನೊಂದು ಪ್ರಶ್ನೆ ಏನೆಂದರೆ, ಪೇಜ್ ೩೧ರಲ್ಲಿ ಏನು ಹೇಳಿದ್ದೀರಿ? ಬೇಡಿಕೆ ಸಂಖ್ಯೆ ೧ ಎಂದು ಹಾಕಿದ್ದೀರಿ ಅದರಲ್ಲೂ ಸಹ ಸಾರ್ಕ್‌ಸಮ್ಮೇಳನದ ಅಂಗವಾಗಿ ಬೇಡಿಕೆ ಸಂಖ್ಯೆ ೨೯ ರಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ೭೫ ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದೀರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೂ ಇದಕ್ಕೂ ಸಂಬಂಧವೇ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಇದಕ್ಕೆ ಕರೆಕ್ಷನ್ ಕಳುಹಿಸಿದ್ದೇವೆ. ಬೇರೆ ಸ್ಲಿಪ್‌ನಲ್ಲಿ ಕಳುಹಿಸಿದ್ದೇವೆ. ನಿನ್ನೆ ಮೊನ್ನೆಯೇ ಕಳುಹಿಸಿದ್ದೇವೆ ಆದರೆ ತಾವು ನೋಡಲಿಲ್ಲ ಎಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ನನಗೆ ಬರಲಿಲ್ಲವಲ್ಲ. ಹಾಗಾದರೆ ಅದನ್ನು ಬಿಡಿ. ಯಾವುದೋ ಒಂದು ವಿವರಣಾತ್ಮಕ ಟಿಪ್ಪಣಿಯ ಅಡಿಯಲ್ಲಿ ಈ ಸಾರ್ಕ್ ಸಮ್ಮೇಳನದ ವಿಚಾರ ಬರುತ್ತದೆ. ಯಾವುದೋ ಒಂದು ಕ್ರಮಾಂಕದ ಅಭಿಯಾಚನೆಯ ಅಡಿಯಲ್ಲಿ ವಿವರಣಾತ್ಮಕ ಟಿಪ್ಪಣಿ ಇದೆ ಅದನ್ನು ನೀವೂ ಒಪ್ಪಿಕೊಳ್ಳುತ್ತೀರಿ ಎಂದು ನಾನು ಅಂದುಕೊಂಡಿದ್ದೇನೆ. ೩೧ನೇ ಪುಟದಲ್ಲಿ ಒಂದು ಅಭಿಯಾಚನೆ ಬರುತ್ತದೆ ಅದರಲ್ಲಿ ಸಾರ್ಕ್ ಸಮ್ಮೇಳನಕ್ಕೆ ಎಂದು ಈ ಕೆಳಕಂಡ ಮೊತ್ತವನ್ನು ಬಿಡುಗಡೆ ಮಾಡಲಾಯಿತು ವಿವರಗಳು ಈ ಕೆಳಗಿನಂತೆ ಇವೆ ಎಂದು ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ಇಂಗ್ಲೀಷ್ ಹಾಗೂ ಕನ್ನಡದ ಕಾಪಿಯಲ್ಲಿ ಬಂದಿರತಕ್ಕಂತಹ ತಪ್ಪುಗಳನ್ನು ಪಟ್ಟಿ ಮಾಡಿ ತಮಗೆ ಕಳಿಸಿದ್ದಾರೆ ತಾವು ಏನು ಓದುತ್ತಿದ್ದೀರಿ ಅದನ್ನೆಲ್ಲಾ ಅದರಲ್ಲಿ ಅದು ಸರಿಯಾಗಿಲ್ಲ ತಪ್ಪು ಎಂದು ಹೊಡೆದು ಹಾಕಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಪ್ಪನ್ನು ನಮಗೆ ಕಳಿಸಿ ಬಿಡುತ್ತೀರಿ ನಂತರ ನಾವೇನಾದರೂ ಹೇಳಿದರೆ ಅದು ತಪ್ಪು ಎಂದು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ನೋಡುತ್ತೀರಿ.

ಶ್ರೀ ಆರ್. ವೆಂಕಟರಾಮಯ್ಯ.—ಈ ತಿದ್ದುಪಡಿಗೆ ಇನ್ನೊಂದು ಸಪ್ಲಿಮೆಂಟರಿ ಡಿಮ್ಯಾಂಡ್ ಅನ್ನು ಸೇರಿಸಿ.

ಶ್ರೀ ಯು. ಭೂಪತಿ.—ಮುದ್ರಣ ಸಾಮಗ್ರಿ ಬಗ್ಗೆ ಹೇಳಬೇಕಾದರೇ ಮುದ್ರಣದಲ್ಲಿ ತಪ್ಪು ಮಾಡಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ತಿದ್ದುಪಡಿ ಮಾಡಿರುವಂಥಾದ್ದು ನನ್ನ ಹತ್ತಿರ ಇರಲಿಲ್ಲ. ಈ ತಿದ್ದುಪಡಿ ಮಾಡಿರುವುದರಲ್ಲೂ ಕೂಡ ಮತ್ತೆ ಅದೇ ೩೧ ನೇ ಪುಟದಲ್ಲಿ ಮೊದಲನೇ ಬಾಬು ಸಂಖ್ಯೆಯ ವಿವರಣಾತ್ಮಕ ಪೂರ್ಣ ಟಿಪ್ಪಣಿಗೆ ಬದಲಾಗಿ ಈ ಕೆಳಗಿನ ಟಿಪ್ಪಣಿಯನ್ನು ಓದಿಕೊಳ್ಳುವುದು ಎಂದು ಬರೆದಿದ್ದಾರೆ. ೧೯೮೬ರ ನವೆಂಬರ್ ತಿಂಗಳಲ್ಲಿ ಬೆಂಗಳೂರು ನಗರದಲ್ಲಿ ಸಮಾವೇಶಗೊಂಡ ಸಾರ್ಕ್ ಸಮ್ಮೇಳನದ ಸಂಬಂಧವಾಗಿ ಈ ಕೆಳಕಂಡ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಮೊದಲು ಕೊಟ್ಟಿರುವಂತಹ ಅಂಕಿ ಅಂಶಗಳಿಗೂ ಇಲ್ಲಿ ಕೊಟ್ಟಿರುವ ಅಂಕಿ ಅಂಶಗಳಿಗೂ ವ್ಯತ್ಯಾಸ ಇದೆ ಅವನ್ನು ತಿದ್ದುಪಡಿ ಎಂದು ಅವರು ಹೇಳುತ್ತಿದ್ದಾರೆ. ಬೆಂಗಳೂರು ನಗರ ಪಾಲಿಕೆ ೨೨೦ ಇರುವುದು ೧೨೦.೦೦ ಲಕ್ಷ ರೂಪಾಯಿ ತೋಟಗಾರಿಕೆ ಇಲಾಖೆಗೆ ೪೧.೦೫ ಇದ್ದದ್ದು ೩೧.೯೦ ಲಕ್ಷ ಇದೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ೨೫.೦೨ ಲಕ್ಷವಿದ್ದರೆ ಇದರಲ್ಲಿ ೨೫.೦೦ ಇದೆ ಲೋಕೋಪಯೋಗಿ ಇಲಾಖೆಗೆ ೨೮೪.೧೯ ಲಕ್ಷ ರೂಪಾಯಿ ಬಿಡುಗಡೆ ಮಾಡಲಾಗಿದೆ. ಎಲ್ಲಾ ಸೇರಿದರೆ ಸುಮಾರು ೫ ಕೋಟಿ ಚಿಲ್ಲರೆ ಆಗುತ್ತದೆ, ಇದನ್ನು ಮೇಲ್ಕಂಡ ಸಂಬಂಧವಾದ ಬೇಡಿಕೆಯ ಅಡಿಯಲ್ಲಿ ಸೇರಿಸಿದೆ.

ಶ್ರೀ ಎ. ಲಕ್ಷ್ಮೀಸಾಗರ್.— ಇದರ ಜೊತೆಗೆ ಕೆಲವೊಂದು ಇಲಾಖೆಗಳಾದ ಪೋಲೀಸ್, ಯುವಜನ ಸೇವೆ ಮುಂತಾದವುಗಳು ಸಹ ಈ ಸಂಬಂಧವಾಗಿ ಖರ್ಚು ಮಾಡಿದ್ದು ಅವುಗಳನ್ನು ಉಳಿತಾಯದ ಪುನರ್ ವಿನಿಯೋಗದಿಂದ ಭರಿಸಬಹುದಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ವೈದ್ಯಕೀಯ ಸೇವೆಗಳು ಕುಟುಂಬ ಕಲ್ಯಾಣದ ಅಡಿಯಲ್ಲಿ ಬರುವ ಪ್ರಶ್ನೆ ಬರುವುದಿಲ್ಲ. ಇದಕ್ಕೂ ಸಾರ್ಕ್ ಸಮ್ಮೇಳನಕ್ಕೂ ನೇರವಾದ ಸಂಬಂಧ ಇಲ್ಲ. ಯಾರಿಗಾದರೂ ವೈದ್ಯಕೀಯ ಸಹಾಯ ಮಾಡಿದ್ದಿದ್ದರೆ ಅದು ಬೇರೆ ಸಮಾಚಾರ ಬೇರೆಯವರಿಗೆ ಸಂಬಂಧವಿದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ನಮಗೆ ಕೊಡುವಂತಹ ಪುಸ್ತಕದಲ್ಲಿ ಸರಕಾರದವರು ಇಷ್ಟೊಂದು ತಪ್ಪನ್ನು ಮಾಡಿ ನಮಗೆ ೮೦ ಕೋಟಿ, ೯೨ ಕೋಟಿ ಕೊಡಿ ಎಂದರೆ ಯಾವ ರೀತಿ ಕೊಡುವುದು ಎಂದು ನನಗಂತೂ ಅರ್ಥವಾಗುತ್ತಿಲ್ಲ. ತಾವು ಸ್ವಲ್ಪ ಎಫಿಷಿಯೆಂಟ್ ಆಗಿ ಕೆಲಸ ಮಾಡಬೇಕು. ಇಲ್ಲಿ ಹೇಳಿರುವ ಅಂದಾಜಿಗೂ ಬಿಡುಗಡೆ ಮಾಡಿರುವುದಕ್ಕೂ ಸಂಬಂಧವಿಲ್ಲ. ಅಭಿಯಾಚನೆ ಕ್ರಮಾಂಕದಲ್ಲಿ ಬೇರೆ, ಇದೆ ಇಲ್ಲಿ ಕೊಟ್ಟಿರುವುದೇ ಬೇರೆ, ಮೂರನೆಯದಾಗಿ ಹೇಳುವುದಾದರೆ ಇದನ್ನು ಮೂಲಭೂತ ಸಮಸ್ಯೆಯಾಗಿ ತೆಗೆದುಕೊಳ್ಳೋಣ ಇದರ ಪ್ರಕಾರ ಸುಮಾರು

ಐದೂವರೆ ಕೋಟಿ ರೂಪಾಯಿ ಆಗುತ್ತದೆ. ಆಗಲೇ ಬೇರೆ ಓದಿದೆ ಅದರಲ್ಲಿ ಒಂದು ಭಾಗ ಸಾರ್ಕ್ ಸಮ್ಮೇಳನದಲ್ಲಿ ಲೇಖನ ಸಾಮಗ್ರಿಗೆ ಎಂದು ಖರ್ಚು ಮಾಡಿದ್ದೀರಿ ಅದನ್ನು ಇದರಲ್ಲಿ ಸೇರಿಸಿಲ್ಲ. ೩-೪ ಐಟಂ ಸೇರಿಸಿದ್ದೀರಿ ಬೇರೆ ಐಟಂ ಸೇರಿಸಿಲ್ಲ. ಸಾರ್ಕ್ ಸಮ್ಮೇಳನಕ್ಕೆ ಖರ್ಚು ಮಾಡಬಾರದೆಂದು ನಾನು ಹೇಳುತ್ತಿಲ್ಲ. ಸಾರ್ಕ್ ಸಮ್ಮೇಳನ ಬಹಳ ಮುಖ್ಯವಾದ ಸಮ್ಮೇಳನ ಅಂತರರಾಷ್ಟ್ರೀಯವಾಗಿ ಬಹಳ ಮುಖ್ಯವಾದುದು ಕರ್ನಾಟಕ ರಾಜ್ಯಕ್ಕೆ ಗೌರವ ತರುವ ರೀತಿಯಲ್ಲಿ ಮತ್ತು ನಮ್ಮ ಹಿರಿಮೆಯನ್ನು ಜಾಸ್ತಿ ಮಾಡುವ ರೀತಿಯಲ್ಲಿತ್ತು, ಪೋಲೀಸರೂ ಕೂಡ ಚೆನ್ನಾಗಿ ಕೆಲಸ ಮಾಡಿದ್ದಾರೆ, ದೀಪಾಲಂಕಾರ ಚೆನ್ನಾಗಿತ್ತು, ವಸತಿ ಚೆನ್ನಾಗಿತ್ತು. ರೋಡುಗಳು ಚೆನ್ನಾಗಿತ್ತು, ಟಾರ್ ರೋಡ್‌ಗಳನ್ನು ಮಾಡಿದರು, ಏರ್‌ಪೋರ್ಟ್‌ನಿಂದ ನಂದಿ ಬೆಟ್ಟದವರೆಗೆ ಸೋಡಿಯಂ ದೀಪಗಳನ್ನು ಹಾಕಿದ್ದೀರಿ ಒಳ್ಳೊಳ್ಳೆಯ ತಿಂಡಿ ಕೊಟ್ಟರು, ವಿಂಡ್ಸರ್ ಮ್ಯಾನರ್. ಅಶೋಕ ಹೋಟೆಲ್‌ನಿಂದ ಒಳ್ಳೊಳ್ಳೆಯ ಊಟವನ್ನು ಕೊಟ್ಟರು, ಇದೆಲ್ಲಾ ತಮಗೆ ಗೊತ್ತಿರುವ ವಿಷಯವೇ ಆಗಿದೆ. ಆದ್ದರಿಂದ ಇದರ ಬಗ್ಗೆ ನಾನು ಎಲ್ಲವನ್ನೂ ಮಾತನಾಡುವುದಕ್ಕೆ ಹೋಗುವುದಿಲ್ಲ. ಸಾರ್ಕ್ ಸಮ್ಮೇಳನ ಮಾಡುವಾಗ ಈ ಮನೆಯನ್ನು ಚೆನ್ನಾಗಿ ಮಾಡಿದರು. ಅಧ್ಯಕ್ಷರ ಸ್ಥಳವನ್ನು ಅಗಲ ಮಾಡಿ ಚೆನ್ನಾಗಿ ಮಾಡಿದ್ದಾರೆ ಈ ಮನೆ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಸಾಧ್ಯವಾಗುತ್ತದೆ ಎನ್ನುವ ಹಾಗೆ ಮಾಡಿದ್ದಾರೆ ಅದರ ಬಗ್ಗೆ ಭಿನ್ನಾಭಿಪ್ರಾಯವೂ ಇಲ್ಲ. ಸಾರ್ಕ್ ಸಮ್ಮೇಳನದಲ್ಲಿ ಆದಂಥ ತೀರ್ಮಾನಗಳ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅಂತರ ರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಮಹತ್ವ ಬಂದಿದೆ ಎಂದು ಹೇಳಬಹುದು. ಮಾನ್ಯಅಧ್ಯಕ್ಷರೇ ಕೇಂದ್ರ ಸರ್ಕಾರದವರು ಹೇಳಿರುವ ಪ್ರಕಾರ ಮತ್ತು ಪತ್ರಿಕೆಗಳಲ್ಲಿ ಬಂದಿದ್ದ ವರದಿ ಪ್ರಕಾರ ಕೇಂದ್ರ ಸರ್ಕಾರದವರು ಈ ಸಮ್ಮೇಳನಕ್ಕೆ ಸುಮಾರು ಎರಡೂ ಅಥವಾ ಎರಡೂವರೆ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಬಂದಿರತಕ್ಕ ಹಣವನ್ನು ಇವರು ಉಪಯೋಗ ಮಾಡಿದ್ದಾರೆ. ನಮ್ಮಿಂದಲೂ ಹಣ ಖರ್ಚಾಗಿದೆ ಎಂದು ಇವರು ಹೇಳುತ್ತಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಇದಕ್ಕೆ ಹಣವನ್ನು ಕೊಟ್ಟಿದ್ದರು. ಎಂಬುದನ್ನು ಇಲ್ಲಿ ಹೇಳಿಲ್ಲ. ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನೂ ಈ ಬಾಬತ್ತಿಗೆ ಉಪಯೋಗಿಸಿದ್ದಾರೆ, ಕೇಂದ್ರದವರು ಕೊಟ್ಟಂಥ ಹಣದಲ್ಲಿ ಏಜೆನ್ಸಿಗೆ, ರೋಡ್ ರಿಪೇರಿಗೆ ಲೈಟ್ ಹಾಕಿಸುವುದಕ್ಕೆ ಖರ್ಚು ಮಾಡಿದ್ದಾರೆ. ಈ ಹಣದ ಜೊತೆಗೆ ಇನ್ನೂ ಐದು ಕೋಟಿ ಚಿಲ್ಲರೆ ಹಣವನ್ನು ನಾವು ಖರ್ಚು ಮಾಡಿದ್ದೇವೆಂದು ಅದಕ್ಕೆ ಈ ಸದನ ಒಪ್ಪಿಗೆ ಕೊಡಬೇಕೆಂದು ಕೇಳಿದರೆ ಇದು ಖಂಡಿತ ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ದುಂದು ವ್ಯಯವಾಗುತ್ತದೆಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಪ್ರತಿಯೊಂದು ಸಾರಿಯೂ ಪ್ರಧಾನ ಮಂತ್ರಿಗಳು ಬಂದು ಹೋಗುವಾಗ ಖರ್ಚನ್ನು ಮಾಡುತ್ತಲೇ ಇರುತ್ತೀರಿ. ಮೂಲಭೂತವಾಗಿ ನಾನು ಹೇಳಬೇಕಾದರೆ ಇವತ್ತಿನ ದಿವಸ ನೀವು ಹೇಳಿರುವಷ್ಟು ಹಣ ಉಪಯೋಗವಾಗಿರುವುದಿಲ್ಲ. ನೀವು ಹಣವನ್ನು ವ್ಯಯ ಮಾಡಿರುವ ಬಗ್ಗೆ ವಿವರಣೆ ಕೊಡಬೇಕು. ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣದ ಬಗ್ಗೆಯೂ ವಿವರಣೆ ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಅದೇ ರೀತಿಯಲ್ಲಿ ಇನ್ನೊಂದು ವಿಷಯ ಹೇಳಬೇಕೆಂದರೆ, ಅಭಿಯಾಚನೆ ಕ್ರಮಾಂಕ ೧೭ರಲ್ಲಿ ಕಲೆ, ಸಂಸ್ಕೃತಿ, ಕನ್ನಡ ಅಭಿವೃದ್ಧಿಗಾಗಿ ಅದರ ಜೊತೆಗೆ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಮೈಸೂರು ನಗರಸಭೆಯವರು ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆಂದು ಹೇಳಿದ್ದಾರೆ ಅಂದರೆ, ಮೈಸೂರು ನಗರ ಸಭೆಯವರು ೫೦ ಲಕ್ಷ ರೂಪಾಯಿಗಳನ್ನು ವಿಶ್ವ ಕನ್ನಡ ಸಮ್ಮೇಳನಕ್ಕೆ ಖರ್ಚು ಮಾಡಿದ್ದರೆ, ಇವರು ಬೇರೆ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇವರು ಒಟ್ಟು ೧ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು ಇದರಿಂದ ತಿಳಿದುಬರುತ್ತದೆ, ಇದರಲ್ಲಿ ನನಗೆ ಅನುಮಾನ ಇದೆ ಅಧ್ಯಕ್ಷರೆ, ಎರಡನೆಯದಾಗಿ ಬಹಳ ಮುಖ್ಯವಾದುದೆಂದರೆ, ಕನ್ನಡ ಸಂಸ್ಕೃತಿ ಬೆಳೆಯುವುದಕ್ಕೆ ಹಾಗೂ ಕನ್ನಡಕ್ಕೆ ಪ್ರೋತ್ಸಾಹ ಕೊಡುವ ವಿಷಯದಲ್ಲಿ ಸರ್ಕಾರದ ನಿಲುವನ್ನು ಈ ಹಿಂದೆ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ಹೇಳಿದ್ದರು ಏನೆಂದರೆ ಇನ್ನು ಮುಂದೆ ಕನ್ನಡಪುಸ್ತಕಗಳನ್ನು ಯಾರೇ ಬರೆದರೂ ಸರ್ಕಾರದವರು ೫೦೦ ಪುಸ್ತಕಗಳನ್ನು ಕೊಂಡು ಕೊಂಡು ಸಾಹಿತಿಗಳಿಗೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳಿದ್ದರು. ಕನ್ನಡ ಅಭಿವೃದ್ಧಿಗಾಗಿ ಕನ್ನಡ ಸಂಸ್ಕೃತಿ ಅಭಿವೃದ್ಧಿಗಾಗಿ, ಕನ್ನಡ ಲೇಖಕರ ಪ್ರೋತ್ಸಾಹಕ್ಕಾಗಿ ೫೦೦ ಪುಸ್ತಕಗಳನ್ನು ಖರೀದಿ ಮಾಡುವುದಾಗಿ

ಹೇಳಿದ್ದರೇ ಹೊರತು ಖರೀದಿ ಮಾಡಲಿಲ್ಲ. ಸರ್ಕಾರದವರು ಪುಸ್ತಕಗಳನ್ನು ಕೊಂಡುಕೊಂಡು ಲೈಬ್ರರಿಗಳಿಗೆ, ಶಾಲೆಗಳಿಗೆ ಕೊಡಬಹುದಾಗಿತ್ತು. ಹೀಗೆ ಮಾಡಿದಿದ್ದರೆ ಲೇಖಕರಿಗೆ ಅನುಕೂಲ ವಾಗುತ್ತಿತ್ತು. ಕನ್ನಡ ಬೆಳೆಯುತ್ತಿತ್ತು. ಹೊಸ ಲೇಖಕರು ಪುಸ್ತಕಗಳನ್ನು ಬರೆಯು ವುದಕ್ಕೆ ಉತ್ಸಾಹ ಬರುತ್ತಿತ್ತು. ಈ ಪುಸ್ತಕಗಳನ್ನು ಕೊಂಡುಕೊಳ್ಳುವ ಬಗ್ಗೆ ಒಂದು ಸಮಿತಿಯನ್ನು ಮಾಡಲಾಗಿತ್ತು ಆ ಸಮಿತಿ ಬಗ್ಗೆ ಬಹಳ ಆರೋಪಣೆ ಇದೆ. ತೀರಾ ಆರೋಪ ಇದೆ ಅಧ್ಯಕ್ಷರೆ. ಕನ್ನಡ ಪುಸ್ತಕಗಳನ್ನು ಕೊಂಡುಕೊಳ್ಳುವ ಬಗ್ಗೆ ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿದೆ. ಈ ಭ್ರಷ್ಟಾಚಾರವನ್ನು ತಡೆಯುವ ಜವಾಬ್ದಾರಿ ಸರ್ಕಾರಕ್ಕೆ ಇದೆ. ಪುಸ್ತಕಗಳನ್ನು ತಾವೇ ಕೊಂಡುಕೊಂಡು ಮಾರಾಟಮಾಡುವ ಜವಾಬ್ದಾರಿಯೂ ಸಹ ಸರ್ಕಾರಕ್ಕೆ ಇದೆ. ಇನ್ನೂ ಒಂದು ವಿಷಯ ಹೇಳಬೇಕೆಂದರೆ, ಸಣ್ಣಉಳಿತಾಯಗಳ ಬಗ್ಗೆ ನಮ್ಮ ವೀರಣ್ಣನವರು ಅಭಿಯಾಚನೆ ಕ್ರಮಾಂಕ ೧೯ರಲ್ಲಿ ಹೇಳಿದ್ದಾರೆ. ಅದರಲ್ಲಿ ಇರುವ ಟಿಪ್ಪಣಿ ಏನು ಹೇಳುತ್ತದೆ ಎಂದರೆ, ಅದರಲ್ಲಿ ೭೫ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಸಣ್ಣ ಉಳಿತಾಯ ಯೋಜನೆಯಲ್ಲಿ ಅಭೂತಪೂರ್ವ ದಾಖಲೆಯನ್ನು ಸಾಧಿಸುವ ದಿಸೆಯಲ್ಲಿ ಪ್ರಚಾರ ಕಾರ್ಯಗಳನ್ನು ಹೆಚ್ಚು ಮಾಡುವ ಅವಶ್ಯಕತೆ ಇದ್ದುದರಿಂದ ೭೫ ಲಕ್ಷ ರೂಪಾಯಿಗಳನ್ನು ಸಾಧಿಲ್ವಾರು ನಿಧಿಯಿಂದ ಬಿಡುಗಡೆ ಮಾಡಲಾಗಿದೆ. ನಿಧಿಗೆ ಮರುಪಾವತಿ ಮಾಡುವುದಕ್ಕಾಗಿ ಈ ಬೇಡಿಕೆ?

ಇವರ ವರದಿಯ ಪ್ರಕಾರ, ೮೬-೮೭ರಲ್ಲಿ ೩೧೮ ಕೋಟಿ ರೂಪಾಯಿಗಳಷ್ಟು ಗ್ರಾಸ್ ಕಲೆಕ್ಷನ್ ಆಗಿದೆ. ನೆಟ್ ಕಲೆಕ್ಷನ್ ಎಷ್ಟು ಅಂದರೆ, ೯೬ ಕೋಟಿ ರೂಪಾಯಿಗಳು. ತಾವುಗಳು ಪೇಜ್‌ನಂಬರ್ ೮೬-೮೭ರಲ್ಲಿ ಸಣ್ಣಉಳಿತಾಯದ ವರದಿಯನ್ನು ಕೊಟ್ಟಿದ್ದೀರಿ. ಅದರಲ್ಲಿ ಇದೆ. ಆಕ್ಚುವಲ್ ಗ್ರಾಸ್ ಕಲೆಕ್ಷನ್, ೩೧೮ಕೋಟಿ ರೂಪಾಯಿಗಳು, ನೆಟ್ ಕಲೆಕ್ಷನ್ ೯೬ಕೋಟಿ ರೂಪಾಯಿಗಳು, ಎಂದು ಹೇಳಿದ್ದಾರೆ. ನಿಮ್ಮ ರಿಪೋರ್ಟ್ ಪ್ರಕಾರ ನಾನು ಓದುತ್ತಾ ಇದ್ದೇನೆ. ಇದರಲ್ಲಿ ಏನಾಗಿದೆ ಎಂದರೆ, ಗ್ರಾಸ್‌ಕಲೆಕ್ಷನ್ ಜಾಸ್ತಿಯಾಗಿದೆ, ನೆಟ್‌ಕಲೆಕ್ಷನ್ ೩.೮ ಪರ್ಸೆಂಟ್ ಕಡಿಮೆಯಾಗಿದೆ. ಎರಡನೆಯದಾಗಿ ಈ ಕಲೆಕ್ಷನ್‌ಗಾಗಿ ಖರ್ಚು ೭೫ ಲಕ್ಷ ರೂಪಾಯಿಗಳು. ಅಂದರೆ ಪ್ರಚಾರ ಮತ್ತು ಪ್ರಚಾರಕಾರ್ಯಕ್ಕೆ ಖರ್ಚು ಮಾಡಿದ್ದಾರೆ. ಇದರಲ್ಲಿ ಮೋಟಾರು ವಾಹನಗಳು, ಜಾಹೀರಾತು, ನಗದು ಪ್ರೋತ್ಸಾಹಕ ಬಹುಮಾನಗಳಿಗೆ ಸಂದ ಖರ್ಚುಗಳು ಬರುತ್ತವೆ. ಪ್ರೋತ್ಸಾಹಕ ಬಹುಮಾನಕ್ಕಾಗಿ ಅಂದರೆ ಯಾರು ಜಾಸ್ತಿಯಾಗಿ ಸ್ಮಾಲ್‌ಸೇವಿಂಗ್ಸ್‌ಗಳನ್ನು ಮಾಡಿಸಿದ್ದಾರೊ ಅವರಿಗೆ ಇನ್ಸೆಂಟೀವ್ ಆಗಿ ೪೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈ ಸೇವಿಂಗ್ಸ್ ಎನ್ನುವುದು ಒತ್ತಾಯದ ಮೇಲೆ ಆಗಬಾರದು ಎಂದು ನನ್ನ ಅನಿಸಿಕೆ. ತಾವಾಗಿಯೇ ಜನರು ಸ್ವಯಂ ಇಚ್ಛೆಯಿಂದ ಮಾಡಬೇಕು. ಒತ್ತಾಯದ ಮೂಲಕ ಮಾಡುವುದು ಸರಿಯಲ್ಲ. ನಗದು ಬಹುಮಾನ ಸಿಗುತ್ತದೆ ಎಂದು ಸಂಬಂಧಪಟ್ಟವರು ಒತ್ತಾಯ ಮಾಡಿ ಕಲೆಕ್ಷನ್ ಮಾಡಿರುವುದು ಇದೆ. ಒಟ್ಟಿನಲ್ಲಿ ಖರ್ಚು ೭೫ಲಕ್ಷ ರೂಪಾಯಿಗಳು. ಇದನ್ನೆಲ್ಲಾ ಲೆಕ್ಕಹಾಕಿ ನೋಡಬೇಕು. ಈ ೭೫ಲಕ್ಷ ರೂಪಾಯಿಗಳನ್ನು ಸ್ಮಾಲ್‌ಸೇವಿಂಗ್ಸ್‌ಗೆ ಹಾಕಿದರೆ ಎಷ್ಟು ಪರ್ಸೆಂಟ್ ಬರುತ್ತಿತ್ತು ಎನ್ನುವುದನ್ನು ಕೂಡ ಲೆಕ್ಕ ಹಾಕ ಬೇಕು.

ಇನ್ನೊಂದು ಮುಖ್ಯವಾದಂತಹ ವಿಚಾರ. ಅದು ಅಭಿಯಾಚನೆ ಕ್ರಮಾಂಕ ೩೩ ಇದರಲ್ಲಿ ೧೯.೦೪ ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. ಏತಕ್ಕೋಸ್ಕರವಾಗಿ ಎಂದರೆ, "ಆಕ್ಟ್ರಾಯ್ ತೆರಿಗೆಯನ್ನು ರದ್ದುಗೊಳಿಸಿದಾಗ, ಈ ತೆರಿಗೆಯನ್ನು ವಿಧಿಸದೆ ಇರುವ ಪುರಸಭೆ ಗಳಿಗೆ ಪರಿಹಾರ ಧನವನ್ನು ನೀಡಲು ನಿರ್ಧರಿಸಲಾಗಿದೆ. ಪ್ರಸಕ್ತ ಸಾಲಿಗೆ ೧೯.೦೪ಲಕ್ಷ ರೂಪಾಯಿಗಳ ಅವಶ್ಯಕತೆಯಿದ್ದು ಆಯವ್ಯಯದಲ್ಲಿ ಈ ಉದ್ದೇಶಕ್ಕಾಗಿ ಯಾವ ಏರ್ಪಾಟು ಮಾಡದೆ ಇರುವುದರಿಂದ ಬೇಡಿಕೆಯಲ್ಲಿ ಸೇರಿಸಲಾಗದೆ'' ಎಂದಿದ್ದಾರೆ. ಈಗ ಆಕ್ಟ್ರಾಯ್ ತೆರಿಗೆ ಬೇಕು ಎಂದು ಪುರಸಭೆಯವರು ಕೇಳುತ್ತಾ ಇರಬೇಕಾದರೆ, ಅವರಿಗೆ ಪರಿಹಾರಧನವನ್ನು ಕೊಡುವುದರ ಬಗ್ಗೆ ಈ ೧೯.೦೪ ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ ಎಂದು ಹೇಳಿದರೆ, ಇದು ನೀವು ಕೊಟ್ಟಿರುವುದು ಪೂರ್ಣ ಹಣವೇ ಅಥವಾ ಕೊಟ್ಟಿದ್ದರೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಮತ್ತು ಯಾವ ರೀತಿಯಲ್ಲಿ ಕೊಡುತ್ತಿದ್ದೀರಿ ಎನ್ನುವುದನ್ನು ಸ್ವಲ್ಪವಟ್ಟಿಗೆ ಹೇಳ ಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನನ್ನ ಬೇಡಿಕೆ ಬಂದಾಗ ನಾನು ಹೇಳಿದ್ದೇನೆ. ಈ ಆಕ್ಟ್ರಾಯ್ ರದ್ದು ಆದಾಗ, ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಈ ಆಕ್ಟ್ರಾಯ್ ಇರಲಿಲ್ಲ. ಎಲ್ಲಿ ಆಕ್ಟ್ರಾಯ್ ಇರಲಿಲ್ಲವೊ ಅಂಥ ಪ್ರದೇಶಗಳಿಗೆ, ಸಹಾಯ ಧನವನ್ನು ಕೊಡತಕ್ಕಂಥಾದ್ದನ್ನು

ಇಟ್ಟುಕೊಂಡಿರಲಿಲ್ಲ. ನಂತರ ಈ ಸಭೆಯು ಮತ್ತು ಹೊರಗಡೆ ಇಂತಹ ಪುರಸಭೆಗಳವರಿಗೂ ಕೂಡ ಪರಿಹಾರಧನವನ್ನು ಕೊಡಬೇಕೆಂದು ಒತ್ತಾಯ ಬಂದ ಮೇಲೆ, ಅಂತಹವರಿಗೆ ಅಂದರೆ ಯಾರಿಗೆ ಪರಿಹಾರಧನವನ್ನು ಕೊಡುತ್ತಾ ಇರಲಿಲ್ಲವೋ ಅವರಿಗೆ ಇಷ್ಟು ರೂಪಾಯಿಗಳನ್ನು ಹೆಚ್ಚಿಗೆ ಕೊಡಲಾಯಿತು. ಅದನ್ನು ಇಲ್ಲಿ ಸೇರಿಸಿದ್ದೇವೆ.

೬–೩೫ ಪಿ. ಎಂ

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೊಂದು ಅಭಿಯಾಚನೆ ಕ್ರಮಾಂಕ ೪೧, ಜಿಲ್ಲಾಡಳಿತ. ಬಾಬ್ತು ಸಂಖ್ಯೆ ೧೦ ಇದರಲ್ಲಿ ಬೆಂಗಳೂರು ಜಿಲ್ಲಾ ಕಚೇರಿಯು ನಗರ ಕಟ್ಟಡದ ಬಾಡಿಗೆಗಾಗಿ ೧೦ ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ, ಎಂದಿದ್ದಾರೆ. ನನಗೆ ಗೊತ್ತಿರುವ ಹಾಗೆ ಈ ಕಚೇರಿ ಇರುವುದು ಮೈಸೂರು ಬ್ಯಾಂಕ್ ಎದುರಿಗೆ,

ಶ್ರೀ ಎ. ಲಕ್ಷ್ಮೀಸಾಗರ್.—ಇದು ಅರ್ಬನ್ ಡಿಸ್ಟ್ರಿಕ್ಟ್ ಬಿಲ್ಡಿಂಗ್, ಕಾರ್ಪೊರೇಷನ್ ಹತ್ತಿರ ಇರುವುದು.

ಶ್ರೀ ಎಂ. ಎಸ್. ಕೃಷ್ಣನ್.—ಇದಕ್ಕೆ ೧೦ ಲಕ್ಷ ಬಾಡಿಗೆಯೇ? ಬೆಂಗಳೂರು ಜಿಲ್ಲಾ ಕಚೇರಿ ಇರುವ ಕಡೆ ಬೇಕಾದಷ್ಟು ಜಾಗ ಇದೆ. ಆ ಜಾಗದಲ್ಲಿ ಕಟ್ಟಡ ಏಳಿಸುವುದಕ್ಕೆ ಪ್ರಯತ್ನ ಮಾಡಿ ಇದರಿಂದ ಸರ್ಕಾರಕ್ಕೆ ೧೦ ಲಕ್ಷ ಉಳಿತಾಯವಾಗುವುದಲ್ಲದೆ ಬೇರೆ ಕಾರಣಕ್ಕೆ ಬಳಸುವುದಕ್ಕೂ ಅವಕಾಶ ವಾಗುತ್ತದೆ, ಆ ಕಡೆ ಗಮನಕೊಡಿ. ಸುಮ್ಮ ಸುಮ್ಮನೆ ೧೦ ಲಕ್ಷ ಕೊಡುವುದು ಸರಿಯಲ್ಲ ಇನ್ನೊಂದು ವಿಷಯ ಕಂಡುಬರುವುದು ಏನೆಂದರೆ ಅಭಿಯಾಚನೆ ಕ್ರಮಾಂಕ ೫೮ರಲ್ಲಿ ಒಂದು ವಿಷಯ ವನ್ನು ಮಾನ್ಯಮೊಯ್ಲಿಯವರು ಪ್ರಸ್ತಾಪ ಮಾಡಿದ್ದಾರೆ.ಅದೇನೆಂದರೆ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತ್ ಚುನಾವಣೆಗೆ ೩ ಕೋಟಿ ೧೮ ಲಕ್ಷ ಖರ್ಚು ಮಾಡಿರುವ ಬಗ್ಗೆ ಬಾಬ್ತು ಸಂಖ್ಯೆ ೩ರಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತ್ತಿಗಳ ಸದಸ್ಯರ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಜನವರಿ ೩೧ ರಂದು ನಡೆಸಿದ ಸಂದರ್ಭದಲ್ಲಿ ಆಹಾರ ವೆಚ್ಚ, ನೀರು ಸರಬರಾಜು ಮುಂತಾದವುಗಳಿಗೆ ಆಯ ವ್ಯಯದಲ್ಲಿ ವ್ಯವಸ್ಥೆ ಮಾಡಿರಲಿಲ್ಲವೆಂದೂ, ಆದ್ದರಿಂದ ಸಾಧಿಲ್ವಾರು ನಿಧಿಯಿಂದ ೮೮ ಲಕ್ಷ ರೂಪಾಯಿ ಗಳನ್ನು ಬಿಡುಗಡೆ ಮಾಡಲಾಯಿತು. ಈಗ ಆ ಹಣವನ್ನು ಮರು ಸಂದಾಯ ಮಾಡಬೇಕಾಗಿದೆಯಂತೆ ಆದ್ದರಿಂದ ೫೦ ಲಕ್ಷ ಇದಕ್ಕಾಗಿ ಬೇಕು ಎಂದಿದ್ದಾರೆ. ನನ್ನ ಸ್ವಂತ ಅಭಿಪ್ರಾಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಬಹಳ ಅಮೋಘವಾದ ರೀತಿಯಲ್ಲಿ ಹೇಳಿ ಆನಂದಭಾಷ್ಪವನ್ನು ಸುರಿಸಿದ್ದಾರೆ ಈ ತರಹ ನೋಡಿಯೇ ಇರಲಿಲ್ಲ, ಲಕ್ಷಾಂತರ ಜನ ಸೇರಿದ್ದರು ಎಂದೆಲ್ಲ ಹೇಳಿಕೊಂಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅವರನ್ನೆಲ್ಲಾ ಇಲ್ಲಿಗೆ ಕರೆದುಕೊಂಡು ಬಂದು ಬೆಂಗಳೂರು ತೋರಿಸಿ ದವು ದವು ಬಾರಿಸುವ ಬದಲು ಜಿಲ್ಲಾಪರಿಷತ್ತಿನ ಸದಸ್ಯರನ್ನು ಸೇರಿಸಿ ಅವುಗಳ ಕಾರ್ಯ ವಿಧಾನಗಳೆಲ್ಲವನ್ನೂ ಹೇಳಿ ಕೊಡಬೇಕಾಗಿತ್ತು. ಇದರಿಂದ ದುಂದು ವೆಚ್ಚ ಆಗುತ್ತಿರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಷಯದ ಬಗ್ಗೆ ಜನರಲ್ ಡಿಸ್‌ಕಷನ್ ಬಡ್ಜೆಟ್ ಮೇಲೆ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆದಾಗ ವಿಪುಲವಾದಂತಹ ಚರ್ಚೆಯಾಗಿದೆ ಅಷ್ಟನ್ನು ಮಾತ್ರ ನಾನು ಹೇಳಿದ್ದು ನನಗೇಕೆ ಕೋಪ ಬರುತ್ತದೆ. ಕೋಪ ಮಾಡಿಕೊಳ್ಳಬಹುದಾಂತಹ ಜನ ನೀವು.

ಶ್ರೀ ಎಂ. ಎಸ್. ಕೃಷ್ಣನ್.—ಆ ವಿಷಯದ ಬಗ್ಗೆ ಮಾತನಾಡಲಿಲ್ಲವೆಂದು ಹೇಳಿದ್ದು ನನ್ನ ತಪ್ಪು ಅಲ್ಲ ಅದು ತಮ್ಮ ಗಮನಕ್ಕೆ ಬಾರದೇ ಹೋದರೆ. ಈ ಐಟಂ ಅನ್ನು ಸೇರಿಸಿದ್ದರಿಂದ ಹೇಳು ತ್ತಿದ್ದೇನೆ. ಹಿಂದೆ ನಾನು ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ ಎಷ್ಟು ಖರ್ಚು ಆಯಿತೆಂದು ಅದಕ್ಕೆ ಉತ್ತರವೇ ಬರಲಿಲ್ಲ. ನಂತರ ೮೮ಲಕ್ಷ ರೂಪಾಯಿ ಖರ್ಚು ಮಾಡಬೇಕಿತ್ತೆಂದು ಉತ್ತರ ಬಂದಿದೆ, ಇದು ಸರಿಯಾದುದಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇನ್ನು ಮುಂದಾದರೂ ಈ ಸರಕಾರ ಈ ತರಹದ ಪೂರಕ ಅಂದಾಜುಗಳನ್ನು ತರುವುದಕ್ಕೆ ಮುಂಚೆಯೇ ಯೋಚನೆ ಮಾಡಿ ಮಾಡಬೇಕಾಗುತ್ತದೆ. ೮೮ ಕೋಟಿ ರೂಪಾಯಿಗಳ ಪೂರಕ ಅಂದಾಜುಗಳನ್ನು ತಂದು ಅದನ್ನು ಒಪ್ಪಿಕೊಂಡು ಬಿಡಿ ಐದು ನಿಮಿಷದಲ್ಲಿ ಎಂದು ಹೇಳಿದರೆ ಅದು ಸರಿಯಾದುದಲ್ಲ ಇದರ ಅರ್ಥ ಏನೆಂದರೆ ಇವರು ಎಫಿಷಿಯೆಂಟ್ ಆಗಿ ಫಂಕ್ಷನ್ ಮಾಡುತ್ತಿಲ್ಲ, ಎಷ್ಟು ಖರ್ಚು ಮಾಡಬೇಕೋ ಅಷ್ಟನ್ನು ಖರ್ಚು ಮಾಡಬೇಕು. ಎಲ್ಲವನ್ನೂ ಒಂದೇ ಸಾರಿ ಖರ್ಚು ಮಾಡುತ್ತಾರೆ

ಅನೇಕ ಸಾರಿ ಒಂಭತ್ತು ತಿಂಗಳು ಖರ್ಚು ಮಾಡುತ್ತಾರೆ, ಇನ್ನು ಮೂರು ತಿಂಗಳು ಏನು ಮಾಡುತ್ತಾರೆಂದು ಗೊತ್ತೇ ಆಗುವುದಿಲ್ಲ. ಆ ಖರ್ಚಿನಲ್ಲೇ ಇದೂ ಸೇರಿಕೊಂಡು ಬಿಡುತ್ತದೆ. ಮುಂದೆ ಇಂಥಾದ್ದಕ್ಕೆ ಅವಕಾಶ ಕೊಡಬಾರದು ಒಂದು ವೇಳೆ ಅವಕಾಶ ಕೊಟ್ಟರೆ ಇನ್ನೂ ಹೆಚ್ಚಿನ ಪ್ರತಿಭಟನೆ ನಮ್ಮಲ್ಲಿ ಇರುತ್ತದೆ ಆಗ ತಾವೂ ಕೂಡ ಇದಕ್ಕೆ ಸಹಾಯ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ಪೂರಕ ಅಂದಾಜುಗಳ ಬಗ್ಗೆ ಅವರು ಸದನದ ಅನುಮತಿಯನ್ನು ಕೇಳುವಾಗ ಮುಖ್ಯವಾಗಿ ಗಮನಿಸಬೇಕಾದುದು ನಿಜವಾಗಿಯೂ ಕೂಡ ಬಡ್ಜೆಟ್ಟಿನಲ್ಲಿ ಎಷ್ಟು ಪ್ರೊವೈಡ್ ಮಾಡಿದ್ದಾರೋ ಅಷ್ಟು ಖರ್ಚು ಮಾಡುವ ಅಗತ್ಯ ಇದೆಯೋ ಇಲ್ಲವೇ ಎಂಬುದನ್ನು ಯೋಚನೆ ಮಾಡಬೇಕಾಗಿತ್ತು. ಫೈನಾನ್ಶಿಯಲ್ ಕಂಟ್ರೋಲ್ ಇಲ್ಲ ಬಿಗಿ ತಪ್ಪಿದೆ ೯೨ ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ ಅದು ಸರಿಯೇ ಇಲ್ಲವೇ ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ, ಒಂದೊಂದು ಡಿಮ್ಯಾಂಡ್ ಅನ್ನು ಕೂಡ ನೋಡಿದರೆ ಗೊತ್ತಾಗುತ್ತದೆ. ಅಭಿಯಾಚನೆ ಒಂದರಲ್ಲಿ ಆಗ್ರೋ ಇಂಡಸ್ಟ್ರೀಸ್‌ಗೆ ೨೫ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಮಾನ್ಯ ಮಂತ್ರಿಗಳಿಗೆ ಗೊತ್ತು ನಾಲ್ಕೂವರೆ ಕೋಟಿ ಮಿಸ್ ಅಪ್ರೊಪ್ರಿಯೇಷನ್ ಇದೆ ಎಂದು ಸರಕಾರದ ಆಡಿಟರ್‌ರವರೇ ಇದನ್ನು ಹೇಳಿದ್ದಾರೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ ಅಲ್ಲಿನ ಹೆಗ್ಗಣಗಳು, ಬುಲ್‌ಡೋಜರ್‌ಗಳೇ ಇದನ್ನು ತಿಂದು ಹಾಕಿದ್ದಾರೆ. That is the report of Sri Channabassappa District Judge, ಇವತ್ತು ಅವರನ್ನು ಹಂಡುಕುತ್ತಿದ್ದಾರೆ. ಅಲ್ಲಿ ನಾಲ್ಕೂವರೇ ಕೋಟಿ ರೂಪಾಯಿ ನಷ್ಟದಲ್ಲಿದೆ ಪುನಃ ೨೫ ಲಕ್ಷ ರೂಪಾಯಿಗಳನ್ನು ಕೇಳುತ್ತಿದ್ದಾರೆ. ಅಲ್ಲಿನ ಹೆಗ್ಗಣಗಳನ್ನು ಕಂಟ್ರೋಲ್ ಮಾಡಿದರೆ ಸಾಕು ೩-೪ ಕೋಟಿ ರೂಪಾಯಿ ಸಿಗುತ್ತದೆ ಮ್ಯಾನೇಜಿಂಗ್ ಡೈರೆಕ್ಟರ್, ಇಂತಹ ಇಬ್ಬರು ಮೂವರು ಜನರನ್ನು ಕಂಟ್ರೋಲ್ ಮಾಡಿದರೆ ಸಾಕು. ಅಣ್ಣ ತಮ್ಮಂದಿರ ಹೆಸರಿನಲ್ಲಿ ಹೆಂಡತಿಯ ಹೆಸರಿನಲ್ಲಿ ಫರ್ಮ್ಸ್ ಮಾಡಿಕೊಂಡು ಅವರ ಹೆಸರಿಗೆ ಟ್ರಾನ್ಸ್‌ಫರ್ ಮಾಡಿಕೊಳ್ಳುತ್ತಿದ್ದಾರೆ. ಸರಕಾರದ ಆಡಿಟರ್‌ವರೇ ಹೇಳಿದ್ದಾರೆ, ಇದರ ಜೊತೆಗೆ ೨೫ ಲಕ್ಷ ರೂಪಾಯಿ ಕೊಡಬೇಕೆಂದು ಹೇಳುತ್ತಿದ್ದೀರಿ ಇದು ಒಪ್ಪತಕ್ಕದ್ದೇ ? ಇನ್ನು ಅಭಿಯಾಚನಾ ಕ್ರಮಾಂಕ-೪ ಅನ್ನು ತೆಗೆದುಕೊಂಡರೆ ಅದು ಹಿಂದೆ ಮಾನ್ಯ ಬೈರೇಗೌಡರಲ್ಲಿ ಇತ್ತು ಈಗ ಶ್ರೀ ಕೃಷ್ಣಾರೆಡ್ಡಿಯವರಿಗೆ ಬಂದಿದೆ ಹಣ ವಿನಿಯೋಗ ಮಾಡಿರುವುದು ಒಳನಾಡು ಮೀನುಗಾರಿಕೆಗೆ ೩೮,೩೦,೦೦೦ ಕೇಳಿದ್ದಾರೆ. ನೀರು ಇಲ್ಲದ ಕಡೆಗಳಲ್ಲಿ ಮೀನುಗಾರಿಕೆ ಮಾಡುವ ಬಗ್ಗೆ ಮಾನ್ಯ ಬೈರೇಗೌಡರು ಅಧಿಕಾರದಲ್ಲಿದ್ದಾಗ ಕೆಲವರು ಒಂದು ಕಂಪ್ಲೇಂಟ್ ಮಾಡಿದ್ದರು ನಮ್ಮ ಕಡೆಯ ಕೆರೆಗಳಲ್ಲಿ ಪಾಂಡ್ಸ್ ಅನ್ನು ಕಟ್ಟಿದರು ಎರಡು ಇಂಚು ಮಳೆ ಬಂದರೆ ಹೋಗುತ್ತದೆ ಎಂದು ನಾವು ಅಧಿಕಾರಿಗಳಿಗೆ ವಾರನ್ ಮಾಡಿದೆ ಅನ್ಯಾಯವಾಗಿ ಒಂದೊಂದು ಕಡೆ ೧-೨ ಲಕ್ಷ ರೂಪಾಯಿ ಖರ್ಚು ಮಾಡುತ್ತಿದ್ದೀರಿ, ೧೫ ದಿವಸ ಇರುತ್ತದೆ ಮಳೆ ಬಂದರೆ ಮುಚ್ಚಿ ಹೋಗುತ್ತದೆ ಸರಕಾರದ ದುಡ್ಡನ್ನು ಹಾಳುಮಾಡಬೇಡಿ ಎಂದು. ಈಗ ಮೀನುಗಾರಿಕೆಗೆ ೩೮,೩೦,೦೦೦ ರೂಪಾಯಿ ಕೇಳುತ್ತಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಇದರಲ್ಲಿ ವೆಂಕಟರಾಮಯ್ಯನವರದು ಸ್ವಲ್ಪ ಸ್ವಾರ್ಥ ಇದೆ ನೀರಿಲ್ಲದ ಕಡೆ ಮೀನುಗಾರಿಕೆ ಮಾಡುತ್ತಿದ್ದಾರೆಂದು ಹೇಳುತ್ತಿದ್ದಾರೆ, ಅಂಥ ಕಡೆಯವರನ್ನೆ ಮೀನುಗಾರಿಕೆ ಮಂತ್ರಿಗಳನ್ನಾಗಿ ಮಾಡಿದ್ದಾರೆ ಅದಕ್ಕೆ ಇವರೇನನ್ನೂ ಹೇಳುವುದಿಲ್ಲ. ಇದು ಉಪಯೋಗವಾಗಿದ್ದಿದ್ದರೆ ನಿಜವಾಗಿ ಇದನ್ನು ವೆಲ್ಕಮ್ ಮಾಡಬಹುದಾಗಿತ್ತು. ಇದರ ಬಗ್ಗೆ ಒಂದು ವಿವರಣೆಯನ್ನು ಕೊಡಬಹುದಾಗಿತ್ತು. ಇಷ್ಟು ಖರ್ಚು ಹೇಗೆ ಆಯಿತು ಎಂದು ವಿವರಣೆ ಕೊಡದಿದ್ದರೆ ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಮೂರನೆಯದು ಶಿಕ್ಷಣದ ಬಗ್ಗೆ ನಮ್ಮ ವಿದ್ಯಾಮಂತ್ರಿಗಳು ಅಭಿಯಾಚನೆ ೧೦ ಪೇಜ್ ೧೨ರಲ್ಲಿ ಏಷ್ಯಾ ಅಧ್ಯಯನ ಸಂಸ್ಥೆ, ಮದ್ರಾಸ್, ಇದಕ್ಕೆ ೨ ಲಕ್ಷ ೫೦ ಸಾವಿರ ರೂಪಾಯಿಗಳನ್ನು ಕೊಡಬೇಕಾಗಿದೆ ಎಂದು ತಿಳಿಸಿದ್ದಾರೆ. ಇದು ನಿಜವಾದ ಸಂಸ್ಥೆಯೇ ಅಥವಾ ಬೋಗಾಸ್ ಸಂಸ್ಥೆಯೇ ಎಂದು ತಿಳಿಸಬೇಕು. ಹಾಗೂ ಈ ಸಂಸ್ಥೆಗೆ ಹಣ ಕೊಡುವುದು ಬೇಕಾಗಿರಲಿಲ್ಲವೆಂದು ಕಾಣುತ್ತದೆ. ಕರ್ನಾಟಕಕ್ಕೆ ಉಪಯೋಗವಾಗುವ ಸಂಸ್ಥೆ ಆಗಿದ್ದಿದ್ದರೆ ಹಣ ಕೊಡಬಹುದಾಗಿತ್ತು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆ ಮೇಲೆ ಕಲೆ, ಸಂಸ್ಕೃತಿಗಳನ್ನು ನವದೆಹಲಿಯಲ್ಲಿ ತೋರಿಸುವುದಕ್ಕೆ ೧೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಹಣವನ್ನು ಖರ್ಚು ಮಾಡಬೇಕಾಗಿರಲಿಲ್ಲ. ಡಿಮ್ಯಾಂಡ್ ೧೦, ಪೇಜ್ ೧೪ರಲ್ಲಿ ಅರಣ್ಯ ಇಲಾಖೆದು ಇದೆ

ಅರಣ್ಯ ಇಲಾಖೆಗೆ ೬೩ ಲಕ್ಷ ೨೩ ಸಾವಿರ ರೂಪಾಯಿಗಳನ್ನು ಕೇಳಿದ್ದಾರೆ. ಇವರು ಹಾಕಿ ಉಳಿದಿರುವ ಗಿಡಗಳೇನಾದರೂ ಇದ್ದಿದ್ದರೆ ಕರ್ನಾಟಕದಲ್ಲಿ ಜಾಗವೇ ಇರುತ್ತಿರಲಿಲ್ಲ. ಒಂದು ವರ್ಷಕ್ಕೆ ಎರಡು ಕೋಟಿ ಮೂರು ಕೋಟಿ ಗಿಡಗಳನ್ನು ನೆಡುತ್ತಾರೆ. ದುರಾದೃಷ್ಟವಶಾತ್ ಇವರು ಹಾಕಿದ ಗಿಡಗಳು ಮರಗಳಾಗುತ್ತಿಲ್ಲ. ಇವರು ಹಾಕಿದ ಗಿಡಗಳಲ್ಲಿ ಹತ್ತನೇ ಒಂದು ಭಾಗ ಉಳಿದರೂ ನಮ್ಮ ರಾಜ್ಯದಲ್ಲಿ ಗ್ರೀನರಿ ಇರಬೇಕಾಗಿತ್ತು. ದುರಾದೃಷ್ಟವಶಾತ್ ಆ ತರಹ ಏನೂ ಆಗಿಲ್ಲ. ತಮಗೆ ತಿಳಿದಿರುವ ಹಾಗೇ ಅರಣ್ಯ ಇಲಾಖೆಯಲ್ಲಿ ಬಹಳ ಮೋಸ ನಡೆಯುತ್ತಿದೆ. ಎಲ್ಲಾ ಇಲಾಖೆಗಳಿಗಿಂತ ಜಾಸ್ತಿ ಸಂಪಾದನೆ ಮಾಡುವ ಇಲಾಖೆ ಎಂದರೆ ಅರಣ್ಯ ಇಲಾಖೆಯೆಂದು ಜನ ಹೇಳುತ್ತಾರೆ, ಆ ಮೇಲೆ ಅಭಿಯಾಚನೆ ಕ್ರಮಾಂಕ ೨೭, ಪೇಜ್ ೨೯ರಲ್ಲಿ ದಸರ ಉತ್ಸವಕ್ಕೆ ಹೆಚ್ಚುವರಿಯಾಗಿ ೧೫,೭೫ ಲಕ್ಷ ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಇದು ಮಾಡುವುದು ಬೇಕಾಗಿರಲಿಲ್ಲ. ಬರಗಾಲಕ್ಕೆ ಸಿಕ್ಕಿ ನಾವು ಹೋದ ಸಾರಿ ಬಹಳ ಕಷ್ಟಪಟ್ಟಿದ್ದೇವೆ. ಈ ಹಣದಿಂದ ನಮ್ಮ ರೈತರಿಗೆ ಅನುಕೂಲ ಮಾಡಿಕೊಟ್ಟಿದ್ದಿದ್ದರೆ ಇವರಿಗೆ ವಂದಿಸಬಹುದಾಗಿತ್ತು. ಇದನ್ನು ಒಪ್ಪತಕ್ಕಂಥಾದ್ದಲ್ಲ. ಇನ್ನೂ ಒಂದು ವಿಷಯ ಸ್ವಾಮಿ, ಅಭಿಯಾಚನೆ ಕ್ರಮಾಂಕ ೨೯ರಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ವೆಹಿಕಲ್ ತೆಗೆದುಕೊಳ್ಳುವುದಕ್ಕೆ ೬೧ ಲಕ್ಷ ರೂಪಾಯಿಗಳನ್ನು ಕೇಳಿದ್ದಾರೆ. ಈಗಾಗಲೇ ಹೆಲ್ತ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿರುವ ವೆಹಿಕಲ್‌ಗಳು ಕೆಟ್ಟು ಎಲ್ಲಿ ನೋಡಿದರೂ ನಿಂತುಕೊಂಡಿವೆ. ಒಳ್ಳೆಯ ಕಂಡೀಷನ್‌ನಲ್ಲಿ ಇದ್ದು ಸ್ವಲ್ಪ ಕೆಟ್ಟಿದ್ದರೂ ರಿಪೇರಿ ಮಾಡಿಸದೆ ಮೂಲೆಗೆ ತಳ್ಳಿರುತ್ತಾರೆ ಇವುಗಳನ್ನೇ ರಿಪೇರಿ ಮಾಡಿಸಿದರೆ ಇವರಿಗೆ ಬೇಕಾಗುವಷ್ಟು ವೆಹಿಕಲ್ಸ್‌ಗಳು ಸಿಗುತ್ತವೆ ೬೦ ವಾಹನಗಳನ್ನು ಕೊಳ್ಳುವುದಕ್ಕೆ ೬೧ ಲಕ್ಷ ರೂಪಾಯಿಗಳನ್ನು ಕೇಳಿರುವುದು ಸರಿಯಲ್ಲ. ಆಮೇಲೆ ಮಂತ್ರಿಗಳ ಖರ್ಚಿಗಾಗಿ ೧೦ ಲಕ್ಷ ರೂಪಾಯಿಗಳನ್ನು ಹೆಚ್ಚು ಕೇಳಿದ್ದಾರೆ, ಈಗ ಮಂತ್ರಿ ಮಂಡಲದ ಸಂಖ್ಯೆ ೧೫ಕ್ಕೆ ಇಳಿದಿದೆ. ೧೫ ಜನ ಮಂತ್ರಿಗಳಿರುವಾಗ ಇನ್ನೂ ೧೨ ಲಕ್ಷ ರೂಪಾಯಿಗಳು ಹೆಚ್ಚಿಗೆ ಏಕೆ ಬೇಕು ಸ್ವಾಮಿ ? ಹಣದ ಅವಶ್ಯಕತೆ ಏನಿತ್ತು ? ವಿ.ಎಲ್. ಪಾಟೀಲ್‌ರವರು ಮಂತ್ರಿಯಾಗಿದ್ದರು ಈಗ ಅವರೂ ನಮ್ಮ ಜೊತೆಗೆ ಬಂದು ಬಿಟ್ಟಿದ್ದಾರೆ. ಅಂದರೆ, ಅವರೂ ಎಂ.ಎಲ್.ಎ. ಆಗಿಯೇ ಇದ್ದಾರೆ. ಮಂತ್ರಿಗಳ ವೆಚ್ಚಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಏಕೆ ಕೇಳುತ್ತೀರೋ ಗೊತ್ತಾಗುತ್ತಿಲ್ಲ. ದಯವಿಟ್ಟು ಇದನ್ನು ಮಾಡಬೇಡಿ. ದುಂದು ವೆಚ್ಚ ಮಾಡುವುದು ಬೇಡ. ನಮ್ಮ ರಾಜ್ಯದಲ್ಲಿ ಈಗಾಗಲೇ ಡೆಫಿಸಿಟ್ ಬಜೆಟ್‌ನ್ನು ಪ್ರೆಸೆಂಟ್ ಮಾಡಿದ್ದೀರಿ. ಹೋದ ಸಾರಿ ತೋರಿಸಿದ ಡೆಫಿಸಿಟ್ ಬಜೆಟ್ ಇನ್ನೂ ಕ್ಲಿಯರ್ ಮಾಡುವುದಕ್ಕೆ ಆಗಿಲ್ಲ. ಇದರ ಬಗ್ಗೆ ಸ್ವಲ್ಪ ವಿವರ ಕೇಳಬೇಕಾಗುತ್ತದೆ ಅಭಿಯಾಚನೆ ಕ್ರಮಾಂಕದಲ್ಲಿ ಶೈತ್ಯಾಗಾರಗಳನ್ನು ಮತ್ತು ಸಂಸ್ಕರಣ ಘಟಕಗಳನ್ನು ಕಟ್ಟುವುದಕ್ಕೆ ಹಣ ಕೇಳಿದ್ದಾರೆ. ನಮ್ಮ ಕೋಲಾರದಲ್ಲಿ ಒಂದು ಶೈತ್ಯಾಗಾರವನ್ನು ಕಟ್ಟುವುದಕ್ಕೆ ಸುಮಾರು ವರ್ಷಗಳ ಹಿಂದೆ ಒಂದು ಸ್ಕೀಮ್‌ನ್ನು ಹಾಕಿ ಕೆಲಸವನ್ನು ಪ್ರಾರಂಭ ಮಾಡಿದರು. ಆಗ ಅದರ ಎಸ್ಟಿಮೇಟ್ ಎರಡು ಲಕ್ಷ ರೂಪಾಯಿ ಇತ್ತು. ಈಗ ಅದರ ಎಸ್ಟಿಮೇಟ್ ವೆಚ್ಚ ೨೦ ಲಕ್ಷ ರೂಪಾಯಿಗಳಾಗಿವೆ. ಈಗ ಟೊಮ್ಯಾಟೋ ೫೦ ಪೈಸೆಗೆ ಒಂದು ಕೇಜಿ ಸಿಗುತ್ತಿದೆ. ಶೈತ್ಯಾಗಾರಗಳನ್ನು ಮಾಡಿದ್ದಿದ್ದರೆ ಟೊಮ್ಯಾಟೋವನ್ನು ಶೈತ್ಯಾಗಾರದಲ್ಲಿ ಇಟ್ಟು ರಕ್ಷಿಸಬಹುದಾಗಿತ್ತು. ನಮ್ಮ ಕೋಲಾರದಲ್ಲಿ ಶೈತ್ಯಾಗಾರವನ್ನು ಕಟ್ಟಿದ್ದೂ ಕಟ್ಟಿದ್ದೇ ನನ್ನ ಚಿಕ್ಕಂದಿನಿಂದಲೂ ಕಟ್ಟುತ್ತಿದ್ದಾರೆ, ಇನ್ನೂ ಪೂರ್ಣವಾಗಿಲ್ಲ. ರೈತರುಗಳಿಗೆ ಒಂದು ಪೈಸೆಯಷ್ಟೂ ಅನುಕೂಲ ಆಗುತ್ತಿಲ್ಲ, ಕಡೆಯದಾಗಿ ಒಂದು ವಿಷಯ ಮಾತ್ರ ಹೇಳುತ್ತೇನೆ. ಅಭಿಯಾಚನೆ ಕ್ರಮಾಂಕ ೫೮ರ ಬಗ್ಗೆ ಮೊಯಿಲಿಯವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಮಂಡಲ ಪಂಚಾಯಿತಿ ಸದಸ್ಯರುಗಳನ್ನು ಬೆಂಗಳೂರಿಗೆ ಕರೆಸಿದ್ದುದರ ಬಗ್ಗೆ ಅವರಿಗೆ ಟ್ರೈನಿಂಗ್ ಕೊಡುವುದಕ್ಕೆ ಕರೆಸಿದ್ದೆವು ಎಂದು ಹೇಳಿದರು. ಆದರೆ, ದುರಾದೃಷ್ಟವಶಾತ್ ಏನಾಗಿದೆ ಎಂದರೆ, ಒಂದು ಊಟಕ್ಕೆ ೨೨ ರೂಪಾಯಿಗಳ ಪ್ರಕಾರ ಕಾವೇರಿ ಇಂಟರ್‌ನ್ಯಾಷನಲ್‌ಗೆ ಕಾಂಟ್ರಾಕ್ಟ್ ಕೊಟ್ಟರು.

ಇದನ್ನು ಡಿ.ಸಿ. ಹೋಗಿ ಹಿಡಿದಿದ್ದಾರೆ. ಯಾವನೋ ಒಬ್ಬ ೬ ಲಕ್ಷಕ್ಕೆ ಟೋಪಿ ಹಾಕಿದರು. ಆ ಊಟದಲ್ಲಿ ಇದ್ದವರು ಒಂದು ಸಾವಿರ ಜನ ಇದ್ದರು. ಅಲ್ಲಿ ೨-೩ ಕ್ಯೂ ಇದ್ದುದನ್ನು ನೋಡಿ ಕೆಲವರು ಊಟ ತೆಗೆದುಕೊಳ್ಳದೇ ಹಾಗೆಯೇ ಹೋದರು ಕೆಲವರು ಊಟ ಮಾಡುವುದಕ್ಕೆ ಸಾಧ್ಯವೇ ಇಲ್ಲ ಎಂದು ಹಾಗೆಯೇ ಹೋದರು.

೬ ಲಕ್ಷಕ್ಕೆ ಅವನು ಏನು ಟೋಪಿ ಹಾಕಿದ್ದಾನೆ ಅದನ್ನು ಅದನ್ನು ಇಲ್ಲಿ ವಜಾ ಮಾಡಿ ಎಂದು ಇಲ್ಲಿ ಕೇಳಿದ ಹಾಗಾಗುತ್ತದೆ. ನಾನು ಹೇಳುತ್ತೇನೆ ಇನ್ನು ಮುಂದಾದರೂ ಕೂಡ ಇಂಥಾದ್ದಕ್ಕೆ

ಅವಕಾಶ ಕೊಡಬಾರದು. ಇದಕ್ಕೆ ಖರ್ಚು ಏನು ತೋರಿಸಿದ್ದೀರಿ ಒಟ್ಟು ೯೨ ಕೋಟಿ ರೂಪಾಯಿಗಳಲ್ಲಿ ಇದರ ಅರ್ಧದಷ್ಟಾದರೂ ಸರ್ಕಾರಕ್ಕೆ ನಷ್ಟವಾಗಿದೆ. ಎನ್ನುವ ಒಂದು ಅಂದಾಜು ಇನ್ನು ಮುಂದಾದರೂ ಸಂಬಂಧಪಟ್ಟ ಇಲಾಖೆಯವರು ಈ ಬಗ್ಗೆ ಎಚ್ಚರಿಕೆ ವಹಿಸಿ ಹೆಚ್ಚು ವ್ಯಯ ಮಾಡದ ಹಾಗೆ ನೋಡಿಕೊಳ್ಳಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).— ಮಾನ್ಯ ಸಭಾಧ್ಯಕ್ಷರೇ, ೧೯೮೭–೮೮ನೆಯ ವರ್ಷದ ಪೂರಕ ಅಂದಾಜುಗಳಿಗೆ (ಎರಡನೆಯ ಕಂತು) ಸೇರಿದ ಒಟ್ಟು ೨೮೩ ಕೋಟಿ ರೂಪಾಯಿ ೬೮ ಲಕ್ಷ ರೂಪಾಯಿ ಮೊತ್ತದ ಬಗ್ಗೆ ನಾವು ಒಪ್ಪಿಗೆ ಕೊಡಬೇಕಾಗಿದೆ. ಆದರೆ ಇದು ಅಗತ್ಯವಾಗಿ ಇರತಕ್ಕಂಥದ್ದೇ ಇದು ಅನಿವಾರ್ಯವಾಗಿರತಕ್ಕಂಥಾದ್ದು ಎಂದು ತಿಳಿದುಕೊಂಡು ನಾವು ಇದಕ್ಕೆ ಒಪ್ಪಿಗೆ ಕೊಡಲೇ ಬೇಕಾಗಿದೆ. ಆದರೆ ನಾನು ಒಂದು ಮಾತು ಹೇಳುತ್ತೇನೆ. ಈ ಅಧಿಕಾರಿಗಳ ಅಲಕ್ಷ್ಯದಿಂದ ಆಗಿರತಕ್ಕಂಥಾ ಈ ವ್ಯಯಕ್ಕೆ, ಇದರ ಬಗ್ಗೆ ನನ್ನ ವಿರೋಧ ಇದೆ.

ಇನ್ನು ಈ ಪೂರಕ ಅಂದಾಜಿನ ಪುಸ್ತಕದಲ್ಲಿ ೫ನೇ ಪೇಜಿನಲ್ಲಿ ಏನು ಹೇಳಿದ್ದೀರಿ ಎಂದರೆ ಕರ್ನಾಟಕ ಹಾಲು ಉತ್ಪಾದಕರ ಸಹಕಾರ ಮಹಾಸಂಘಕ್ಕೆ ಡೈರಿಗಳಿಂದಾಗಿರುವ ನಷ್ಟವನ್ನು ತುಂಬಿಕೊಡಲು ೨೦೦.೦೦ ಲಕ್ಷ ರೂಪಾಯಿಗಳ ಅಧಿಕ ಮೊತ್ತ ಉಂಟಾಗಿವೆ ಎಂದು ಹೇಳಿದ್ದೀರಿ. ನಾನು ಇದರ ಬಗ್ಗೆ ಕೇಳುವುದೇನೆಂದರೆ ಇದು ಏತಕ್ಕೆ ನಷ್ಟವಾಯಿತು? ಅಥವಾ ಇದರಿಂದ ರೈತರಿಗೇನಾದರೂ ಲಾಭವಾಯಿತೇ, ಅಥವಾ ಬೇರೆಯವರು ಏನಾದರೂ ಅನುಕೂಲ ಮಾಡಿಕೊಂಡರೆ, ಅದರ ವಿವರ ಇರಲಿಲ್ಲ, ಇದರ ಬಗ್ಗೆ ಬಡ್ಜೆಟ್‌ನಲ್ಲಿ ಚರ್ಚೆ ಮಾಡಿದಾಗಲೂ ಕೂಡ ವಿವರ ಇರಲಿಲ್ಲ. ಆದುದರಿಂದ ಈ ೨೦೦ ಲಕ್ಷ ಏನು ಇದೆ ಈ ನಷ್ಟ ಬಹಳ ವ್ಯರ್ಥವಾದ ಹಣ. ಇದಕ್ಕೆ ಕಾರಣ ಏನು ಎನ್ನುವುದರ ಬಗ್ಗೆ ವಿವರ ಕೊಡಬೇಕೆಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಈ ಪೂರಕ ಅಂದಾಜಿನ ಪುಸ್ತಕದ ಪೇಜ್ ೩ರಲ್ಲಿ ಮುಖ್ಯವಾಗಿ ಇರತಕ್ಕಂಥಾದು ನೋಡಿದರೆ ಇಷ್ಟೊಂದು ಧೈರ್ಯ ಅಧಿಕಾರಿಗಳಿಗೆ ಇದ್ದಕ್ಕಿದ್ದ ಹಾಗೆ ಹೇಗೆ ಬರುತ್ತದೆ. ಅನ್ನುವುದು ಗೊತ್ತಾಗುತ್ತದೆ. ಉದಾಹರಣೆಗೆ ಹೇಳುವುದಾದರೆ ಇದರಲ್ಲಿ ವರಲಕ್ಷ್ಮಿ ಮತ್ತು ಜಯಲಕ್ಷ್ಮಿ ಹತ್ತಿ ಬೀಜವನ್ನು ಸಂಗ್ರಹಿಸುವ ಮತ್ತು ವಿತರಣೆ ಮಾಡುವ ಕಾರ್ಯವನ್ನು ಕರ್ನಾಟಕ ರಾಜ್ಯ ಬೀಜ ನಿಗಮಕ್ಕೆ ವಹಿಸಲಾಗಿತ್ತು ಬೇರೆ ರಾಜ್ಯಗಳಿಂದ ಬಂದ ನಕಲಿ ಬೀಜಗಳಿಂದಾಗಿ ನಿಗಮಕ್ಕೆ ಸುಮಾರು ೨, ೩ ಕೋಟಿ ರೂಪಾಯಿಗಳ ನಷ್ಟ ಸಂಭವಿಸಿತು. ಸರಕಾರವು ನಷ್ಟವನ್ನು ತುಂಬಿಕೊಡಬೇಕಾಗಿದೆ. ಆದುದರಿಂದ ೨.೧೦ ಕೋಟಿ ರೂಪಾಯಿಗಳನ್ನು ಬೇಡಿಕೆಗೆ ಸೇರಿಸಿದೆ ಎಂದು ಹೇಳಿದ್ದೀರಿ. ನಾನು ಕೇಳುತ್ತೇನೆ. ಈಮೊತ್ತು ಈ ನಕಲಿ ಬೀಜಗಳನ್ನು ಕೊಂಡುಕೊಳ್ಳತಕ್ಕಂಥ ಕೆಲಸ ಮಾಡಿದವರು ಯಾವ ಅಧಿಕಾರಿಗಳು? ನಮ್ಮ ರಾಜ್ಯದಲ್ಲಿರುವ ಬೀಜಗಳನ್ನು ಸ್ಟಾಕ್ ಮಾಡಿಕೊಂಡು ಬೇರೆ ರಾಜ್ಯದಿಂದ ನಕಲಿ ಬೀಜಗಳನ್ನು ತೆಗೆದುಕೊಂಡು ಬಂದು ಅದು ಅಗ್ಗದ ಬೆಲೆಗೆ ಸಿಕ್ಕುತ್ತದೆ ಎಂದು ತೆಗೆದುಕೊಂಡು ಬಂದು ಇಲ್ಲಿ ರೈತರನ್ನು ಹಾಳು ಮಾಡುವುದಕ್ಕೆ ಮಾಡಿದ್ದಿರಾ? ಇಲ್ಲದೇ ಹೋದರೆ ಇದು ಏತಕ್ಕೆ ಲುಕ್ಸಾನು ಆಯಿತು?

ಶ್ರೀ ಆರ್.ಎಲ್. ಜಾಲಪ್ಪ.— ನಾವು ಬೇರೆ ರಾಜ್ಯದಿಂದ ಬೀಜವನ್ನು ತಂದದ್ದು ಇಲ್ಲಿ ರೈತರಿಗೆ ಸಹಾಯ ಮಾಡುವುದಕ್ಕೋಸ್ಕರ, ಅವರಿಗೆ ಎನ್‌ಕರೇಜ್‌ಮೆಂಟ್ ಮಾಡುವುದಕ್ಕೋಸ್ಕರ ಅದನ್ನು ತಂದದ್ದು. ನಮ್ಮ ಹತ್ತಿರ ಇರುವುದನ್ನು ಸ್ಟಾಕ್ ಮಾಡಿಕೊಂಡು ಅಗ್ಗದ ಬೆಲೆಯ ಬೀಜವನ್ನು ಕೊಡಬೇಕೆಂದು ಮಾಡಿದ್ದೆವು. ಆದರೆ ದುರಾದೃಷ್ಟವಶಾತ್ ಬೇರೆ ರಾಜ್ಯದಿಂದ ಅಗ್ಗ ಬೆಲೆಯಲ್ಲಿ ಕೊಂಡು ಕೊಂಡಂಥಾ ಬೀಜವನ್ನು ರೈತರು ತೆಗೆದುಕೊಳ್ಳಲಿಲ್ಲ. ಬೇರೆ ಕಡೆ ತಗೆದುಕೊಂಡರು ನಾವು ಏನು ಸ್ಟಾಕ್ ಮಾಡಿದ್ದೆವು ಅದೂ ಸಹ ಹಾಗೆಯೇ ಉಳಿಯಿತು. ಆದರಿಂದ ನಮಗೆ ಲಾಸ್ ಆಯಿತು. ನಾವು ಬೇರೆ ರಾಜ್ಯದಿಂದ ತಂದಂಥ ಬೀಜದಿಂದ ನಷ್ಟವಾಗಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.— ತಾವು ಬೇರೆ ರಾಜ್ಯದಿಂದ ತಂದಂಥಾ ಬೀಜದಿಂದ ಏನೂ ನಷ್ಟವಾಗಿಲ್ಲ. ನಮ್ಮ ರಾಜ್ಯದಲ್ಲಿ ಏನು ಸ್ಟಾಕ್ ಮಾಡಿದ್ದೆವೋ ಅದರಿಂದ ಲಾಸ್ ಆಗಿದೆ. ಅವರು ಬೇರೆ ಕಡೆಗೆ ಹೋಗಿ ಬೀಜವನ್ನು ತೆಗೆದುಕೊಂಡು ಬಂದಿದ್ದಾರೆ. ಇಲ್ಲಿ ಕೊಂಡುಕೊಳ್ಳಲಿಲ್ಲ ಎಂದು ಹೇಳಿದಿರಿ. ನೀವು ಇದರ ಬಗೆ ಸರಿಯಾದ ಪ್ರಚಾರ ಮಾಡಬೇಕಾಗಿತ್ತು .

ಶ್ರೀ ಆರ್. ಎಲ್. ಜಾಲಪ್ಪ.— ನಾವು ಅದರ ಬಗ್ಗೆ ರೇಡಿಯೋದಲ್ಲಿ ಪ್ರಸಾರ ಮಾಡಿದ್ದೇವೆ. ಪತ್ರಿಕೆಗಳಲ್ಲಿ ಹಾಕಿಸಿದ್ದೇವೆ. ನಾವು ಇನ್ನೇನು ಮಾಡಬೇಕಾಗುತ್ತದೆ. ಅವರನ್ನು ಇದನ್ನು ಕೊಂಡುಕೊಳ್ಳಿ. ಎಂದು ಅವರ ಮನೆ ಮನೆಗೆ ಹೋಗಿ ಹಿಡಿದುಕೊಂಡು ಬರಬೇಕೇನು?

ಶ್ರೀ ಬಿ. ಎಸ್. ಯಡಿಯೂರಪ್ಪ.— ಸರ್ಕಾರದವರು ಬೇರೆ ರಾಜ್ಯದಿಂದ ಇಂತಹ ಬೀಜಗಳನ್ನು ತಂದಾಗ ರೈತರು ಅದನ್ನೇ ಕೊಂಡುಕೊಳ್ಳಲಿಕ್ಕೆ ಸರಿಯಾಗಿ ಗಮನ ಕೊಡಬೇಕಾಗಿತ್ತು.

ಆದ್ದರಿಂದ ಇದರ ಬಗ್ಗೆ ಅಧಿಕಾರಿಗಳು ಮುಂದಾಲೋಚನೆಯನ್ನು ಮಾಡಬೇಕಾಗಿತ್ತು. ಮುಂದಾಲೋಚನೆ ಮಾಡಿದ್ದರೆ ೨ ಕೋಟಿ ೧೩ ಲಕ್ಷ ರೂಪಾಯಿಗಳಷ್ಟು ಹಣವನ್ನು ಧನ ಸಂದಾಯದ ಮೂಲಕ ಕೊಡುವ ಅಗತ್ಯ ಬರುತ್ತಿರಲಿಲ್ಲ.

ಮತ್ತೆ ಪೇಜ್ ೮ರಲ್ಲಿ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗೆ ೧೦ ಕೋಟಿ ರೂಪಾಯಿಗಳ ಸಾಲವನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ಕಾರ್ಖಾನೆಗೆ ಇದೇ ರೀತಿ ಎಲ್ಲಿಯವರೆಗೆ ಹಣ ಕೊಡುತ್ತಾ ಹೋಗುತ್ತೀರಿ ?

ಶ್ರೀ ಆರ್. ಎಲ್. ಜಾಲಪ್ಪ.—ಅದನ್ನು ಮಾರಾಟ ಮಾಡುವುದು ಬೇಡ ಎಂದು ನೀವೇ ಹೇಳುತ್ತೀರಿ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರೀತಿ ಒಂದೊಂದು ಸಲಕ್ಕೆ ಹತ್ತತ್ತು ಕೋಟಿ ರೂಪಾಯಿಗಳ ಸಾಲ ಕೊಡುವುದಕ್ಕೆ ಬದಲು ಒಂದೇ ಸಲ ನೂರು ಕೋಟಿ ರೂಪಾಯಿಗಳನ್ನು ಕೊಟ್ಟು ಅದು ಲಾಭದಾಯಕವಾಗಿ ನಡೆಯುವಂತಹ ವ್ಯವಸ್ಥೆ ಮಾಡಿ. ಅದು ಬದುಕಿರಲೂ ಬಾರದು, ಸಾಯಲೂ ಬಾರದು ಎಂಬ ರೀತಿಯಲ್ಲಿ ಅದನ್ನು ನೋಡುವುದು ಸರಿಯಲ್ಲ. ಅದು ನಿಧಾನವಾಗಿ ಸಾಯುವಂತಹ ವಿಷವನ್ನು ಕೊಡುತ್ತಿದ್ದೀರಿ. ಇದು ಸರಿಯಾದ ಕ್ರಮವಲ್ಲ. ಇಲ್ಲಿ ಸರ್ಕಾರದ ಜವಾಬ್ದಾರಿ ಸಹ ಇದೆ. ಆದ್ದರಿಂದ ಅದು ಲಾಭದಾಯಕವಾಗಿ ನಡೆಯುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಪೇಜ್ ೨೯ರಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ರೂಪರೇಖೆಗಳನ್ನು ಮತ್ತು ಕಟ್ಟುಪಾಡುಗಳನ್ನು ಜನತೆಯ ಮುಂದಿಡಲು ಸರ್ಕಾರವು ವಿಶೇಷ ಪ್ರಚಾರಾಂದೋಳನವನ್ನು ಕೈಗೊಂಡ ಕಾರಣದಿಂದ ೩೫.೯೦ ಲಕ್ಷ ರೂಪಾಯಿಗಳು ಖರ್ಚಾಯಿತೆಂದು ಇಲ್ಲಿ ಹೇಳಿದ್ದೀರಿ. ಮತ್ತೆ ದಸರಾ ಉತ್ಸವದ ಉನ್ನತ ಸಮಿತಿಯ ಶಿಫಾರಸ್ಸಿನ ಮೇರೆಗೆ ಹೆಚ್ಚಿನ ಸಾಂಸ್ಕೃತಿಕ ಚಟುವಟಿಕೆಗಳನ್ನು ಅಳವಡಿಸಿದುದರಿಂದ ೧೫.೭೫ ಲಕ್ಷ ರೂಪಾಯಿಗಳಷ್ಟು ಅಧಿಕ ವೆಚ್ಚವಾಗಿದೆ ಎಂದು ಇಲ್ಲಿ ಹೇಳಿದ್ದೀರಿ. ಈ ತರಹದ ಖರ್ಚುಗಳನ್ನು ಮಾಡಿ ನಂತರ ಇದರಲ್ಲಿ ಸೇರಿಸಿದರೆ ಅದಕ್ಕೆ ಏನು ಅರ್ಥವಿದೆ ? ಇಲ್ಲಿ ನೀವು ಖರ್ಚು ಮಾಡಿರುವ ಪ್ರತಿ ಬಾಬಿನಲ್ಲಿಯೂ ಸಹ ಹಣದ ದುರುಪಯೋಗ ನಡೆದಿದೆ. ಹಣ ದುರುಪಯೋಗ ಆಗದಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯವಾಗಿತ್ತು.

ಇನ್ನು ಪುಟ ೩ರಲ್ಲಿ ವ್ಯವಸಾಯೋತ್ಪನ್ನ ಸಾಮಗ್ರಿಗಳನ್ನು ಕೊಳ್ಳಲು ಭಾರತ ಸರ್ಕಾರವು ೧೯೮೬-೮೭ನೇ ಸಾಲಿಗೆ ೧೮೫ ಲಕ್ಷ ರೂಪಾಯಿಗಳನ್ನು ಸಾಲವಾಗಿ ಮಂಜೂರು ಮಾಡಿತು. ಈ ಹಣದಲ್ಲಿ ೩೪೪ ಲಕ್ಷ ರೂಪಾಯಿಗಳನ್ನು ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಂಪನಿಗೆ ಕೊಡಲಾಗಿದೆ ಮತ್ತು ಕೀಟ ನಾಶಕಗಳನ್ನು ಉತ್ಪನ್ನ ಮಾಡಲು ಮೆ. ಹಿಂದುಸ್ಥಾನ್ ಇನ್‌ಸೆಕ್ಟಿಸೈಡ್ಸ್ ಲಿಮಿಟೆಡ್‌ನಲ್ಲಿ ಬಂಡವಾಳ ಹೂಡಲು ಆಗ್ರೋ ನಿಗಮಕ್ಕೆ ೨೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ ಎಂದು ಇಲ್ಲಿ ಹೇಳಿದ್ದಾರೆ. ಈ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಬಗ್ಗೆ ನಾವು ಇಲ್ಲಿ ಅನೇಕ ಸಲ ಪ್ರಸ್ತಾಪ ಮಾಡಿದ್ದೇವೆ. ಇವೊತ್ತು ಈ ಕಾರ್ಪೊರೇಷನ್ ಸ್ಥಿತಿ ಏನಾಗಿದೆ, ನೀವು ಕೊಡುತ್ತಿರುವ ಹಣ ಸರಿಯಾಗಿ ಸದ್ವಿನಿಯೋಗವಾಗುತ್ತಿದೆಯೋ ಮತ್ತು ಇದರಿಂದ ರೈತರಿಗೆ ಅನುಕೂಲವಾಗುತ್ತಿದೆಯೋ ಎಂಬುದನ್ನು ನಾವು ನೋಡಬೇಕಾಗಿದೆ ಈ ಕಾರ್ಪೊರೇಷನ್ ಮೂಲಕ ಸಬ್-ಮರ್ಸಿಬಲ್ ಪಂಪ್‌ಗಳನ್ನು ಕೊಳ್ಳುವುದರಲ್ಲಿ ಸಾಕಷ್ಟು ಹಣದ ಅವ್ಯವಹಾರ ನಡೆದಿದೆ. ಫ್ರೊಟೆಕ್‌ಟೋ ಇಂಜಿನಿಯರಿಂಗ್ ಕಂಪನಿಯಿಂದ ಅಂಟ್ಲಾಂಟಾ ಎಂಬ ಹೆಸರಿನ ಪಂಪ್‌ಗಳನ್ನು ಇದೇ ಕಾರ್ಪೊರೇಷನ್ ಅವರು ಕೊಳ್ಳುವ ಸಂದರ್ಭದಲ್ಲಿ ಪ್ರತಿ ಪಂಪ್‌ಗೂ ಒಂದೂವರೆ ಸಾವಿರ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದಾರೆಂದು ನಾನು ಈ ಹಿಂದೆ ಇಲ್ಲಿ ಆಪಾದನೆ ಮಾಡಿದಾಗ ಮಾನ್ಯ ಕೃಷಿ ಸಚಿವರು ಈ ಬಗ್ಗೆ ವಿವರಗಳನ್ನು ಕೊಟ್ಟರೆ

ತನಿಖೆ ಮಾಡಿಸುತ್ತೇನೆಂದು ಹೇಳಿದರು. ಆ ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರು ನನ್ನ ಒಂದು ಪ್ರಶ್ನೆಗೆ ಉತ್ತರವಾಗಿ ಪ್ರೊಟೆಕ್‌ಟೋ ಇಂಜಿನಿಯರಿಂಗ್ ಕಂಪನಿಯಿಂದ ೧೧೨೯ ಪಂಪ್‌ಗಳನ್ನು ಕೊಳ್ಳಲಾಗಿದೆ ಎಂದು ಹೇಳಿದ್ದರು. ಆದರೆ ಅದು ಸರಿಯಲ್ಲ. ಎರಡು ಸಾವಿರಕ್ಕೂ ಹೆಚ್ಚು ಪಂಪ್‌ಗಳನ್ನು ಖರೀದಿ ಮಾಡಿದ್ದಾರೆ. ಪ್ರತಿ ಪಂಪ್‌ಗೆ ಒಂದೂವರೆ ಸಾವಿರದಷ್ಟು ಹೆಚ್ಚು ಹಣ ಕೊಟ್ಟಿದ್ದಾರೆ. ಈ ಒಂದು ವ್ಯವಹಾರದ ವಿರುದ್ಧ ಭವಾನಿ ಕಂಪನಿಯವರು ಕೋರ್ಟಿಗೆ ಹೋಗಿ ರಿಟ್ ಹಾಕಿದಾಗ ಅದು ಅಲ್ಲಿ ಅಡ್ಮಿಟ್ ಆಗಿದೆ. ಈ ಪಂಪ್‌ಗಳನ್ನು ಹೆಚ್ಚಿನ ರೇಟಿನಲ್ಲಿ ಖರೀದಿ ಮಾಡಲು ಅಲ್ಲಿನ ಮೇನೇಜಿಂಗ್ ಡೈರೆಕ್ಟರ್ ಅವರು ಒಪ್ಪಿಗೆ ಕೊಟ್ಟಿದ್ದಾರೆ. ಇದಕ್ಕೆ ಸಂಬಂಧಪಟ್ಟ ಫೈಲ್ ನಂ. ಜೀ ೩/೧ಬಿ.೮೬ ಹಾಗೂ ದಿನಾಂಕ ೧೪-೧೧-೧೯೮೬. ಒಂದು ದಿನದಲ್ಲಿ ೪೦೦ ಪಂಪ್‌ಗಳನ್ನು ಖರೀದಿ ಮಾಡಲು ಇವರಿಗೆ ಯಾರು ಅಧಿಕಾರ ಕೊಟ್ಟಿದ್ದರು ? ಆ ಕಂಪನಿಯವರ ಜೊತೆ ಇವರು ಶಾಮೀಲಾಗಿದ್ದಾರೆ. ಒಂದೊಂದು ಪಂಪ್‌ಗೂ ಒಂದೂವರೆ ಸಾವಿರದಂತೆ ಹೆಚ್ಚು ಹಣ ಕೊಟ್ಟು ಈ ಕಾರ್ಪೊರೇಷನ್‌ಗೆ ನಷ್ಟ ಉಂಟಾಗುವಂತೆ ಮಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ತನಿಖೆ ಆಗಬೇಕು. ಮತ್ತೆ ನಮ್ಮಲ್ಲಿ ರಿಗ್ ಯಂತ್ರಗಳು ಇದ್ದರೂ ಸಹ ಸರಿಯಾಗಿ ಉಪಯೋಗ ಮಾಡದೆ ಖಾಸಗಿಯವರ ರಿಗ್‌ಗಳನ್ನು ಪಡೆದು ಕೊಳವೆ ಬಾವಿ ತೆಗೆಸಿದ್ದಾರೆ. ಒಂದು ಮೀಟರ್‌ಗೆ ೧೩೦ ರಿಂದ ೧೫೦ ರೂಪಾಯಿಗಳ ದರದಲ್ಲಿ ಕೊಳವೆ ಬಾವಿ ಕೊರೆಯಲು ಕೆಲವು ಖಾಸಗಿ ಸಂಸ್ಥೆಯವರು ಸಿದ್ಧರಾಗಿದ್ದರೂ ಸಹ ಬೇರೆಯವರಿಗೆ ಇವರು ಒಂದು ಮೀಟರ್‌ಗೆ ೧೭೫ ರೂಪಾಯಿಗಳ ದರದಂತೆ ಕೊಟ್ಟಿದ್ದಾರೆ. ಕಳೆದ ಡಿಸೆಂಬರ್ ೧೯೮೫ರಲ್ಲಿ ಮೀಟರ್ ಒಂದಕ್ಕೆ ೨೫ ರೂಪಾಯಿಗಳಷ್ಟು ಹೆಚ್ಚಿನ ದರ ಕೊಟ್ಟು ಸುಮಾರು ಒಂದು ಸಾವಿರ ಬೋರ್‌ವೆಲ್‌ಗಳನ್ನು ತೆಗೆಸಿದ್ದಾರೆ. ಇಲ್ಲಿ ಸುಮಾರು ೫೦ ಸಾವಿರ ಮೀಟರ್ ಎಂದು ಲೆಕ್ಕ ಹಾಕಿದರೂ ಸಹ, ಇವರು ಹೆಚ್ಚುವರಿ ಆಗಿ ಮೀಟರ್ ಒಂದಕ್ಕೆ ೨೫ ರೂಪಾಯಿಗಳ ಪ್ರಕಾರ ಕೊಟ್ಟಿರುವುದನ್ನು ಲೆಕ್ಕ ಹಾಕಿದರೆ ಸುಮಾರು ೧೨ ಲಕ್ಷದ ೫೦ ಸಾವಿರ ರೂಪಾಯಿಗಳನ್ನು ಕಮಿಷನ್ ಹಾಗೂ ಬೇರೆ ಬೇರೆ ವಿಧಾನಗಳಲ್ಲಿ ಹಣ ಪಡೆದಿರುವುದು ಕಂಡುಬರುತ್ತದೆ. ಇಲ್ಲಿನ ಅನೇಕ ವ್ಯವಹಾರಗಳಲ್ಲಿ ಮೋಸ ನಡೆದಿದೆ. ತಮಗೆ ಬೇಕಾದವರಿಗೆ ಮಾತ್ರ ಆರ್ಡರ್‌ಗಳನ್ನು ಕೊಡುತ್ತಿರುವುದರ ಉದ್ದೇಶವಾದರೂ ಏನು ? ಈ ಕಾರ್ಪೊರೇಷನ್‌ನಿಂದ ರೈತರಿಗೆ ಯಾವ ರೀತಿಯಿಂದಲೂ ಅನುಕೂಲವಾಗುತ್ತಿಲ್ಲ. ಅಲ್ಲಿ ಇಂತಹ ಒಂದು ವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟಿರುವುದಕ್ಕೆ ಕಾರಣವೇನೆಂಬುದನ್ನು ಸರ್ಕಾರದವರು ಹೇಳಬೇಕು. ಮತ್ತೆ ಟ್ರಾಕ್ಟರ್ ಟ್ರೈಲರ್ಸ್ ಬಗ್ಗೆ ಹೇಳಬೇಕೆಂದರೆ, ಈ ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ಒಂದು ದೊಡ್ಡ ವರ್ಕ್‌ಷಾಪ್ ಇದೆ. ಕೋಲಾರ, ಮಂಡ್ಯ, ಧಾರವಾಡದಲ್ಲೆಲ್ಲಾ ವರ್ಕ್‌ಶಾಪ್ ಇದೆ. ಟ್ರೈಲರ್ಸ್‌ನ್ನು ನಾವು ಮಾರುತ್ತಾ ಇದ್ದೇವೆ. ಇಷ್ಟಿದ್ದರೂ ಹೊರಗಡೆ ಖರೀದಿ ಮಾಡಿದರು ೭೫೦-೮೦೦ ರೂಪಾಯಿಗಳನ್ನು ಜಾಸ್ತಿ ಕೊಟ್ಟು ಕೊಂಡುಕೊಂಡಿವೆ. ಕೊಯಮತ್ತೂರು, ಕೊಲ್ಲಾಪುರ ಆ ಕಡೆಯಿಂದ ಸುಮಾರು ೫೦೦ ಟ್ರೈಲರ್ಸ್‌ನ್ನು ಕೊಂಡುಕೊಂಡಿದ್ದಾರೆ. ೭೫೦-೧೦೦೦ ದಂಡ ಕೊಟ್ಟು ಕೊಂಡುಕೊಂಡಿದೆ. ಇನ್ನು ಸ್ಪ್ರಿಂಕ್ಲರ್ ಇರಿಗೇಷನ್ ಬಗ್ಗೆ ಆಶ್ಚರ್ಯ ಏನೆಂದರೆ, ಬಹುಶಃ ಈಗಾಗಲೇ ಇದು ಸರ್ಕಾರದ ಗಮನಕ್ಕೆ ಬಂದು ಲೋಕಾಯುಕ್ತಕ್ಕೆ ತನಿಖೆಗೆ ಕಳಿಸಿದ್ದಾರೆಂದು ಕೇಳಿದ್ದೇನೆ. ಅದು ಎಷ್ಟರಮಟ್ಟಿಗೆ ಸತ್ಯವೋ ಅಸತ್ಯವೋ ನನಗೆ ಗೊತ್ತಿಲ್ಲ. ಸ್ಪ್ರಿಂಕ್ಲರ್ ಬಗ್ಗೆ ಟೆಂಡರ್ ಕರೆದರು. ಪ್ರೀಮಿಯರ್ ಇರಿಗೇಷನ್ ಕಂಪನಿಯವರು ಜಿಂದಾಲ್ ಕಂಪೆನಿಯವರಿಗಿಂತ ೩೦ ಪರ್ಸೆಂಟ್ ಜಾಸ್ತಿ ಕೊಟ್ಟಿದ್ದಾರೆ, ಇವರು ಯಾರಿಗೆ ಕೊಟ್ಟರು ಅಂದರೆ ಪ್ರೀಮಿಯರ್ ಇರಿಗೇಷನ್‌ನವರಿಗೆ ಆರ್ಡರ್ ಕೊಟ್ಟರು. ಯಾರು ೩೦ ಪರ್ಸೆಂಟ್ ಜಾಸ್ತಿ ಕೊಟ್ಟಿದ್ದರು ಅವರಿಗೆ ಆರ್ಡರ್ ಕೊಟ್ಟು ೬೦ ಲಕ್ಷ ರೂಪಾಯಿಗಳ ಸ್ಪ್ರಿಂಕ್ಲರನ್ನು ಖರೀದಿ ಮಾಡಿದ್ದಾರೆ. ಕೊನೆಗೆ ಎಲ್ಲಿಗೆ ಬಂತು ಸ್ಥಿತಿ ಅಂದರೆ ಹೈಕೋರ್ಟಿನಿಂದ ಡೈರಕ್ಷನ್ ಬರಬೇಕಾಯಿತು. ಈ ರೀತಿ ಅವ್ಯವಹಾರ ಮಾಡುತ್ತಾ ಇದ್ದಾರೆ. ಖರೀದಿ ಮಾಡಬಾರದು ಎಂದು ಹೈಕೋರ್ಟಿನಿಂದ ಡೈರಕ್ಷನ್ಸ್ ಕೊಡುವಂಥ ಸ್ಥಿತಿಗೆ ಬಂತು. ಇವತ್ತು ಈ ರೀತಿ ಆಗ್ರೋ ಇಂಡಸ್ಟ್ರೀಸ್‌ನಲ್ಲಿ ಅವ್ಯವಹಾರಗಳು ನಡೆಯುತ್ತಿವೆ. ಡೈರಕ್ಷನ್ಸ್ ಕೊಟ್ಟು ಅವರಿಂದ ಖರೀದಿ ಮಾಡಬೇಡಿ, ಎಲ್ಲಿ ಕಡಿಮೆ ಇದೆ ಅಲ್ಲಿ ಖರೀದಿ ಮಾಡಬೇಕು ಎಂದು ಡೈರಕ್ಷನ್ಸ್ ಕೊಟ್ಟರೆ ಅವನು ಕೋರ್ಟಿಗೆ ಹೋದನಲ್ಲ ಎಂಬ ಹಠಕ್ಕೋಸ್ಕರ ಜಿಂದಾಲ್ ಕಂಪೆನಿಯವರಿಗೆ ಆರ್ಡರ್ ಕೊಡಲಿಲ್ಲ. ಇದರ ಪರಿಣಾಮ ೧೯೮೬-೮೭ರಲ್ಲಿ ಸುಮಾರು ೨ ಕೋಟಿ ರೂಪಾಯಿನ ಆರ್ಡರ್ ಕೊಟ್ಟರೆ ಅವರು ಮಾಡಲೇ ಇಲ್ಲ ಕೆಲಸ. ಕಡಿಮೆ ರೇಟಿಗೆ ಕೊಟ್ಟಿದ್ದರೆ ೧೦ ಪರ್ಸೆಂಟ್ ಲಾಭ ಬಂದರೂ ೨೫

ಲಕ್ಷ ಆಗ್ರೋ ಇಂಡಸ್ಟ್ರೀಸ್‌ಗೆ ಲಾಭ ಬರುತ್ತಿತ್ತು. ಈ ರೀತಿಯಾಗಿ ಅಲ್ಲಿ ನಡೆದಿರುವಂಥ ಸಂಪೂರ್ಣ ವ್ಯವಹಾರ ಅನುಮಾನಾಸ್ಪದವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ಮಾನ್ಯ ಕೃಷಿ ಸಚಿವರಿಗೆ ಈಗಾಗಲೇ ಇದು ಗೊತ್ತಿದೆ ಎಂದು ಭಾವಿಸಿದ್ದೇನೆ. ನಾನು ಪ್ರತಿಯೊಂದೂ ಲೋಕಾಯುಕ್ತಕ್ಕೆ ಹೋಗಬೇಕು ಎಂದು ಹೇಳದೆ ಸರಿಯಾದಂಥ ಒಬ್ಬ ಉನ್ನತ ನ್ಯಾಯಾಧೀಶರ ಮೂಲಕ ಇದರ ಬಗ್ಗೆ ಸಮಗ್ರವಾಗಿ ತನಿಖೆ ಮಾಡಿಸಬೇಕು. ನಾನು ಈ ಸದನದಲ್ಲಿ ಆರೋಪ ಮಾಡಿದಂಥ ಸಂದರ್ಭದಲ್ಲಿ ಮಾನ್ಯ ದೇವೇಗೌಡರು ಇದ್ದರು. ಇದರ ಬಗ್ಗೆ ಅಗತ್ಯವಾದಂಥ ವಿವರಣೆಗಳನ್ನು ಕೊಟ್ಟರೆ ತನಿಖೆ ಮಾಡಿಸುತ್ತೇನೆ ಎಂದು ಹೇಳಿದ್ದಾರೆ. ಅದಕ್ಕೋಸ್ಕರ ಸನ್ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ಸಾಕಷ್ಟು ಮಾಹಿತಿ ನಮ್ಮಲ್ಲಿದೆ. ಇವತ್ತು ರೈತರಿಗೆ ಆಗ್ರೋ ಇಂಡಸ್ಟ್ರೀಸ್‌ನಿಂದ ಅನ್ಯಾಯವಾಗುತ್ತಿದೆ. ಈ ರೀತಿ ದುರುಪಯೋಗ ಮಾಡುತ್ತಾ ಇರುವಂಥ ಅಧಿಕಾರಿಗಳ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕಾಗಿರುವುದರಿಂದ ಇದರ ಬಗ್ಗೆ ನ್ಯಾಯಾಧೀಶರಿಂದ ತನಿಖೆಮಾಡಿಸಬೇಕು. ಅಲ್ಲಿ ಸಂಪೂರ್ಣವಾಗಿ ಅವ್ಯವಹಾರಗಳು ನಡೆಯುತ್ತಿದೆ ಎನ್ನುವ ಮಾತನ್ನು ಹೇಳುತ್ತಾ ಈ ಸಂದರ್ಭದಲ್ಲಿ ಈ ಪೂರಕ ಬೇಡಿಕೆಗಳಲ್ಲಿ ಅಗತ್ಯ ಇಲ್ಲದೇ ಇರುವ ಕಡೆ ಖರ್ಚು ಮಾಡುತ್ತಿದ್ದೀರಿ ಅದು ಸರಿಯಲ್ಲ. ಇನ್ನು ಮುಂದಾದರೂ ತಪ್ಪಾಗದಂತೆ ನೋಡಿಕೊಳ್ಳಬೇಕು, ಸರಿಮಾಡಬೇಕು ಎಂದು ಹೇಳಿ, ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ರಾಜ್ಯಾಂಗದ ೨೦೫ (೧)ನೇ ಅನುಚ್ಛೇದದ ಪ್ರಕಾರ ಈ ಪೂರಕ ಅಂದಾಜುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಯಾವ ಸರ್ಕಾರ ಬಂದರೂ ಕೂಡ ಈ ರೀತಿಯಾಗಿ ಪೂರಕ ಅಂದಾಜುಗಳನ್ನು ಇರತಕ್ಕಂಥಾದ್ದು ವಾಡಿಕೆ. ಮತ್ತು ಸದನದ ಒಪ್ಪಿಗೆಯನ್ನು ತೆಗೆದುಕೊಳ್ಳಬೇಕಾಗುತ್ತದೆ ಒಟ್ಟು ೨೮೩.೬೮ ಕೋಟಿ ರೂಪಾಯಿಗಳ ಪೂರಕ ಬೇಡಿಕೆ ನಮ್ಮ ಮುಂದೆ ಇದೆ. ಇದು ಸರಿಯೋ ತಪ್ಪೋ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ನನ್ನ ದೃಷ್ಟಿಯಲ್ಲಿ ಇದು ಸರಿಯಲ್ಲ, ಅಷ್ಟು ಬೇಕಾದ್ದಿಲ್ಲ. ಆದರೆ ಈ ಪೂರಕ ಅಂದಾಜುಗಳು ಏನಿವೆ ಇವನ್ನು ತರತಕ್ಕದ್ದು ಸದನದಲ್ಲಿ ವಾಡಿಕೆ ಇದೆ. ಅದು ಅವಶ್ಯಕವಾಗಿರತಕ್ಕಂಥಾದ್ದು. ಆದರೆ ಇಷ್ಟು ಬೇಕೇ, ಬೇಡವೇ ಎನ್ನುವುದು ಪ್ರಶ್ನೆ. ನನ್ನ ಅನುಭವದಲ್ಲಿ ಹೇಳುವುದಾದರೆ ಈ ಒಂದು ಸಾಲಿನಲ್ಲಿ ಈ ಸರ್ಕಾರದವರು ಯಾವ ಕೆಲಸವನ್ನೂ ಕೂಡ ಮಾಡಿಯೇ ಇಲ್ಲ. ಸರ್ಕಾರಿ ನೌಕರರುಗಳಿಗೆ ಸಂಬಳ ಕೊಡುವುದರ ಜೊತೆಗೆ, ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಏನಿದೆ ಅವರಿಗೆ ಬೇಕಾಗಿರತಕ್ಕಂಥ ಬಾಬುಗಳಲ್ಲಿ ಖರ್ಚು ಮಾಡಿರತಕ್ಕಂಥಾದ್ದು ಹೆಚ್ಚುವರಿ ಇದೆಯೇ ವಿನಹ ಯಾರಿಗೆ ಅವಶ್ಯಕವಾಗಿ ಖರ್ಚು ಮಾಡಬೇಕಾಗಿತ್ತು ಎನ್ನತಕ್ಕಂಥಾದ್ದು ಇದರಲ್ಲಿ ಇಲ್ಲ. ಯಾವ ಯಾವ ಬಾಬಿನಲ್ಲಿ ಖರ್ಚುಮಾಡಿದ್ದಾರೆ, ಖರ್ಚುಮಾಡಿಬಿಟ್ಟು ಈ ಪೂರಕ ಅಂದಾಜುಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ. ನಾನು ಎಲ್ಲಾ ವಿವರಕ್ಕೆ ಹೋಗುವುದಿಲ್ಲ. ಆದರೆ ೧-೨-೩ ವಿಷಯಗಳ ಬಗ್ಗೆ ಮಾತನಾಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

೭-೦೫ ಪಿ.ಎಂ.

ಹೋದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಈ ಸದನದಲ್ಲಿ ಇದೇ ರೀತಿಯಾಗಿ ಪೂರಕ ಅಂದಾಜುಗಳನ್ನು ಮಂಡಿಸಿದ ವೇಳೆಯಲ್ಲಿ ನಾನು ಅವರಿಗೆ ಒಂದು ಮಾತನ್ನು ಹೇಳಿದೆ. ಈ ಅನುಸೂಚಿತ ವರ್ಗಗಳು ಏನಿದ್ದಾರೆ, ಅವರ ಬಗ್ಗೆ ನೀವು ಏನು ಹೇಳಿದ್ದೀರಿ ಹಾಗೆ ನೀವು ನಡೆಯುತ್ತಿಲ್ಲ. ಕೃತಿಯಲ್ಲಿ ಯಾವುದನ್ನೂ ಕೂಡಾ ಮಾಡುವುದಕ್ಕೆ ತಾವು ಪ್ರಯತ್ನ ಮಾಡಿಲ್ಲ ಎಂದು ಹೇಳಿ ಒಂದು ವಾದವನ್ನು ನಾನು ಈ ಸದನದ ಮುಂದಿಟ್ಟಿದ್ದೆ. ಮಾನ್ಯ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು, ಈ ವರ್ಷ ನೂರು ಹಾಸ್ಟೆಲ್‌ಗಳನ್ನು ಅದರಲ್ಲೂ ಕೂಡಾ ವಸತಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುತ್ತಿದ್ದೇವೆ ಎಂದು ಹೇಳಿದರು. ನಾನು ತಮಗೆ ಕೇಳುತ್ತಿದ್ದೇನೆ, ಇದರ ಬಗ್ಗೆ ಹೇಳಿ, ನೂರು ಹಾಸ್ಟೆಲ್ ಬಗ್ಗೆ ವಸತಿ ನಿಲಯಗಳ ಬಗ್ಗೆ ಎಷ್ಟು ಹಣವನ್ನು ಒದಗಿಸಿದ್ದೀರಿ. ಎಷ್ಟು ಹಣ ಒದಗಿಸಬೇಕಾಗಿತ್ತು, ಇದಕ್ಕೆ ಹಣ ಖರ್ಚು ಮಾಡಿದ್ದಾರೆಯೋ ಇಲ್ಲವೇ ಎಂಬುದು ನಮ್ಮ ಮುಂದಿರುವ ಪ್ರಶ್ನೆ. ನಾನು ಹೇಳುತ್ತೇನೆ, ಇದಕ್ಕೆ ಮೂರು ಕಾಸೂ ಖರ್ಚು ಮಾಡಿಲ್ಲ. ಸಮಾಜಕಲ್ಯಾಣ

ಇಲಾಖೆಯ ಕಾರ್ಯದರ್ಶಿಯವರ ನೇತೃತ್ವದಲ್ಲಿ ಕನ್ಸಾಲಿಡೇಟೆಡ್ ಫಂಡ್ ಎಂದು ಹೇಳಿ ಒಂದು ಫಂಡ್ ಇದೆ. ಈ ಫಂಡ್‌ನಲ್ಲಿ ಎಷ್ಟು ದುಡ್ಡು ಇದೆ, ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡುತ್ತಾ ಹೇಳಿದ್ದಾರೆ, ೧೨ ಕೋಟಿ ರೂಪಾಯಿ ಇದೆ ಎಂದು ಹೇಳಿದ್ದಾರೆ. ಈ ೧೨ ಕೋಟಿ ರೂಪಾಯಿಗಳಲ್ಲಿ ಮಾರ್ಚ್ ತಿಂಗಳಲ್ಲಿ ಎಷ್ಟು ಖರ್ಚು ಮಾಡಿದ್ದೀರಿ ಎಂದು ಕೇಳಿದರೆ, ಇದುವರೆಗೆ ೪ ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇನ್ನೂ ೮ ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡತಕ್ಕಂಥ ಪ್ರಮೇಯ ಬಂದಿಲ್ಲ. ಈಗ ವರ್ಷದ ಕೊನೆ ಆಯಿತು, ಇನ್ನು ಹಣ ಬಿಡುಗಡೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಏನು ೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ ಅದನ್ನೂ ಕೂಡಾ ಖರ್ಚು ಮಾಡಲಿಕ್ಕೆ ಇವರ ಕೈಯ್ಯಲ್ಲಿ ಆಗಿಲ್ಲ. ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಒಂದು ಪಟ್ಟಿಯನ್ನು ಮಾಡಿಕೊಂಡಿದ್ದಾರೆ. ಸರ್ಕಾರದವರು ಪ್ರಾರಂಭ ಮಾಡತಕ್ಕ ವಿದ್ಯಾರ್ಥಿನಿಲಯಗಳು, ವಸತಿ ನಿಲಯಗಳ ಬಗ್ಗೆ ಒಂದು ಪಟ್ಟಿಯನ್ನು ಮಾಡಿಕೊಂಡು ಹುಕುಮ್ ಕೊಟ್ಟಿದ್ದಾರೆ. ಅದೂ ನಾಲ್ಕೈದು ದಿವಸಗಳ ಅಥವಾ ಒಂದು ವಾರದ ಹಿಂದೆ ಇರಬಹುದು ಅದರ ಪ್ರಕಾರ ಎಷ್ಟು ಕಟ್ಟಿಸಿದ್ದೀರಿ, ಅದು ಬೇರೆ ವಿಚಾರ. ಒಂದು ವಿಚಾರ ಹೇಳುತ್ತಿದ್ದೇನೆ, ಈ ಸರ್ಕಾರಕ್ಕೆ ಯಾರು ಯಾರು ಬಡವರು ಇದ್ದಾರೆ ಅವರ ಕಲ್ಯಾಣ ಮಾಡುವ ಉದ್ದೇಶ ಇಲ್ಲ. ಬರೀ ಟೊಳ್ಳು ಭಾಷಣಗಳನ್ನು ಮಾಡುವುದು, ಬರೀ ಟೊಳ್ಳು ವಾಗ್ದಾನಗಳನ್ನು ಮಾಡುವುದು, ಗೌರ್ನಮೆಂಟ್ ಆರ್ಡರ್ ಮಾಡುವುದು ನಡೆದಿದೆ. ೧೨ ಕೋಟಿ ರೂಪಾಯಿಗಳಲ್ಲಿ ೫ ರೂಪಾಯಿ ಸಹ ಖರ್ಚುಮಾಡಿಲ್ಲ. ಇಷ್ಟು ರೂಪಾಯಿ ಖರ್ಚು ಮಾಡುತ್ತೇವೆಂದು ಗೌರ್ನಮೆಂಟ್ ಆರ್ಡರ್ ಮಾಡಿದ್ದಾರೆ, ಮೊನ್ನೆ ಮೊನ್ನೆ ಮಾಡಿದ್ದಾರೆ ಅದು ಇರಲಿ. ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳ ಬಗ್ಗೆ ೪೦ ಲಕ್ಷ ರೂಪಾಯಿ ಹೆಚ್ಚುವರಿ ಬಿಡುಗಡೆ ಮಾಡಿದ್ದೀರಿ, ನಿಮ್ಮ ವರ್ಗದ ಹೆಣ್ಣು ಮಕ್ಕಳ ಬಗ್ಗೆ ಎಷ್ಟು ಖರ್ಚು ಮಾಡಿದ್ದೀರಿ, ೪೦ ಲಕ್ಷ ರೂಪಾಯಿಗಳು ನಿಮಗೆ ಏತಕ್ಕೆ ಬೇಕಾಗಿತ್ತು ಎಂಬುದು ಪ್ರಶ್ನೆ. ೧೨ ಕೋಟಿ ರೂಪಾಯಿ ಫಂಡ್ ಅನುಸೂಚಿತ ವರ್ಗದವರಿಗೆ ಮಾತ್ರ ಖರ್ಚು ಮಾಡಬೇಕೆಂದು ಫಂಡ್ ಇಟ್ಟಿರುವಾಗ, ೪೦ ಲಕ್ಷ ರೂಪಾಯಿಗಳು ಏತಕ್ಕೆ ಬೇಕು ? ೧೨ ಕೋಟಿ ರೂಪಾಯಿಗಳು ಇದ್ದ ಹಣದಲ್ಲಿ ಖರ್ಚು ಮಾಡಬಹುದಾಗಿತ್ತು. ಈ ಹೆಚ್ಚುವರಿ ಏತಕ್ಕೆ ಬೇಕು ? ಯಾವುದಕ್ಕೆ ಖರ್ಚು ಮಾಡಿದ್ದೀರಿ ಎಂದು ನಮ್ಮ ಒಪ್ಪಿಗೆ ಬೇಕು ?

ಇನ್ನು ೫೦ನೇ ಪೇಜ್‌ನಲ್ಲಿ, ಅಭಿಯಾಚನೆ ಕ್ರಮಾಂಕ ೩ರಲ್ಲಿ ರಾಜ್ಯಪಾಲರು, ಮಂತ್ರಿಗಳು, ಲೋಕಸೇವಾ ಆಯೋಗ, ಇವುಗಳಿಗೆ ಹೆಚ್ಚುವರಿ ಇಷ್ಟು ಖರ್ಚು ಮಾಡಿದ್ದೇವೆ, ಅದಕ್ಕೆ ಒಪ್ಪಿಗೆ ಕೊಡಿ ಎಂದು ಬರೆದಿದ್ದೀರಿ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಒಂದು ಮಾತು ಹೇಳುತ್ತಿದ್ದೇನೆ, ಎಲ್ಲಾ ಗೌರ್ನಮೆಂಟ್ ನೌಕರರಿಗೆ ೯ ಸಾವಿರ ರೂಪಾಯಿನಿಂದ ಹಿಡಿದು, ಕೊನೆಕೊನೆಗೆ ಒಬ್ಬ ಜವಾನನಿಗೆ ೧೫೦೦ ರೂಪಾಯಿನವರೆಗೆ ಸಂಬಳ ಬರುತ್ತದೆ. ಆದರೆ ಮಂತ್ರಿಗಳಿಗೆ ಎಷ್ಟು ಕೊಡುತ್ತೀರಿ, ೧೭೫೦ ರೂಪಾಯಿ ಕೊಡುತ್ತೀರಿ, ಮಾನ್ಯ ಅಧ್ಯಕ್ಷರೇ ತಮಗೂ ಸಹ ೧೭೫೦ ಎಂದು ಕಾಣುತ್ತದೆ. ನಮಗೆ ಎಲ್ಲಾ ಸೇರಿ ಎರಡು ಸಾವಿರದವರೆಗೆ ಕೊಡುತ್ತೀರಿ. ಒಬ್ಬ ಜವಾನನಿಗೆ ಸಲ್ಲತಕ್ಕ ಸಂಬಳ ಒಬ್ಬ ಮೆಂಬರ್‌ಗೆ ಬೇಡವೇ. ನಮಗೆ ೭೫೦ ರೂಪಾಯಿ, ತಾವು ಯೋಚನೆ ಮಾಡಿ. ಜವಾನರಿಗೆ ೧,೨೦೦ ರೂಪಾಯಿ ಒಬ್ಬ ಗುಮಾಸ್ತನಿಗೆ ೨,೦೦೦ ರೂಪಾಯಿ, ಒಬ್ಬ ಸ್ಟೆನೋಗ್ರಾಫರ್‌ಗೆ ೩,೦೦೦ ರೂಪಾಯಿ ತಹಶೀಲ್ದಾರ್‌ರವರಿಗೆ ೪,೦೦೦ ರೂಪಾಯಿ, ಡೆಪ್ಯುಟಿ ಕಮೀಷನರ್‌ರವರಿಗೆ ೫,೦೦೦ ರೂಪಾಯಿ ಕೊಡುತ್ತೀರಿ. ನಮಗೂ ಹೆಂಡತಿ ಮಕ್ಕಳೂ ಎಲ್ಲರೂ ಇದ್ದಾರೆ. ನಮಗೂ ಮನೆ, ಮಠ ಉಂಟು. ನನಗೆ ಬೇಕಿಲ್ಲದೇ ಇರಬಹುದು, ಮಾನ್ಯ ಸದಸ್ಯರು ಎಲ್ಲರೂ ಲಕ್ಷಾಧೀಶರು ಇಲ್ಲಿ ಬಂದು ಕುಳಿತು ಕೊಂಡಿಲ್ಲ. ಈಗ ಹತ್ತು ಲಕ್ಷ ಬೇಕೆಂದು ಮಾಡಿದ್ದೀರಿ. ತಮಗೆ ಸರ್ಕಾರಿ ನೌಕರರ ಬಗ್ಗೆ ಉದಾರ ಮನಸ್ಸು ಉಂಟು. ನಾವೇನು ಜನರ ಸೇವೆ ಮಾಡುತ್ತಿಲ್ಲವೇನು ? ೨೪ ಗಂಟೆಗಳ ಕಾಲ ನಮ್ಮ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿಲ್ಲವೇನು ? ೨,೦೦೦ ರೂಪಾಯಿ ಏತಕ್ಕೆ ಬೇಕಾಗುತ್ತದೆ ಅಂದರೆ ನಮ್ಮ ಸಂಸಾರ ನಡೆಸಲಿಕ್ಕೆ ಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಎಷ್ಟು ಹೆಚ್ಚು ಮಾಡಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಒಬ್ಬ ಗುಮಾಸ್ತನ ಸಂಬಳ ಕೊಡಿ, ಸೀನಿಯರ್ ತಹಶೀಲ್ದಾರ್ ಸಂಬಳ ಕೊಡಿ, ೪,೦೦೦ ರೂಪಾಯಿ ಕೊಡಿ.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ನಿಮಿಷ ಮಾನ್ಯ ಸದಸ್ಯರು ಯೀಲ್ಡ್ ಆಗುವುದಾದರೆ ಒಂದು ಮಾತು ಹೇಳುತ್ತೇನೆ. ಇವೊತ್ತು ಮಾನ್ಯ ಬಸವಲಿಂಗಪ್ಪನವರು ಹೇಳುವುದರಲ್ಲಿ ಏನೂ ಅರ್ಥ ಇಲ್ಲ ಎಂದು ಹೇಳುವುದಿಲ್ಲ. ಮೊದಲಿನಿಂದಲೂ ಶಾಸಕರ ಸಂಬಳ ಅವರಿಗೆ ಸಿಕ್ಕತಕ್ಕ ಭತ್ಯೆ, ಬೇರೆ, ಸರ್ಕಾರಿ ನೌಕರರ ಭತ್ಯೆಗಳನ್ನು ಆಧರಿಸಿ ಮಾಡಲಿಲ್ಲ. ಇದು ಒಂದು ಗೌರವಧನ, ಜನರಿಂದ ಆಯ್ಕೆಯಾಗಿ ಬಂದವರು ಜನರ ಸೇವೆ ಮಾಡಲಿಕ್ಕೆ ಎಂದು ಏನೋ ಒಂದು ಉದಾತ್ತ ಭಾವನೆ ಇಟ್ಟುಕೊಂಡು ಮಾಡಿರುವುದು. ಇವೊತ್ತಿನ ದಿವಸದ ಸಂದರ್ಭದಲ್ಲಿ ಶಾಸಕರಿಗೆ ಸಿಕ್ಕತಕ್ಕ ರೆಮ್ಯುನರೇಷನ್ ಅದು ಸಾಲದು ಎನ್ನುವ ಅಭಿಪ್ರಾಯ ಮಾನ್ಯ ಬಸವಲಿಂಗಪ್ಪನವರು ಏನು ಹೇಳುತ್ತಾರೆ ಅದಕ್ಕೆ ಬಹಳ ಜನರ ಅಭಿಮತ ಇರಬಹುದೆಂದು ನನಗನಿಸುತ್ತದೆ. ತಮ್ಮೆಲ್ಲರ ಅಭಿಪ್ರಾಯ ಇದೇ ಇದ್ದರೆ, ಸ್ವಲ್ಪ ಹೆಚ್ಚಳವನ್ನು ಮಾಡಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಮಾನ್ಯ ಮಂತ್ರಿಗಳ ಬಗ್ಗೆ ಹೇಳಲಿಲ್ಲ, ಇನ್ನು ನಿಮ್ಮದು ಆದ ಮೇಲೆ ಮಂತ್ರಿಗಳದು ಹಿಂದುಳಿಯುತ್ತದೆಯೇ ? ಇವೊತ್ತು ಮಂತ್ರಿಗಳು ಅಂದರೆ ಅವರಿಗೆ ಮನೆ ಇದೆ, ಟೆಲಿಫೋನ್ ಇದೆ, ಆ ತರಹದ ಅನುಕೂಲ ಇದೆ. ಇವೊತ್ತು ಪೆಟ್ರೋಲ್, ಡೀಸೆಲ್ ದರ ಹೆಚ್ಚಾಗಿದೆ, ಪ್ರತಿಯೊಂದು ದರವೂ ಹೆಚ್ಚಾಗಿದೆ. ಆ ದೃಷ್ಟಿಯಲ್ಲಿ ಸಂಬಳಸಾರಿಗೆ ಹೆಚ್ಚು ಮಾಡಬೇಕೆಂದು ನಿಮ್ಮೆಲ್ಲರ ಅಭಿಪ್ರಾಯ ಇದೆ, ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡುತ್ತದೆ.

ಶ್ರೀ ಬಿ, ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ನಿಗದಿ ಮಾಡುವಾಗ ಒಂದು ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಇವೊತ್ತು ನನ್ನ ಡ್ರೈವರ್‌ಗೆ ಒಂದು ಸಾವಿರ ರೂಪಾಯಿ ಕೊಡುತ್ತೇನೆ ೩೦–೪೦ ಸಾವಿರ ರೂಪಾಯಿ ಕಾರು ತೆಗೆದುಕೊಳ್ಳುವುದಕ್ಕೆ ಸಾಲ ಕೊಡುತ್ತೀರಿ. ಒಬ್ಬ ಡ್ರೈವರ್ ಬೇಡವೇ ? ನಾವೇ ಡ್ರೈವ್ ಮಾಡಿಕೊಂಡು ಹೋಗಬೇಕಾಗಿದೆ. ಡ್ರೈವರ್ ಸಂಬಳ ಕೊಡಿ. ಇದು ಗೌರವ ಧನ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಇತ್ತು. ಅದು ಆಗಿನ ಅರ್ಥ. ಆ ಹಗ್ಗವನ್ನು ಹಿಡಿದು ಜಗ್ಗುತ್ತಾ ಬಂದಿದ್ದೇವೆ. ಇವೊತ್ತಿನ ಪರಿಸ್ಥಿತಿ ಬದಲಾವಣೆಯಾಗಿದೆ. ಜೀವನ ಮಾಡತಕ್ಕದ್ದು ಕಠಿಣ ಪರಿಸ್ಥಿತಿಯಾಗಿದೆ. ಲಂಚರುಷುಪರ್ತಿಗೆ ಕೈಹಾಕದೆ ಗೌರವ ಧನದಿಂದಲೇ ಗೌರವದಿಂದ ಜೀವನ ಮಾಡಬೇಕಾದರೆ ಶಾಸಕರಿಗೆ ಸರಿಯಾದ ಸಂಬಳ ಕೊಡತಕ್ಕದ್ದು ಅಗತ್ಯ, ಅನಿವಾರ್ಯ ಈ ಗೌರವ ಧನವನ್ನು ಹೆಚ್ಚಿಸಬೇಕು. ಸಮಯಕ್ಕೆ ತಕ್ಕಂತೆ ಹೆಚ್ಚು ಮಾಡತಕ್ಕದ್ದು ಬಹಳ ಅನಿವಾರ್ಯ ಇದೆ.

ಮಾನ್ಯ ಮುಖ್ಯ ಮಂತ್ರಿಗಳು ಇದನ್ನು ಒಪ್ಪಿದ್ದಾರೆ. ಆದರೆ ಮಂತ್ರಿಗಳಿಗೆ ಮಾತ್ರ ಒಂದು ದರ್ಜೆ ಮತ್ತು ಅವರದ್ದೇ ಒಂದು ಅಧಿಕಾರವನ್ನು ಚಲಾಯಿಸತಕ್ಕಂಥಾದ್ದು, ಮತ್ತು ಅಧಿಕಾರವನ್ನು ಜನಗಳಿಗೆ ಮುಟ್ಟಿಸಬೇಕಾದರೆ ಅವರು ಗೌರವಸ್ಥರಾಗಿರಬೇಕಾಗುತ್ತದೆ. ಮಂತ್ರಿಗಳಾಗಿರತಕ್ಕಂಥವರು ಬೇರೆ ಹಣಕ್ಕೆ ಕೈಚಾಚಿದರೆ ಅಡ್ಮಿನಿಸ್ಟ್ರೇಶನ್ ಬಿದ್ದು ಹೋಗುತ್ತದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುತ್ತಾ ಇದ್ದೇನೆ, ಅವರು ಗೌರವವಾಗಿ ಜೀವನ ಮಾಡಬೇಕಾದರೆ, ಇಂತಹ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ತಾವುಗಳು ಇದನ್ನು ಹೇಳಿದಾಗ, ಇಡೀ ಭಾರತದೇಶದ ಇತರ ರಾಜ್ಯಗಳನ್ನು ನಮ್ಮೊಂದಿಗೆ ಹೋಲಿಸಬೇಡಿ. ನಿಮ್ಮದೇ ಆದ ಒಂದು ವ್ಯವಸ್ಥೆಯನ್ನು ಮಾಡಿಬಿಟ್ಟು, ನೀವು ಭಾರತ ದೇಶದ ಇತರ ರಾಜ್ಯಗಳಿಗೆಲ್ಲಾ ಮಾದರಿಯಾಗಿ ಇರಬೇಕು ಎಂದು ಹೇಳುತ್ತಾ ಇದ್ದೇನೆ. ತಾವುಗಳು ಇದಕ್ಕೆ ಒಪ್ಪಿದ್ದೀರಿ, ಅದಕ್ಕಾಗಿ ನಾನು ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

ಇನ್ನು ಅನುಸೂಚಿತ ಜಾತಿ ಮತ್ತು ಅನುಸೂಚಿತ ವರ್ಗಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ. ಅಭಿಯಾಚನೆ ಕ್ರಮಾಂಕ ೬೨: ಇದರಲ್ಲಿ ಇವರ ಹಿಂದುಳಿದ ವರ್ಗಗಳ ಕಲ್ಯಾಣ ಇದೆ. ಇವರ ಆಡಳಿತದಲ್ಲಿ ಹಿಂದುಳಿದ ವರ್ಗಗಳ ಕಥೆ ಮುಗಿದು ಹೋಯಿತು. ಇದರಲ್ಲಿ ಈ ಯೋಜನೆತರ ಕಾಲಮ್‌ನಲ್ಲಿ ಒಂದು ಕೋಟಿ ರೂಪಾಯಿಗಳನ್ನು ನಮೂದು ಮಾಡಿದ್ದೀರಿ ಇದರ ವಿವರಣೆ ಏನು ಇದೆ ಎಂದರೆ ಮೂಲ ಬೇಡಿಕೆಯಲ್ಲಿನ ತಪ್ಪನ್ನು ಇಲ್ಲಿ ಸರಿಮಾಡಿದ್ದೇವೆ ಎಂದು ಬರೆದಿದ್ದಾರೆ. ೨೬೩ ಕೋಟಿ ರೂಪಾಯಿಗಳನ್ನು ಅವರಿಗೆ ಏನೇನು ಮನಸ್ಸಿಗೆ ಬೇಕು ಆ ಬಾಬುಗಳಿಗೆ ಖರ್ಚು ಮಾಡಲಿಕ್ಕೆ ಅವಕಾಶ ಇದರಲ್ಲಿ ಉಂಟು. ಆದರೆ, ಈ ಅನುಸೂಚಿತ ಜಾತಿ ಮತ್ತು ವರ್ಗಗಳಿಗೆ ಜಾಸ್ತಿ ಖರ್ಚು ಮಾಡಿ, ಅವರ ಅಂತಸ್ತನ್ನು ಉತ್ತಮ ಪಡಿಸಲಿಕ್ಕೆ ಸರಕಾರ ಪ್ರಯತ್ನ ಮಾಡಬೇಕಾಗಿತ್ತು. ಆದರ ಬಗ್ಗೆ ಇದರಲ್ಲಿ ಯಾವ ವಿವರಣೆಯೂ ಇಲ್ಲ ಮತ್ತು ಯಾವ ಹಣವನ್ನು ಕೂಡ ಒದಗಿಸಿಲ್ಲ. ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಾಗ, ಈ ಅನುಸೂಚಿತ ಜಾತಿ ಮತ್ತು ವರ್ಗಗಳ ಕಮಿಶನ್ ರಿಪೋರ್ಟನ್ನು, ಅವರ ಆರ್ಥಿಕ ಪರಿಸ್ಥಿತಿಯ ವಿಷಯದಲ್ಲಾಗಲೀ, ಬೇರೆ ಯಾವ ವಿಚಾರದಲ್ಲಾಗಲೀ,

ಅನುಷ್ಠಾನಕ್ಕೆ ತರಲಾಗಿದೆ ಎಂದು ಹೇಳಿದ್ದಾರೆ. ಅವೊತ್ತು ಹೇಳಿದ ಮಾತು ಇದೂತನಕವೂ ಗಾಳಿಯಲ್ಲಿ ಓಡಾಡುತ್ತಾ ಇದೆ. ಎಸ್. ಸಿ. ಯವರಿಗೆ, ಯಾರು ಯೂನಿವರ್ಸಿಟಿಯಲ್ಲಿ ಫಸ್ಟ್ ಕ್ಲಾಸ್ ಪಾಸಾಗುತ್ತಾರೋ ಅವರಿಗೆ ನೇರವಾಗಿ ಹುದ್ದೆಗಳನ್ನು ಕೊಡುತ್ತೇವೆ ಎಂದು ಕೂಡ ಹೇಳಿದ್ದಾರೆ. ಆದರೆ ನಾಲ್ಕು ವರ್ಷಗಳು ಆಯಿತು, ಅದರ ಬಗ್ಗೆ ಯಾವ ಸೊಲ್ಲೂ ಇಲ್ಲದಾಗಿದೆ. ಕೇಳಿದರೆ ಹೈಕೋರ್ಟ್‌ನಲ್ಲಿ ಸ್ಟೇ ಆರ್ಡರ್ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಹಾಗಾದರೆ ಹೈಕೋರ್ಟ್ ನಮ್ಮ ಕೈಗೆ ನಿಲುಕುವುದಿಲ್ಲವೋ ? ಸರಕಾರದವರು ಸ್ಟೇ ಆರ್ಡರ್‌ನ್ನು ವಜಾ ಮಾಡುವುದಕ್ಕೆ ಪ್ರಯತ್ನಗಳನ್ನು ಮಾಡಿದ್ದಾರೆಯೋ ? ಅದನ್ನು ಹಾಗೆಯೇ ಬಿಟ್ಟುಬಿಟ್ಟು, ಆ ಜನರಿಗೆ ಆಶಾಭಂಗ ಮಾಡಿ, ನಿಮ್ಮ ವರ್ಗದವರಿಗೆ ನಿರಾಶೆ ಬರುವಹಾಗೆ ಮಾಡಿದ್ದೀರಿ. ನೀವು ಮಾತನಾಡುವಾಗ ಬಹಳ ಒಳ್ಳೆಯ ಮಾತುಗಳನ್ನು ಆಡುತ್ತೀರಿ. ಆದರೆ ಕೃತಿಯಲ್ಲಿ ಹಾಗೆ ನಡೆದುಕೊಳ್ಳುತ್ತಾ ಇಲ್ಲ. ತಾವುಗಳು ರಿಕ್ರೂಟ್‌ಮೆಂಟ ಪಾಲಿಸಿಯಲ್ಲಿ ಹಂಗಾಮಿಯಾಗಿ ಯಾರು ಇದ್ದರೋ, ಅಂತಹವರನ್ನು ಖಾಯಂ ಮಾಡಿದ್ದೀರಿ. ಯಾರು ಯಾರು ಅಧಿಕಾರಿಗಳು ಸ್ವೇಚ್ಛೆಯಾಗಿ ಅಂತಹವರಿಗೆ ಕೆಲಸವನ್ನು ಕೊಟ್ಟಿದ್ದರೋ ಅವರನ್ನು ಖಾಯಂ ಮಾಡಿದ್ದೀರಿ. ಆದರೆ ಇವೊತ್ತಿನ ದಿವಸ ಎಷ್ಟು ಜನ ನಿರುದ್ಯೋಗಿಗಳಾಗಿ ಇದ್ದಾರೆ ? ಸುಮಾರು ೧೦ ಲಕ್ಷ ಜನರು ತಮ್ಮ ಹೆಸರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ನೋಂದಾಯಿಸಿಕೊಂಡವರೇ ಇದ್ದಾರೆ. ಅಂತಹವರಿಗೆ ಕೆಲಸ ಕೊಡುವುದಕ್ಕೆ ನೀವು ಏನು ಮಾಡಿದ್ದೀರಿ ? ಹಾಗೆಯೇ ನೌಕರ ವರ್ಗದವರಿಗೆ ವಯೋಮಿತಿಯನ್ನು ೫೫ ವರ್ಷ ಎಂದು ಮಾಡಿದ್ದೀರಿ. ಒಂದು ಕಡೆ ಪ್ರತೀ ವರ್ಷವೂ ಕಾಲೇಜುಗಳಲ್ಲಿ ಪಾಸ್ ಆಗತಕ್ಕಂಥಹವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಈ ಪದವೀಧರರಿಗೆ ನೌಕರಿಗಳನ್ನು ಕೊಡಲಿಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ? ಈ ವಿಷಯಗಳ ಬಗ್ಗೆ ತಾವುಗಳು ಏನೂ ಮಾಡಲಿಕ್ಕೆ ಹೋಗಲಿಲ್ಲ. ಇಷ್ಟೇ ಅಲ್ಲದೇ ಪ್ರತಿಯೊಂದು ಕುಟುಂಬಕ್ಕೆ ಒಂದು ನೌಕರಿ ಕೊಡುತ್ತೇವೆ ಎಂದು ಕೂಡ ಹೇಳಿದ್ದೀರಿ. ಆದರೆ ಅದನ್ನು ಮಾಡಲಿಕ್ಕೆ ಇನ್ನೂ ಹೋಗಲಿಲ್ಲ. ಇದನ್ನು ತಾವುಗಳು ಒಪ್ಪಿಕೊಳ್ಳಬೇಕು. ನೀವು ಹೇಳಿದ ಮಾತುಗಳನ್ನು ಕೊಟ್ಟ ವಚನಗಳನ್ನು ಯಾರೂ ಕೂಡ ಮರೆಯುವುದಿಲ್ಲ. ನೀವು ಜನತೆಗಾಗಿ ಮಾಡಬೇಕಾದಂತಹ ಎಲ್ಲಾ ಕೆಲಸ ಕಾರ್ಯಗಳನ್ನು ಜನತೆ ಮರೆಯದೇ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆ. ಕಾಲ ಬಂದಾಗ ನಿಮಗೆ ಪಾಠ ಕಲಿಸತಕ್ಕಂಥ ಸನ್ನಿವೇಶ ಬರಬಹುದು. ತಾವುಗಳು ಏನು ಬೇಕಾದರೂ ಹೇಳಿ ಜಯಿಸಿಕೊಂಡು ಬರಬಹುದು. ಬಡವರ ಕಣ್ಣಿಗೆ ಮಣ್ಣು ಹಾಕುವಂತಹ ಕೆಲಸವನ್ನು ಮಾಡಬಹುದು ಎಂದು ಯಾವುದೇ ಪ್ರಯತ್ನವನ್ನು ಮಾಡಬಾರದು.

ಇದು ಆಗುವುದಿಲ್ಲ. ಮತ್ತೆ ಪಿ ಎಸ್.ಸಿ. ಒಂದು ವಿಚಾರವನ್ನು ಹೇಳುವುದಾದರೆ ಅಲ್ಲಿ ರಿಕ್ರೂಟ್‌ಮೆಂಟ್ ಮಾಡುತ್ತಾರೆ. ನಾವು ನೋಡಿದ ಹಾಗೆ ಐದು ಜನ ಪಿ. ಎಸ್. ಸಿ. ಸದಸ್ಯರಿದ್ದರು. ಈಗ ಏಳು ಜನರನ್ನು ಮಾಡಿದ್ದೀರಿ. ಏಳು ಜನರನ್ನು ಮಾಡಿದ್ದರೂ ಕೂಡ ರಿಕ್ರೂಟ್‌ಮೆಂಟ್ ಮಾಡುತ್ತಿಲ್ಲ. ತಡ ಮಾಡುತ್ತಿರುತ್ತಾರೆ. ಅವರು ರಿಪೋರ್ಟ್ ಕಳುಹಿಸಿ ಕೊಟ್ಟಿರುತ್ತಾರೆ. ಅದು ತಮಗೂ ಕೂಡ ಬಂದಿದೆ. ೧೯೭೨-೭೩ನೇ ಇಸವಿ ರಿಪೋರ್ಟ್‌ನ್ನು ಕಳೀಹಿಸಿಕೊಟ್ಟಿದ್ದಾರೆ. ೧೯೭೩-೭೪ ನೇ ಸಾಲಿನ ರಿಪೋರ್ಟ್ ಇನ್ನೂ ಕೂಡ ಬಂದಿಲ್ಲ. ಇದು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಖಾತೆಯಾಗಿರುತ್ತದೆ. ೧೯೭೨-೭೩ನೇ ಸಾಲಿನ ರಿಪೋರ್ಟ್ ಏನು ಕೊಟ್ಟಿರುತ್ತಾರೆ ಅವರಿಗೆ ಸರಿಯಾದ ಶಾಸ್ತಿ ಮಾಡಬೇಕು. ಹಿಂದಿನ ವರ್ಷದ ರಿಪೋರ್ಟ್‌ನ್ನು ಈಗ ಕೊಟ್ಟಿರುವುದಕ್ಕೂ ಮತ್ತು ಈ ಸಾಲಿನ ರಿಪೋರ್ಟ್‌ನ್ನು ಇನ್ನೂ ಕೊಡದಿರುವ ಬಗ್ಗೆ ತಾವು ಪ್ರಶ್ನೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಅಭಿಯಾಚನೆ ಕ್ರಮಾಂಕ ೬೩ ಇದರಲ್ಲಿ ಯೋಜನೆಗಳಿಗೆ ಸಂಬಂಧಪಟ್ಟಿರತಕ್ಕಂಥ ಹಣ ಏನು ಇದೆ ಆ ಹಣವನ್ನು ಮಾತ್ರ ನಮೂದು ಮಾಡಿದ್ದೀರಿ ಯೋಜನೆಗಳಿಗೆ ಹಣ ಇಲ್ಲವೇ ಇಲ್ಲ. ಅಂದರೆ ಆದಿವಾಸಿಗಳ ಬಗ್ಗೆ ಎಷ್ಟು ಪ್ರೇಮ ಎಷ್ಟು ಅಭಿಮಾನ ಇರುತ್ತದೆ ಎಂಬುದು ಗೊತ್ತಾಗುತ್ತದೆ. ಅಭಿಮಾನ ಸ್ವಲ್ಪವೂ ಇಲ್ಲ ಎಂಬುದು ಈ ಸಪ್ಲಿಮೆಂಟರಿ ಬಡ್ಜೆಟ್‌ನಿಂದ ಗೊತ್ತಾಗುತ್ತದೆ. ಏತಕ್ಕೆಂದರೆ ಸರ್ಕಾರದ ಮನಸ್ಸು, ಸರ್ಕಾರದ ಧ್ಯೇಯ ಧೋರಣೆಗಳು ಯಾವರೀತಿ ನಡೆಯುತ್ತಿವೆ. ಯಾವರೀತಿ ಅನುಷ್ಠಾನಕ್ಕೆ ಬಂದಿದೆ ಎನ್ನುವುದು ಈ ಸಪ್ಲಿಮೆಂಟರಿ ಬಡ್ಜೆಟ್‌ನ್ನು ನೋಡಿದಾಗ ಕಣ್ಣು ಇಲ್ಲದವರಿಗೆ ಬೆಳಕು ಇದ್ದಂತಾಗಿದೆ. ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎನ್ನುವುದಕ್ಕೆ ಈ ಪೂರಕ ಅಂದಾಜುಗಳಲ್ಲಿ ಇಷ್ಟೊಂದು ಹೆಚ್ಚಿನ ಮೊತ್ತವನ್ನು ಕೇಳಿರತಕ್ಕಂಥದ್ದರಿಂದ ಗೊತ್ತಾಗುತ್ತದೆ. ಇದು ಸರಿಯಾದುದಲ್ಲ. ಇನ್ನು ಮೇಲಾದರೂ ಯಾರು ನಿರ್ಗತಿಕರಾಗಿದ್ದಾರೆ, ಯಾರು ಬಡವರು ಇದ್ದಾರೆ, ಆದಿವಾಸಿಗಳು ಇದ್ದಾರೆ ಆ ಕಡೆ ಹೆಚ್ಚಿನ ಗಮನವನ್ನು ಕೊಡಬೇಕು. ಅವರಿಗೆ ಸರಿಯಾದ ಯೋಜನೆಗಳನ್ನು

ಹಾಕಿಕೊಳ್ಳಲು ಅಧಿಕಾರಿ ವರ್ಗದವರಿಗೆ ಸರಿಯಾದ ಸೂಚನೆಗಳನ್ನು ಕೊಡಬೇಕು. ತಾವು ಆ ಕೆಲಸವನ್ನು ಮಾಡಬೇಕು. ಮಾಡದೆಹೋದರೆ ಜನರು ಇರುತ್ತಾರೆ, ಅವರು ಕೇಳುತ್ತಾರೆ. ನಾಲ್ಕು ವರ್ಷದಿಂದ ಮಾನ್ಯ ಮುಖ್ಯ ಮಂತ್ರಿಗಳ ಮಾತನ್ನು ಕೇಳಿದ್ದಾರೆ. ಬಡವರಿಗೆ ಏನು ಅನುಕೂಲವಾಗದೆ ಹೋದರೆ ಅವರು ಹೇಳುತ್ತಾರೆ, ಇವರು ಹೀಗೆ ಮಾತನಾಡುತ್ತಾರೆ, ಎಲೆಕ್ಷನ್ ಬಂದಮೇಲೆ ಈರೀತಿ ಮಾತನಾಡುತ್ತಾರೆ, ಮಂತ್ರಿಗಳಾಗುತ್ತಾರೆ ಆದರೆ ಏನೂ ಮಾಡುವುದಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಹಿಂದೆ ನಾವು ಕೂಡ ಹೀಗೆ ಮಾಡಿದ್ದರಿಂದ ಈ ರೀತಿ ಆಯಿತು ಎಂದು ಇಟ್ಟುಕೊಳ್ಳೋಣ. ನಾವು ಇಲ್ಲಿಗೆ ಬಂದಹಾಗೆ ಪುನಃ ನೀವು ಇಲ್ಲಿಗೆ ಬರುತ್ತೀರೆಂದು ಸ್ಪಷ್ಟವಾಗಿ ಎಲ್ಲಾ ಮಂತ್ರಿಗಳಿಗೂ ಮತ್ತು ಎಂ.ಎಲ್.ಎ ಗಳಿಗೂ ನಾನು ಹೇಳುತ್ತಿದ್ದೇನೆ ಆದ್ದರಿಂದ ದಯವಿಟ್ಟು ಯಾರು ಹಿಂದುಳಿದ ವರ್ಗದವರು ಇದ್ದಾರೆ ಯಾರು ನಿರ್ಗತಿಕರು ಇದ್ದಾರೆ, ಅವರು ಕೂಲಿ ಮಾಡುವ ಶಕ್ತಿ ಇದ್ದರೂ ಅವರಿಗೆ ಹೊಟ್ಟೆಗೆ ಇಲ್ಲದಿದ್ದರೆ ಅವರಿಗೆ ಸಹಾಯ ಮಾಡಬೇಕು. ಸರ್ಕಾರದ ಅಂದಾಜು ಪಟ್ಟಿ, ಆಯವ್ಯಯ ಏನು ಇದೆ ಇದರಲ್ಲಿ ನಿಷ್ಪೂರವಾಗಿ ಖರ್ಚು ಮಾಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಸಲಹೆಯನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಬಡವರ ಬಗ್ಗೆ ಅನುಕಂಪದ ಮಾತನ್ನು ಆಡತಕ್ಕಂಥವರು ನಾಮಿನೇಷನ್ ಬಗ್ಗೆ ಏತಕ್ಕೆ ವಿರೋಧ ಮಾಡುತ್ತೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಇದು ನಮ್ಮ ಪಾರ್ಟಿಯವರು ತೆಗೆದುಕೊಂಡಿರತಕ್ಕಂಥ ನಿಲುವು ನಾಮಿನೇಷನ್ ಮಾಡತಕ್ಕಂಥ ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳನ್ನು ಮಾಡುವುದರಲ್ಲಿ ಗೌರವವನ್ನು ಇಟ್ಟುಕೊಂಡಿರುತ್ತೇವೆ, ಚುನಾವಣೆ ಮಾಡಿದವರ ಮೇಲೆ ನಾಮಕರಣ ಮಾಡುತ್ತಾ ಹೋದರೆ ಪ್ರಜಾಪ್ರಭುತ್ವವನ್ನು ಕೊಲೆ ಮಾಡಿದಂತಾಗುತ್ತದೆ. ನಾಳೆ ಅದರ ಪರಿಣಾಮ ಏನಾಗುತ್ತೆದೆಂದು ನೋಡಿ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ ಮಾನ್ಯ ವೀರಪ್ಪಮೊಯಿಲಿಯವರು ರೈತರಿಗೆ ಏನು ಸಬ್‌ಸಿಡಿಯನ್ನು ಕೊಟ್ಟಿದ್ದೀರಿ ಅವರ ವಿವರಗಳನ್ನು ಕೊಡಿ ಎಂದು ಕೇಳಿದ್ದಾರೆ. ಲಾಂಗ್ ಟರ್ಮ್‌ಲೋನ್ ಮತ್ತು ಶಾರ್ಟ್ ಟರ್ಮ್‌ಲೋನ್ ತೆಗೆದುಕೊಂಡಿರತಕ್ಕಂಥವರಿಗೆ ಸಬ್‌ಸಿಡಿ ಕೊಟ್ಟಿರುತ್ತೇವೆ. ಕಳೆದ ಮೂರು ವರ್ಷದಿಂದ ಡ್ರಾಟ್ ಕಂಡೀಷನ್ ಇದ್ದುದರಿಂದ ರೈತರು ತೆಗೆದುಕೊಂಡ ಸಾಲದ ಮೇಲಿನ ಪ್ರತಿ ವರ್ಷದ ಬಡ್ಡಿಯನ್ನು ವೇವ್ ಮಾಡಿರತಕ್ಕಂಥದ್ದು ೧೧ ಕೋಟಿ ೯೨ ಲಕ್ಷ ೧೨ ಸಾವಿರ ಸಪ್ಲಿಮೆಂಟರಿಯಲ್ಲಿ ಸೇರಿಸಲಾಗಿದೆ.

ಶ್ರೀ ಬಿ. ಬಸವಣ್ಣೆಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ಅನುಸೂಚಿತ ಜಾತಿ, ಮತ್ತು ಪಂಗಡಗಳವರ ಬಗ್ಗೆ ಸರ್ಕಾರದವರು ಯಾವ ನಿಲುವನ್ನು ತೆಗೆದುಕೊಂಡಿಲ್ಲ, ಏನು ಕೆಲಸ ಮಾಡಿಲ್ಲವೆಂದು ಹೇಳಿರುತ್ತಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಈ ಮನೆಯಲ್ಲಿ ೧೦೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪನೆ ಬಗ್ಗೆ ಹೇಳಿದ್ದಾರೆ.

During 1986–87 there was no budget provision for starting SC/ST hostels. Out of pool funds. ಏನು ಮುಖ್ಯಮಂತ್ರಿಯವರು ಭರವಸೆಯನ್ನು ಕೊಟ್ಟಿದ್ದರು, ಅದಕ್ಕೆ ಅನುಗುಣವಾಗಿ ಈಗ ೫೦ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿ ನಿಲಯಗಳನ್ನು ಶುರು ಮಾಡಿದ್ದೇವೆ. ೨೫ ವಸತಿ ಶಾಲೆಗಳನ್ನು ಮಂಜೂರು ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಖಾಸಗಿಯವರು ಮಾಡುವುದಕ್ಕೆ ಏಕೆ ಕೊಡುವುದಿಲ್ಲ?

ಶ್ರೀ ಜಿ. ಬಸವಣ್ಣಪ್ಪ.—ಖಾಸಗಿಯವರದ್ದೂ ೧೪ ಇವೆ. ಈಗ ತಮಗೆ ಗೊತ್ತಿರುವ ಹಾಗೆ ಈ ವಿದ್ಯಾರ್ಥಿ ನಿಲಯಗಳ ಬಗ್ಗೆ ಶ್ರೀ ಗುರುಪ್ರಸಾದ್ ಅವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ಮಾಡಿ ಅಧ್ಯಯನ ನಡೆಸಿ ವರದಿ ಕೊಡಬೇಕೆಂದು ಹೇಳಿದ್ದೇವೆ. ಶ್ರೀ ಗುರುಪ್ರಸಾದ್ ಅವರು ರಾಜ್ಯಾದ್ಯಂತ ಪ್ರವಾಸ ಮಾಡಿ ವಿದ್ಯಾರ್ಥಿನಿಲಯಗಳ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಕೊಟ್ಟರು. ಅದನ್ನು ನಾನು ಮತ್ತು ಮುಖ್ಯಮಂತ್ರಿಗಳು ಚರ್ಚೆ ಮಾಡಿ ೧೧೫ ಹಾಸ್ಟೆಲ್ ಕಟ್ಟಡಗಳಿಗೆ ೯ ಕೋಟಿ ರೂಪಾಯಿಗಳ ಯೋಜನೆಯನ್ನು ಈಗಾಗಲೇ ಮಂಜೂರು ಮಾಡಿ, ೧೯೮೬-೮೭ನೇ ಸಾಲಿನಲ್ಲಿ ೩ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ. ೧೯೮೭-೮೮ನೇ ಸಾಲಿನಲ್ಲಿ ೩ ಕೋಟಿ

ಯನ್ನು ಈಗ ಒದಗಿಸಿದ್ದೇವೆ. ಮಾನ್ಯ ಬಸವಲಿಂಗಪ್ಪನವರೇ, ಕೇವಲ ೧೧೫ ಹಾಸ್ಟೆಲ್ ಕಟ್ಟಡಗಳಿಗೆ, ೯ ಕೋಟಿ ರೂಪಾಯಿ ಹಣ. ಆಮೇಲೆ ಟ್ರೈಬಲ್ ಸಬ್‌ಪ್ಲಾನ್ ಬಗ್ಗೆ ಕೆಲಸ ಆಗಿಲ್ಲವೆಂದು ಹೇಳಿದ್ದೀರಿ. ಇದರಲ್ಲಿ ಸುಮಾರು ೨೨ ಸಾವಿರ ಕುಟುಂಬಗಳನ್ನು ಒನ್ನೇ ಪಂಚವಾರ್ಷಿಕ ಯೋಜನೆಯಲ್ಲಿ ಬಡತನ ರೇಖೆಯಿಂದ ಎತ್ತಬೇಕೆಂದು ಕಾರ್ಯಕ್ರಮ ಇದೆ. ನಾವು ೨೫ ಸಾವಿರ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ಎತ್ತಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬಗ್ಗೆ ಜನತಾ ಸರ್ಕಾರ ಬಂದ ಮೇಲೆ ಒಳ್ಳೆಯ ಕೆಲಸ ಮಾಡುತ್ತಲೇ ಹೊರಟಿದ್ದೇವೆ. ಮಾಡಬೇಕಾದದ್ದು ಬೇಕಾದಷ್ಟು ಇದೆ, ಮಾನ್ಯ ಬಸವಲಿಂಗಪ್ಪನವರೇ ಕೇಳಬೇಕು. ಈ ಇಲಾಖೆಯನ್ನು ರೀಆರ್ಗನೈಸ್ ಮಾಡಿ ಈ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಇಲಾಖೆಯಲ್ಲಿ ತಾಲ್ಲೂಕು ಮಟ್ಟದಲ್ಲಿ ಕ್ಲಾಸ್-೨ ಆಫೀಸರ್‌ನ್ನು ಹಾಕಿ ಈ ಜನಾಂಗದ ಪ್ರಗತಿಗೋಸ್ಕರ ಏನೇನು ಕಾರ್ಯಕ್ರಮಗಳು ಇವೆ, ಟ್ರೈಬಲ್ ಸಬ್ ಪ್ಲಾನ್ ಆಗಲಿ ಸ್ಪೆಷಲ್ ಕಾಂಪೊನೆಂಟ್ ಕಾರ್ಯಕ್ರಮವಾಗಲೀ ಇನ್ನಿತರ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಮಾಡಿದ್ದೇವೆ. ಈ ಇಲಾಖೆಯನ್ನು ರೀಆರ್ಗನೈಸ್ ಮಾಡಿದ್ದೇವೆ ಮತ್ತು ಮೊದಲ ಹಂತದಲ್ಲಿ ೩೨ ತಾಲ್ಲೂಕುಗಳನ್ನು ರೀಆರ್ಗನೈಸ್ ಮಾಡಿ ಆರ್ಡರನ್ನು ಹೊರಡಿಸಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಎಸ್‌ಸಿ/ಎಸ್‌ಟಿ ಎಂದು ಏನು ಹೇಳುತ್ತೀರಿ. There are two constitutional orders, i.e Scheduled Caste constitutional order and Scheduled Tribe constitutional order. ಇದರ ಪ್ರಕಾರ ಜಾತಿಗಳು ಆದಾಗ ಅದನ್ನು ಬಿಟ್ಟುಹೋಗಲಿಕ್ಕೆ ಯಾವ ಸರ್ಕಾರಕ್ಕೂ ಅಧಿಕಾರ ಇಲ್ಲ. ಕೇಂದ್ರ ಸರ್ಕಾರಕ್ಕೂ ಅಧಿಕಾರ ಇಲ್ಲ. ನೀವು ಏನು ಮಾಡುತ್ತಿದ್ದೀರಿ ಎಸ್‌ಸಿ ಜಾತಿಗೆ ಹಲವಾರು ಜಾತಿಗಳನ್ನು ಸೇರಿಸಿಬಿಟ್ಟು ನಿಜವಾಗಿ ಇರತಕ್ಕ ಎಸ್‌ಸಿಯವರಿಗೆ ಏನೇನೂ ಸೌಲಭ್ಯ ಸಿಗದ ಹಾಗೆ ಮಾಡಿದ್ದೀರಿ. ಹೀಗೆ ಮಾಡಬೇಡಿ. ಆರ್ಟಿಕಲ್ ೩೪೧ನ್ನು ನೀವು ಓದಿದ್ದೀರಿ, ಆದರೆ ಯಾರು ಬಂದು ರೆಪ್ರೆಸೆಂಟೇಷನ್ ಕೊಟ್ಟರೆ ಆ ಜಾತಿಯನ್ನು ಎಸ್‌ಸಿಗೆ ಸೇರಿಸುತ್ತೀರಿ. ಆಗಬಹುದು, ಆಗಬಹುದು, ಎಂದು ಹುಕುಂ ಮಾಡುತ್ತೀರಿ ಏತಕ್ಕೆ ಹೀಗೆ ಮಾಡುತ್ತೀರಿ?

ಶ್ರೀ ಜಿ. ಬಸವಣ್ಣಪ್ಪ.—ಇದು ಮಾನ್ಯ ಸದಸ್ಯರ ಗುರುತರವಾದ ಆಪಾದನೆ ೩೪೧ ಮತ್ತು ೩೪೨ ಆರ್ಟಿಕಲ್ ಪ್ರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಲಿಸ್ಟನ್ನು ಮಾಡತಕ್ಕವರು ರಾಷ್ಟ್ರಾಧ್ಯಕ್ಷರು. ಅದಕ್ಕೆ ಏನಾದರೂ ಸೇರಿಸುವುದು, ತೆಗೆಯುವುದು ಮಾಡಬೇಕಾದರೆ ಲೋಕಸಭೆಯಲ್ಲಿ ಕಾನೂನಿಗೆ ತಿದ್ದುಪಡಿಯನ್ನು ತರಬೇಕು. ರಾಜ್ಯ ಸರ್ಕಾರಕ್ಕೆ ಯಾವ ಅಧಿಕಾರವೂ ಇಲ್ಲ. ಪರಿಶಿಷ್ಟ ಜಾತಿಯಲ್ಲಿ ಯಾವುದೇ ಹೆಸರನ್ನು ಸೇರಿಸುವುದಕ್ಕೆ ಅಥವಾ ತೆಗೆಯುವುದಕ್ಕೆ ಆಗುವುದಿಲ್ಲ. ಕೆಲವರು ಈ ಜಾತಿಗಳ ಹೆಸರಿನಲ್ಲಿ ಸರ್ಟಿಫಿಕೇಟ್‌ಗಳನ್ನು ಮಾಡಿರಬಹುದು. ಅದಕ್ಕೆ ಸಿ.ಆರ್.ಇ. ಸೆಲ್ ಇದೆ. ಸುಮಾರು ೬೦೦-೭೦೦ ಪ್ರಕರಣಗಳನ್ನು ಪತ್ತೆ ಹಚ್ಚಿ ಅವರನ್ನು ಪ್ರಾಸಿಕ್ಯೂಟ್ ಮಾಡಿದ್ದೇವೆ. ಹಾಗೂ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದರಂತೆ ಉಗ್ರವಾದ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಕ್ರಮ ಕೈಗೊಳ್ಳುವುದನ್ನು ನಿಲ್ಲಿಸಿದ್ದಾರೆ.

ಶ್ರೀ ಜಿ. ಬಸವಣ್ಣಪ್ಪ.—ಇಲ್ಲ.

೭-೩೫ ಪಿ.ಎಂ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಪೂರಕ ಬೇಡಿಕೆಗಳ ಮೇಲೆ ಸಾರ್ಥಕವಾದ ರೀತಿಯಲ್ಲಿ ಚರ್ಚೆ ನಡೆದಿದೆ. ಒಂದೊಂದು ಅಭಿಯಾಚನೆಯ ಬಗ್ಗೆ ತಮ್ಮದೇ ಆದ ಭಾಷಾ ಶೈಲಿಯನ್ನು ಉಪಯೋಗಿಸಿ ಟೀಕೆಯನ್ನು ಮಾಡಿದ್ದಾರೆ. ನನ್ನ ತಿಳುವಳಿಕೆಯ ಪ್ರಕಾರ ಪ್ರತಿಯೊಂದು ಅಭಿಯಾಚನೆಯ ಬಗ್ಗೆಯೂ ಅದರ ಹಿಂದುಗಡೆ ಪೂರಕವಾದ ಟಿಪ್ಪಣಿ ಎಂದರೆ ಸಮರ್ಪಕವಾದ ರೀತಿಯಲ್ಲಿ ಕೊಟ್ಟಿದ್ದೇವೆಂದು ನನಗನ್ನಿಸುತ್ತದೆ. ೧-೨-೩ ಸಲ ಇದನ್ನು ನಾನು ಓದಿದ್ದೇನೆ. ಮುಖ್ಯವಾಗಿ ಪೂರಕ ಬೇಡಿಕೆಯ ಮೇಲೆ ಚರ್ಚೆ ನಡೆಸತಕ್ಕ ಸಮಯದಲ್ಲಿ ಸನ್ಮಾನ್ಯ ಮೊಯಿಲಿಯವರು ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆರ್ಥಿಕ ಶಿಸ್ತು ಇರಬೇಕು, ಆಯವ್ಯಯ ಪತ್ರವನ್ನು ಮಾಡತಕ್ಕ ಸಮಯದಲ್ಲಿ ದೂರಾಲೋಚನೆಯಿಂದ ಮತ್ತು ಚೆನ್ನಾಗಿ ಅರ್ಥೈಸಿ ವಿಷಯಗಳನ್ನು

ಮನನ ಮಾಡಿ, ಖರ್ಚು ಎಷ್ಟು ಬರುತ್ತದೆ, ಆದಾಯ ಎಷ್ಟು ಇರಬೇಕು ಎಂಬುದನ್ನು ಪೂರ್ಣವಾಗಿ ತಿಳಿದುಕೊಂಡು ಆಯವ್ಯಯವನ್ನು ಮಾಡಬೇಕೆಂಬುದು ತತ್ವ ಇದು ಈ ತತ್ವದ ನಿರೂಪಣೆಯ ಬಗ್ಗೆ ಸನ್ಮಾನ್ಯ ಮೊಯಿಲಿಯವರಿಗೂ ನನಗೂ ಯಾವ ವ್ಯತ್ಯಾಸ ಇಲ್ಲ. ಸರ್ಕಾರದ ಸಮ್ಮತಿಯಲ್ಲೂ ಏನೂ ವ್ಯತ್ಯಾಸ ಇಲ್ಲ. ಆದರೆ ಆಡಳಿತವನ್ನು ನಡೆಸತಕ್ಕ ಸಮಯದಲ್ಲಿ ಕೆಲವು ಸಂದರ್ಭದಲ್ಲಿ ಕಣ್ಣಿಗೆ ಕಾಣದೇ ಇಂತಹ ಸನ್ನಿವೇಶಗಳು ಕಣ್ಣು ಮಿರಿ ಕಾಣಿಸಿಕೊಳ್ಳುತ್ತವೆ. ಇದು ಒಂದು. ಎರಡನೆಯದಾಗಿ ಕೆಲವು ಸಮಯ ನಾವು ಸಾಂಕೇತಿಕವಾಗಿ ಹಣವನ್ನು ಇಟ್ಟಿರುತ್ತೇವೆ. ಈ ವರ್ಷ ಇಟ್ಟಿರುವಂತಹ ಹಣ ಖರ್ಚಾಗುತ್ತದೆಯೋ ಇಲ್ಲವೋ ನೋಡೋಣ ಎಂದು ಇಟ್ಟಿರುತ್ತೇವೆ. ಅದು ಖರ್ಚಾಗುತ್ತದೆ. ವರ್ಷ ನಡೆಯುವಂತಹ ಸಮಯದಲ್ಲಿ ಒಂದೊಂದು ಎಕ್ಸ್‌ಟೆನ್ಷನ್ ಆಗಬೇಕಾಗುತ್ತದೆ. ೫೦೦ ಕೋಟಿ ರೂಪಾಯಿಗಳನ್ನು ಚುನಾವಣೆಗಳಿಗಾಗಿ ಇಟ್ಟಿದ್ದೀರೆಂದು ಅದರ ಮೇಲೆ ಹೆಚ್ಚಾಗಿ ವ್ಯಾಖ್ಯಾನ ಮಾಡಿದ್ದಾರೆ. ನಂತರ ೨ ಸಲ ಚುನಾವಣೆಯನ್ನು ಮಾಡುವುದರ ಉದ್ದೇಶ ಏನಿತ್ತು? ಒಂದೇ ಸಲ ಚುನಾವಣೆಯನ್ನು ಮಾಡುವುದಕ್ಕಾಗುತ್ತಿರಲಿಲ್ಲವೆ ಎಂಬುದಾಗಿ ಕೇಳಿದ್ದಾರೆ. ಆದರೆ ಎರಡು ಸಲ ಚುನಾವಣೆಗಳು ನಡೆದದ್ದರಿಂದ ಹೆಚ್ಚು ಹಣ ಖರ್ಚಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತಿದ್ದೇನೆ. ಆದ್ದರಿಂದ ಹಣವನ್ನು Unforseen expenditure provided for under Article 285 of the Constitution of India ಖರ್ಚು ಮಾಡಬೇಕಾಗಿ ಬಂತು. ದುಂದು ವೆಚ್ಚ ಆಗಬಾರದು ಎನ್ನುವ ಮಾತನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆರ್ಥಿಕ ಶಿಸ್ತು ಇರಬೇಕೆಂಬುದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಇಷ್ಟೆಲ್ಲಾ ಒಪ್ಪಿಕೊಂಡರೂ, ಪ್ರಾರಂಭದಲ್ಲಿ ಸನ್ಮಾನ್ಯ ಮೊಯಿಲಿಯವರು ಗೋಬಲ್ ರಾಜ್ಯ, ಓಪನ್ ಡಕಾಯಿತಿ, ದರೋಡೆ, ಎಂದು ಮುಂತಾಗಿ ಶಬ್ದ ಪ್ರಯೋಗ ಮಾಡಿದರು.

ಶ್ರೀ ರಾಮಕೃಷ್ಣ ಹೆಗಡೆ.—ಗುಬ್ಬಿ ಮೇಲೆ ಬ್ರಹ್ಮಾಸ್ತ್ರ.

ಶ್ರೀ. ಎ. ಲಕ್ಷ್ಮೀಸಾಗರ್.— ಇದು ವಸ್ತು ಪರಿಸ್ಥಿತಿಗೆ ವಿರೋಧವಾಗಿರುವುದರ ಜೊತೆಗೆ ವರ್ಬಲ್ ಇನಾಕ್ಯುರೇಟ್‌ನೆಸ್, ಅದು ಕೂಡ ಆಗುತ್ತದೆ ಇಷ್ಟನ್ನು ಮಾತ್ರ ಹೇಳಿ ನನ್ನ ಮಾತನ್ನು ನಿಲ್ಲಿಸುತ್ತೇವೆಂದು ಅವರು ಹೇಳಿದರು. ಲಾರ್ಜಸ್ಟ್ ನೆಟ್ ಔಟ್‌ಗೋ ಅಂತ. ಸನ್ಮಾನ್ಯ ಅಧ್ಯಕ್ಷರೆ. ೬೨ ಕೋಟಿ ಅಂತ ನಾನು ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಹೇಳುವುದಾದರೆ The net out gois Rs. 92.27 crores. ಕ್ಯಾಷ್ ಹೋಗತಕ್ಕಂತಹದ್ದು This is the real point here. ಇದನ್ನು ಬೇರೆ ವರ್ಷಗಳಿಗೆ ಹೋಲಿಸಿ ನೋಡುವುದಾದರೆ, 1980-81ರಿಂದ ಹೇಳುತ್ತೇನೆ. ಒಟ್ಟು ವರಮಾನ ರಾಜ್ಯಕ್ಕೆ ಉಳಿದದ್ದು... In 1980-81 out of the total income of the State, the net out-go was 25.13% and similarly in 1981-82, it was 15.20%, 1982-83 11.58%, 1983-84 27.63%. 1984-85 11.18% and 1985-86 7.18% we have made remarkable recovery. ಈಗ It will be 3% of the total income of the State. This is the unmistakable indication of the economic descipline and the perspective and proper way of planning and preparing the Budget Estimates. There can be no better comment than this. If, truth is stranger than fiction then I cannot help.

ಆಮೇಲೆ ಸನ್ಮಾನ್ಯ ಮೋಯಿಲಿಯವರು ನಾನ್‌ಪ್ಲಾನ್ ಎಷ್ಟು ಪ್ಲಾನ್ ಎಷ್ಟು ಎಂಬ ಪ್ರಶ್ನೆಗಳನ್ನು ಕೇಳಿದ್ದಾರೆ. ಅದರ ಬಗ್ಗೆ ಹೇಳುವುದಾದರೆ, ಪ್ಲಾನ್‌ನಲ್ಲಿ ೧೯,೯೦೩ ಲಕ್ಷ ರೂಪಾಯಿಗಳು ನಾನ್ ಪ್ಲಾನ್‌ನಲ್ಲಿ ೮೩೭೪ ಲಕ್ಷ ರೂಪಾಯಿಗಳು. This is another indication of economic descipline ನಂತರ ಅವರು ರೈತರಿಗೆ ಎಷ್ಟು ಸಾಲವನ್ನು ಕೊಟ್ಟಿದ್ದೀರಿ ಎಂಬುದರ ಬಗ್ಗೆ ಕೇಳಿದ್ದಾರೆ, ಅದರ ಬಗ್ಗೆ ಸನ್ಮಾನ್ಯ ಜಾಲಪ್ಪನವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ವೀರಪ್ಪಮೊಯಿಲಿ.— ಅವರು ಒಟ್ಟು ಹೇಳಿದ್ದಾರೆ. ಬೇರೆ ಬೇರೆ ಬಾಬುಗಳಿಗಾಗಿ ಎಷ್ಟು ಎಂಬುದಾಗಿ ಹೇಳಬೇಕಲ್ಲ.

ಶ್ರೀ ಎ ಲಕ್ಷ್ಮೀಸಾಗರ್. ಆ ವಿವರ ನನ್ನ ಹತ್ತಿರ ಇಲ್ಲ. ಬೇಕಾದರೆ ತರಿಸಿಕೊಡುತ್ತೇನೆ. ಸನ್ಮಾನ್ಯ ಮೊಯಿಲಿಯವರು ತಮ್ಮ ಭಾಷಾ ವಿಶೇಷ ಶೈಲಿಯನ್ನು ವಿಶೇಷವಾದ ರೀತಿಯಲ್ಲಿ ಉಪಯೋಗ ಮಾಡಿದ್ದವು ಸಂದರ್ಭಕ್ಕೆ ಹೊಂದಿಕೊಳ್ಳತಕ್ಕ ಶಬ್ದಗಳನ್ನು ಅಲ್ಲಿ ಎಂದು ಅಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಿಕ್ಕವುಗಳಿಗೆ ಪೂರಕ ಟಿಪ್ಪಣಿಯನ್ನು ಕೊಟ್ಟಿದ್ದೇವೆ ಒಂದೊಂದೂ ಸಮಂಜಸವಾದುವುಗಳಾಗಿವೆ ಎಂದು ನನಗನ್ನಿಸುತ್ತದೆ. ನಂತರ ಸನ್ಮಾನ್ಯ ಕೃಷ್ಣನ್‌ರವರು ಸಾರ್ಕ್ ಸಮ್ಮೇಳನಕ್ಕಾಗಿ ಕೇಂದ್ರದಿಂದ ಎಷ್ಟು ಸಹಾಯ ಬಂತು ಎ ಬಾದಾಗಿ ಕೇಳಿದ್ದಾರೆ. ಕೇಂದ್ರದಿಂದ ಇದಕ್ಕಾಗಿ ೨ ಕೋಟಿ ೫೮ ಲಕ್ಷ ರೂಪಾಯಿಗಳು ಬಂದಿದ್ದು, ಅದರಲ್ಲಿ ಬೆಂಗಳೂರು ನಗರಸಭೆಗೆ ೨ ಕೋಟಿ ಹಣವನ್ನು ಕೊಟ್ಟಿದ್ದೇವೆ. ಮಿಕ್ಕ ೫೮ ಲಕ್ಷ ರೂಪಾಯಿಗಳನ್ನು ಹೆಲ್ತ್ ಡಿಪಾರ್ಟ್‌ಮೆಂಟಿಗೆ ಕೊಟ್ಟಿದ್ದೇವೆ. ಸಾಮಾನ್ಯವಾಗಿ ಎಕನಾಮಿಕ್ ಡಿಸಿಪ್ಲೀನ್ ಇರಬೇಕು. ಅದನ್ನೆಲ್ಲಾ ನಾವು ಒಪ್ಪಿಕೊಳ್ಳುತ್ತೇವೆ. ಆದರೆ ಆಡಳಿತವನ್ನು ನಡೆಸತಕ್ಕಂತಹ ಕಾಲದಲ್ಲಿ ನಮ್ಮ ಕಣ್ಣಿಗೆ ಕಾಣಿಸದ ಸನ್ನಿವೇಶಗಳಲ್ಲಿ ಹಣವನ್ನು ಜರೂರಾಗಿ ಅವಶ್ಯಕವಾಗಿ ಖರ್ಚು ಮಾಡಬೇಕಾಗಿ ಬರುತ್ತದೆ. ಅದರಲ್ಲಿ ರಾಜ್ಯಾಂಗದ ಪ್ರಾವಿಜನ್ ಇದೆ. ಆ ರೀತಿ ಮಾಡಿದ್ದೇವೆ ಎನ್ನುವ ಮಾತನ್ನು ಹೇಳುತ್ತಾ, ಅತ್ಯಂತ ಕಡಿಮೆ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಲಾಗಿದೆ ಎಂದೂ ಕೂಡ ಹೇಳುತ್ತೇನೆ. ಶ್ರೀಮಾನ್ ಯಡಿಯೂರಪ್ಪನವರು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಬಗ್ಗೆ ಹೇಳಿದ್ದಾರೆ. ಬಹಳ ಹಿಂದಿನ ಕಥೆ ಹಳೆಯ ರೋಗ. ಇದರ ಮೇಲೆ ಅನೇಕ ಸಲ ಚರ್ಚೆಯಾಗಿದೆ ಇದೇ ಸಭೆಯಲ್ಲಿ ನಾನೂ ಆ ಕಡೆ ಇದ್ದಾಗಲೂ ಚರ್ಚೆ ಮಾಡಿದ್ದೇನೆ. ಆದರೆ ಒಂದು ಸಂತೋಷದ ಸಂಗತಿ ಏನೆಂದರೆ, ಈ ವರ್ಷ ಅದು ಲಾಭ ಮಾಡಿದೆ. ಮುಂದೆ ಸರಿಹೋಗುತ್ತದೆಂದು ನಾನು ಅಂದು ಕೊಂಡಿದ್ದೇನೆ. ನಂತರ ಬೀಜದ ಕೊಂಡುಕೊಳ್ಳುವ ಬಗ್ಗೆಯೂ ಅವರು ಕೇಳಿದ್ದಾರೆ. ಬೀಜದ ಬಗ್ಗೆ ಸನ್ಮಾನ್ಯ ಚಾಲಪ್ಪನವರು ಈಗಾಗಲೇ ಹೇಳಿದ್ದಾರೆ. ಬೀಜದ ಬಗ್ಗೆ ಅವರಿಗೆ ಹೆಚ್ಚು ಮಾಹಿತಿ ಇದೆ. ಬೀಜದ ಬಗ್ಗೆ ನಾನು ಆಳವಾಗಿ ತಿಳಿದುಕೊಂಡಿಲ್ಲ. ಮತ್ತೆ ಅವರು ಡೈರಿಗೆ ೨೦೦ ಲಕ್ಷ ರೂಪಾಯಿಗಳನ್ನು ಏಕೆ ಕೊಟ್ಟಿದ್ದೀರಿ ಎಂಬುದಾಗಿ ಕೇಳಿದ್ದಾರೆ. ಈ ೨೦೦ ಲಕ್ಷ ರೂಪಾಯಿಗಳನ್ನು ಏನು ಡೈರಿಗೆ ಕೊಟ್ಟಿದ್ದೇವೆ ಅದು ರೈತರ ಅನುಕೂಲಕ್ಕೋಸ್ಕರವೇ ಇದರ ಬಗ್ಗೆ ನನಗೆ ಚೆನ್ನಾಗಿ ನೆನಪಿನಲ್ಲಿದೆ. ಶ್ರೀಮಾನ್ ಕೃಷ್ಣಾರೆಡ್ಡಿಯವರು ಕೆಲವು ಸಮಯದಲ್ಲಿ ಅವರು ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಇದನ್ನೂ ಹೇಳಿದ್ದಾರೆ. ಆದ್ದರಿಂದ ಈ ಅನುಪೂರಕ ಬೇಡಿಕೆ ಯಥಾವತ್ತಾಗಿದೆ. ಸಮಯೋಚಿತವಾಗಿದೆ, ಸಮರ್ಪಕವಾಗಿದೆ, ಹೇಳಿ ಆದ್ದರಿಂದ ಈ ಮಾನ್ಯ ಸಭೆ ಇದಕ್ಕೆ ತನ್ನ ಒಪ್ಪಿಗೆಯನ್ನು ನೀಡಬೇಕೆಂದು ಭಿನ್ನವಿಸಿಕೊಳ್ಳುತ್ತೇನೆ.

ಶ್ರೀ ವೀರಣ್ಣ.— ಸನ್ಮಾನ್ಯ ಅಧ್ಯಕ್ಷರೆ. ಮಾನ್ಯ ಕೃಷ್ಣನ್ ಅವರು ಮಾತನಾಡುತ್ತಾ, ಸಣ್ಣ ಉಳಿತಾಯ ಯೋಜನೆಯಲ್ಲಿ ಹಣವನ್ನು ಸಂಗ್ರಹಣೆ ಮಾಡುವುದಕ್ಕೆ ಇದ್ದಂತಹ ಗುರಿಯಲ್ಲಿ ೩೬೦ ಕೋಟಿ ಸಂಗ್ರಹ ಆಗಿದೆ. ಅದಕ್ಕೆ ೭೫ ಲಕ್ಷ ರೂಪಾಯಿಗಳನ್ನು ಪಬ್ಲಿಸಿಟಿಗಾಗಿ ವಗೈರೆಗಾಗಿ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ. ಅವರಿಗೆ ತಿಳಿಸುವುದಾದರೆ ಇದು ಅತಿ ಕಡಿಮೆ ಎಂದು ಹೇಳಿದರೆ ತಪ್ಪಾಗಲಾರದು. ಆಂಧ್ರ ಪ್ರದೇಶದಲ್ಲಿ ಕೇವಲ ೧೫೦ ಕೋಟಿ ರೂಪಾಯಿಗಳನ್ನು ಸಂಗ್ರಹಣೆ ಮಾಡುವುದಕ್ಕೆ ಬರೀ ಪಬ್ಲಿಸಿಟಿಗಾಗಿ ೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಸಣ್ಣ ಉಳಿತಾಯ ಸಂಗ್ರಹಣೆಗೆ ಇನ್‌ಟೆನ್ಸೀವ್ ಕ್ಯಾಂಪೇನ್ ಪ್ರಾರಂಭ ಮಾಡಿದ ಪ್ರಯುಕ್ತ ಪೋಸ್ಟ್ ಆಫೀಸ್‌ನಲ್ಲಿ ಎನ್.ಎಸ್.ಸಿ.ಯ ಫಾರಂ ಸಿಕ್ಕದೇ ಇರತಕ್ಕ ಪರಿಸ್ಥಿತಿ ಉಂಟಾಯಿತು. ಪಾಸ್ ಬುಕ್ ಸಿಕ್ಕದೇ ಇರತಕ್ಕಂತಹ, ಎಸ್.ಬಿ. ಫ್ರೀ ಕಾರ್ಡ್ ಸಿಕ್ಕದೇ ಇರತಕ್ಕ ಪರಿಸ್ಥಿತಿ ಉಂಟಾಯಿತು ಅದಕ್ಕೋಸ್ಕರವಾಗಿ ಪೋಸ್ಟ್ ಆಫೀಸಿನ ನೌಕರರು ನಮಗೆ ಕೆಲಸದ ಒತ್ತಡ ಜಾಸ್ತಿ ಎಂದು ಪ್ರತಿ ದಿವಸ Telegram ಮೂಲಕ ಕಳಿಸಲು ಪ್ರಾರಂಭಿಸಿದರು. ಕಾರಣ ಏನೆಂದರೆ ಈ ಕೆಲಸ ಮಾಡುವುದಕ್ಕೆ ನಮ್ಮ ಕೈಯಲ್ಲಿ ಆಗುತ್ತಾ ಇಲ್ಲ, ಒತ್ತಡ ಜಾಸ್ತಿ ಇದೆ ಎಂದು ಹೇಳಿದರು. ಈ ಸಣ್ಣ ಉಳಿತಾಯ ಯೋಜನೆ ಪೀಪಲ್ ಮೂವ್‌ಮೆಂಟ್ ಆಗಬೇಕೆಂದು ಹೇಳಿ ಸರ್ಕಾರದ ವತಿಯಿಂದ ಪಾಸ್ ಬುಕ್‌ಗಳನ್ನು ನಾವೇ ಸ್ವಂತ ಖರ್ಚಿನಲ್ಲಿ ಪ್ರಿಂಟ್ ಮಾಡಿಸಿಕೊಟ್ಟಿದ್ದೇವೆ ಎನ್.ಎಸ್.ಸಿ ಫಾರಮ್‌ಗಳನ್ನು, ಎಸ್.ಬಿ. ಫ್ರೀ ಕಾರ್ಡ್‌ಗಳನ್ನು ನಾವು ಪ್ರಿಂಟ್ ಮಾಡಿದ್ದೇವೆ, ಸಣ್ಣ ಉಳಿತಾಯಕ್ಕೆ ಉತ್ತೇಜನ ಕೊಡುವ ದೃಷ್ಟಿಯಿಂದ ಕೇಂದ್ರದವರು ಏಜೆಂಟ್ಸ್‌ಗೆ ಶೇಕಡ ೨ ಕಮಿಷನ್ ಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದ

ಈ ಯೋಜನೆಗೆ ನಾವೂ ಉತ್ತೇಜನ ಕೊಡುವ ದೃಷ್ಟಿಯಿಂದ, ನಮ್ಮ ಅಭಿವೃದ್ಧಿ ಕಾರ್ಯಗಳಿಗೆ ಆ ಹಣ ಬರುತ್ತದೆನ್ನುವ ದೃಷ್ಟಿಯಿಂದ ನಾವೂ ಈ ಬಗ್ಗೆ ಘರ್ಷಿಯನ್ನು ಉತ್ತೇಜನ ಕೊಡುತ್ತಿದ್ದೇವೆ ೩೯೦ ಕೋಟಿ ರೂಪಾಯಿ ಕಲೆಕ್ಟ್ ಮಾಡಬೇಕಾದರೆ ೧೦ ಪರ್ಸೆಂಟ್‌ನಂತೆ ೪ ಕೋಟಿ ರೂ. ಇನ್‌ಸೆಂಟೀವ್ ಕೊಡಬೇಕಾಗಿತ್ತು. ಕೇವಲ ನಾವು ಕೊಟ್ಟಿರತಕ್ಕದ್ದು ೭೫ ಲಕ್ಷ ರೂಪಾಯಿಗಳು. ಇದರಲ್ಲಿ ಅಧಿಕಾರಿಗಳಿಗೆ ಕೊಡತಕ್ಕ ಭತ್ಯ ಹಾಗೂ ಇನ್ನಿತರ ಖರ್ಚು ಎಲ್ಲಾ ಇದರಲ್ಲಿ ಸೇರಿದೆ. ಇದರಲ್ಲೂ ನಾವು ಉಳಿತಾಯ ಮಾಡಿದ್ದೇವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲೂ ನಾವು ೩ ಕೋಟಿ ೨೫ ಲಕ್ಷ ರೂ.ಗಳನ್ನು ಉಳಿತಾಯ ಮಾಡಿದ್ದೇವೆ. ನಾವು ಯಾವುದೇ ರೀತಿಯಿಂದ ದುಂದು ವೆಚ್ಚ ಮಾಡಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ಅಧ್ಯಕ್ಷರೇ, ಆಕ್ಟ್ರಾಯ್ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ಒಂದು ವಿಷಯ ಕೇಳಬೇಕು. ಆಕ್ಟ್ರಾಯ್ ಬಗ್ಗೆ ನನ್ನ ನಿಲುವು ಸ್ಥಿರ. ಇವತ್ತು ಯಾವ ಮುನಿಸಿಪಾಲಿಟಿಗಳು ಇವೆ ಅವಕ್ಕೆ ಬೇರೆ ರೀತಿಯ ಆದಾಯ ಇವತ್ತು ಇಲ್ಲ. ಈಗ ಈ ಬಗ್ಗೆ ಸರ್ಕಾರದಿಂದ ಕೊಡತಕ್ಕ ಕಂತು, ಮೂರು ಅಥವಾ ನಾಲ್ಕು ತಿಂಗಳಿಗೆ ಕೊಡತಕ್ಕದ್ದು. ಅದರಲ್ಲಿ ಕೊನೆಯ ಕಂತನ್ನು ಇನ್ನೂ ಬಿಡುಗಡೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಅದನ್ನು ಆದಷ್ಟು ಬೇಗ ಬಿಡುಗಡೆ ಮಾಡಬೇಕು. ಹೀಗೆ ಮಾಡಿದರೆ ಅಲ್ಲಿ ಮುನಿಸಿಪಾಲಿಟಿಗಳಲ್ಲಿ ಇರತಕ್ಕ ಕಾಮಗಾರಿ ಕೆಲಸಗಳು ಏನಾಗಬೇಕು? ಅವರ ಸಂಬಳದ ಗತಿ ಏನು ? ಅಲ್ಲಿ ಆದಾಯ ಇಲ್ಲದಿದ್ದರೆ ಯಾವ ರೀತಿ ಅವರು ವ್ಯವಹಾರ ಮಾಡಬೇಕೆನ್ನುವ ವಿಷಯವನ್ನು ನಾನು ಹಲವಾರು ಬಾರಿ ಎತ್ತಿದ್ದೇನೆ. ಈ ಬಗ್ಗೆ ಶಂಕೆ ಏಕೆ ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಆಕ್ಟ್ರಾಯ್‌ನ್ನು ಪುನ: ತಂದರೆ ಎಲ್ಲಾ ಮುನಿಸಿಪಾಲಿಟಿಗಳಿಗೆ ಜೀವ ತಂದ ಹಾಗೆ ಆಗುತ್ತದೆ. ಅವು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ನಾವು ಅಧಿಕಾರದಲ್ಲಿ ಇದ್ದಾಗಲೇ ಈ ಆಕ್ಟ್ರಾಯ್ ವಜಾ ಆದದ್ದು. ನನ್ನನ್ನು ಕೇಳದೇ ವಜಾ ಮಾಡಿದರು. ಇವತ್ತು ನಾನು ಅಸೆಂಬ್ಲಿಯಲ್ಲಿ ಹೇಳುತ್ತೇನೆ. ಆಕ್ಟ್ರಾಯ್ ವಸೂಲಿ ಮಾಡುವಾಗ ಮಧ್ಯಸ್ಥಿಕೆದಾರರು ತಿನ್ನುತ್ತಾರೆಂದು ಹೇಳುತ್ತೀರಿ. ಇವತ್ತು ಎಲ್ಲಿ ತಿನ್ನುವುದಿಲ್ಲ ಹೇಳಿ? ಎಲ್ಲಾ ಕಡೆಯೂ ತಿನ್ನುತ್ತಾರೆ. ತಿಂದು ಉಳಿಸಿರುವುದರಲ್ಲಿ ಪ್ರತಿ ದಿವಸ ಆದಾಯ ಬರುತ್ತದೆ. ತಾವು ಪುನಃ ಪರಿಶೀಲನೆ ಮಾಡಬೇಕೆಂದು ಮುಖ್ಯಮಂತ್ರಿಗಳನ್ನು ವೈಯುಕ್ತಿಕವಾಗಿ ನಾನು ಕೇಳುತ್ತೇನೆ. ಬೇರೆ ರಾಜ್ಯಗಳಲ್ಲಿ ಆಕ್ಟ್ರಾಯ್‌ನ್ನು ತೆಗೆದು ಹಾಕಿ ಪುನಃ ಹಾಕಿದ್ದಾರೆ. ಕಾರಣ ಏನೆಂದರೆ, ಕೆಲಸ ನಡೆಯುವುದಿಲ್ಲ. ಇವತ್ತು ೪೦-೫೦ ಕೋಟಿ ರೂಪಾಯಿ ನೀವೇ ಏಕೆ ಕೊಡುತ್ತೀರಿ? ಎಂಟ್ರಿ ಟ್ಯಾಕ್ಸ್‌ನಲ್ಲಿ ಅಷ್ಟು ಬರುತ್ತಾ ಇಲ್ಲ. ಆದಕ್ಕೋಸ್ಕರ ಆಕ್ಟ್ರಾಯ್ ಪುನಃ ಪ್ರಾರಂಭ ಮಾಡಿದರೆ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಕೂಡಾ ಆದಾಯ ಮತ್ತು ವೆಚ್ಚವನ್ನು ಸರಿದೂಗಿಸಿಕೊಳ್ಳಲಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ.— ಮಾನ್ಯ ಅಧ್ಯಕ್ಷರೇ, ಆಕ್ಟ್ರಾಯ್ ಇರಬೇಕೇ ಅಥವಾ ತೆಗೆಯಬೇಕೇ ಎನ್ನುವ ಬಗ್ಗೆ ಸುಮಾರು ೧೫ ವರ್ಷಗಳ ಕಾಲ ಈ ದೇಶದಲ್ಲಿ ಚರ್ಚೆ ಆಗಿ ಕೇಂದ್ರ ಸರ್ಕಾರದವರು ಈ ಬಗ್ಗೆ ಒಂದು ಸಮಿತಿ ಮಾಡಿ, ಆ ಸಮಿತಿ ರಾಜ್ಯಗಳನ್ನೆಲ್ಲಾ ಸುತ್ತಿ ಕೊನೆಗೆ ಒಂದು ತೀರ್ಮಾನಕ್ಕೆ ಬಂತು. ಸಾರಿಗೆಯ ದೃಷ್ಟಿಯಿಂದ, ಸುಗಮವಾಗಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಸರಕು ಹೋಗುವುದು ಅಗತ್ಯ. ಅದಕ್ಕೆ ಅಡೆತಡೆಯಾಗಬಾರದು ಎನ್ನುವ ದೃಷ್ಟಿಯಿಂದ ಆಕ್ಟ್ರಾಯ್ ತೆಗೆಯಬೇಕೆಂದು ಅವರು ಪಾಲಿಸಿ ಮಾಡಿದರು. ನಾನು ೧೯೭೧ರಲ್ಲಿ ಬಡ್ಜೆಟ್‌ನ್ನು ಈ ಮನೆಯ ಮುಂದೆ ಇಟ್ಟಾಗ ಆಕ್ಟ್ರಾಯ್ ತೆಗೆದುಹಾಕುತ್ತೇವೆಂದು ಅಂದಿನ ಸರ್ಕಾರದ ನಿರ್ಧಾರವನ್ನು ಬಹಿರಂಗ ಪಡಿಸಿದೆ. ಅದು ಜಾರಿಗೆ ಬರಬೇಕಾದರೆ ೪-೫ ವರ್ಷಗಳಾದವು. ಈಗ ಒಂದು ಹೊಸ ಪದ್ಧತಿಯನ್ನು ಜಾರಿಗೆ ತಂದಿದ್ದೇವೆ.

ಮುನಿಸಿಪಲ್ ಅಥಾರಿಟೀಸ್ ಕಾರ್ಪೊರೇಷನ್‌ರವರು ಎಲ್ಲರೂ ಅಂದುಕೊಂಡಿದ್ದಾರೆ, ಆಕ್ಟ್ರಾಯಿ ಎಷ್ಟು ಬರುತ್ತಿತ್ತು ಮತ್ತು ತ್ತು ಅಷ್ಟು ಸಂಪೂರ್ಣವಾಗಿ ಕಾಂಪನ್‌ಸೇಟ್ ಆಗುತ್ತಿದೆಯೋ ಈ ವಿಚಾರ ವನ್ನು ಮಾನ್ಯ ಸದಸ್ಯರು ಹೇಳಿದರು, ೧೯೮೧ನೇ ಇಸವಿಯಲ್ಲಿ ಆಕ್ಟ್ರಾಯಿಯಿಂದ ಒಟ್ಟು ಬರತಕ್ಕ ಆದಾಯ ೧೨ರಿಂದ ೧೩ ಕೋಟಿ ರೂಪಾಯಿ ಆಗಿತ್ತು. ಇವತ್ತು ೩೦-೪೦ ಕೋಟಿ ರೂಪಾಯಿ ಆಗಬಹುದು.

ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ೫೦ ಕೋಟಿ ರೂಪಾಯಿ ಆಗಬಹುದೆಂದು ಹೇಳುತ್ತಾರೆ. ಅದು ಅಂದಾಜು. ಎಂಟ್ರಿ ಟ್ಯಾಕ್ಸ್‌ನಿಂದ ಹೋದವರ್ಷ ನಮಗೆ ಬಂದಿರತಕ್ಕದ್ದು ೩೦ ಕೋಟಿ ರೂಪಾಯಿಗಳು ಹೋದವರ್ಷ ನಾವು ಮುನಿಸಿಪಾಲಿಟಿಗಳಿಗೆ ಹಂಚಿರತಕ್ಕದ್ದು ೪೨ ಕೋಟಿ ರೂಪಾಯಿಗಳು ಡಿಸ್ಕ್ರಿಷನರಿ ಒಂದೆರಡು ಕೋಟಿ ಇಟ್ಟುಕೊಂಡಿದ್ದೇವೆ. ಅದರ ಗ್ರೋತ್‌ರೇಟ್ ನಮ್ಮ ಸೇಲ್ಸ್‌ಟ್ಯಾಕ್ಸ್‌ನಲ್ಲಿ ಎಷ್ಟು ಇಟ್ಟು ಕೊಳ್ಳುತ್ತೇವೆ ಅಷ್ಟನ್ನೇ ನಾವು ಈಗ ಮುನಿಸಿಪಾಲಿಟಿಗಳಿಗೆ ಆಕ್ಟ್ರಾಯಿ ಕಾಂಪೆನ್‌ಸೇಷನ್ ಮೊದಲು ೫ ಪರ್ಸೆಂಟ್ ಕೊಡಲಾಗುತ್ತಿತ್ತು ಈಗ ೧೦ ಪರ್ಸೆಂಟ್‌ಗೆ ಹೆಚ್ಚು ಮಾಡುತ್ತಾ ಇದ್ದೇವೆ. ಪ್ರೊಗ್ರೆಸ್ಸೀವ್ ಮೆಜರ್ ನಾನು ತೆಗೆದುಕೊಂಡಿದ್ದೇವೆ ನಾನು ಆ ವಿಚಾರದಲ್ಲಿ ಪುನಃ ಹಿಂದೆ ಹೋಗತಕ್ಕದ್ದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

ಕರ್ನಾಟಕ ಧನ ವಿನಿಯೋಗ ವಿಧೇಯಕ ೧೯೮೭

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೭ನೇ ಇಸವಿಯ ಕರ್ನಾಟಕ ಧನ ವಿನಿಯೋಗ ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ ೨ ರಿಂದ ೩ ರವರೆಗೆ

ಅಧ್ಯಕ್ಷರು.—ಖಂಡ ೨ರಿಂದ ೩ರವರೆಗೆ ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ರಿಂದ ೩ರವರೆಗಿನ ಖಂಡಗಳು ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ–೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ.. ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯು ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯು ವಿಧೇಯಕದ ಭಾಗವಾಗಿರುತ್ತದೆ.

(ಮೊದಲನೆಯ ಖಂಡ ದೀರ್ಘ ಶೀರ್ಷಿಕೆಯು ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಯು ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ರಾಮಕೃಷ್ಣ ಹೆಗಡೆ.—"ಕರ್ನಾಟಕ ಧನ ವಿನಿಯೋಗ ೧೯೮೭ ಅನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ "ಕರ್ನಾಟಕ ಧನ ವಿನಿಯೋಗ ೧೯೮೭ ಅನ್ನು ಅಂಗೀಕರಿಸುವುದು."

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

೧೯೮೭ ಕರ್ನಾಟಕ ಧನ ವಿನಿಯೋಗ(ಕ್ರಮಾಂಕ-೨)ವಿಧೇಯಕ ಪರ್ಯಾಲೋಚನೆಯ ಪ್ರಸ್ತಾಪ.

ಶ್ರೀ ಎ. ಲಕ್ಷ್ಮೀಸಾಗರ್.—ಕರ್ನಾಟಕ ಧನ ವಿನಿಯೋಗ ಕ್ರಮಾಂಕ-೨ ವಿಧೇಯಕ ೧೯೮೭ ಅನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಎ. ಲಕ್ಷ್ಮೀಸಾಗರ್.—ಇದರ ಬಗ್ಗೆ ಈ ಸಭೆಯಲ್ಲಿ ಸಾಕಷ್ಟು ವಿವರಣಾತ್ಮಕ ವಾದ ಚರ್ಚೆ ನಡೆದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ದೀರ್ಘವಾದ ಉತ್ತರ ಕೊಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಅಪ್ರೊಪ್ರಿಯೇಷನ್ ಬಿಲ್‌ನ ಬಗ್ಗೆ ನಾವು ಚರ್ಚೆ ಮಾಡಬಾರದೇ Appropriation is completely different from Supplementary Budget. We have to take part in it, How, your deficit financing or surplus financing has made all of you to resort to this appropriation, We have got to do this job. We have got to discuss this matter. How are you going to balance your dificit budgeting is a point. How you have been doing? Every year you introduce this. How and to what extent you are going to provide funds and take fund from other charges. We have got to discuss all this. We will take up this tomorrow.

ಶ್ರೀ ರಾಮಕೃಷ್ಣ ಹೆಗಡೆ.- ರಾತ್ರಿಯೆಲ್ಲಾ ರಾಮಾಯಣ ಕೇಳಿ ಕೇಳಿ ಬೆಳಗಿನ ಜಾವದಲ್ಲಿ ರಾಮನಿಗೂ ಸೀತೆಗೂ ಯಾವ ಸಂಬಂಧವೆಂದು ಕೇಳಿದ ಹಾಗೆ ಆಯಿತು. ಬಜೆಟ್ ಭಾಷಣವನ್ನು ಓದಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ. ಎಷ್ಟು ದಿವಸ ಚರ್ಚೆಯಾಯಿತು. ಎಷ್ಟು ಬೆಳಕು ನಮ್ಮ ಮೇಲೆ ಬಿದ್ದಿರಬೇಕು ಎಂದು

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಆಗಲಿಲ್ಲ, ಆರು ದಿವಸ ಧರಣಿ ಆಯಿತು,

ಶ್ರೀ ರಾಮಕೃಷ್ಣ ಹೆಗಡೆ.—ಮೂಕ ಚರ್ಚೆ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಚರ್ಚೆ ಮಾಡಲಿಕ್ಕೆ ಅವಕಾಶವೇ ಸಿಗಲಿಲ್ಲ. ಆದ್ದರಿಂದ ಚರ್ಚೆ ಮಾಡೋಣ ಎಂದು ಈಗ ಹೇಳುತ್ತಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಸೀತೆಗೂ ರಾಮನಿಗೂ ಏನು ಆಯಿತು ಎಂದರೆ, ಅವರು ಏನು ಮಾಡಿದರು ? ಅವರು ಏನು ಮಾಡಿದರು ಎಂದು ನಮಗೆ ಏಕೆ ಬೇಕು? ಸೀತೆಗೂ ರಾಮನಿಗೂ ಏನಾಗಬೇಕು ಎಂದರೆ ರಾಮಾಯಣ ಓದಬೇಕಿಲ್ಲ Deficit financing is a subject, Now, Appropriation is another subject connected with deficit financing. How are you going to try to balance your dificit financing? How did you resort to this Appropriation? You have passed most of the Demands without our participation and discussion.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಡಿಫಿಸಿಟ್‌ನ್ನು ತೋರಿಸಿದ್ದೇವೆ. ಇದರಲ್ಲಿ ಸುಮಾರು ೧೪೬ ಕೋಟಿಯಷ್ಟು ಹೊಸದಾಗಿ ಸಂಪನ್ಮೂಲಗಳನ್ನು ಯಾವ ರೀತಿ ನಾವು ಶೇಖರಿಸಬೇಕೆಂದಿದ್ದೇವೆ ಎಂಬುದನ್ನು ಇದರಲ್ಲಿ ಬರೆದಿದ್ದೇವೆ. ಇದರ ಮುಖಾಂತರ ಇಷ್ಟು ಬರುತ್ತದೆ ಎಂಬುದು ನಮ್ಮ ಅಂದಾಜು. ಇನ್ನು ಬಾಕಿ ಡಿಫಿಸಿಟ್‌ನ್ನು ಬಹುಶಃ ಕೇಂದ್ರ ಸರ್ಕಾರದವರು ಏನು ಬಜೆಟ್‌ನಲ್ಲಿ, ಕೆಲವು ಎಕ್ಸೈಸ್‌ನಲ್ಲಿ ಏನು ಏರುಪೇರು ಮಾಡಿದ್ದಾರೊ ವ್ಯತ್ಯಾಸ ಮಾಡಿದ್ದಾರೆ. ಆದರಿಂದ ಸ್ವಲ್ಪ ಮಟ್ಟಿಗೆ ಬರುತ್ತದೆ. ಎಕ್ಸೈಸ್ ಮತ್ತು ಇನ್ನಿತರ ಬಾಬುಗಳಿಂದ ನಮಗೆ ಬರತಕ್ಕಂಥ ಆದಾಯದಲ್ಲಿ ಸ್ವಲ್ಪ ಹೆಚ್ಚಳ ಆಗಬಹುದು. ಇವೆಲ್ಲಾ ಸೇರಿ ಒಟ್ಟು ಕೊನೆಗೆ ಡಿಫಿಸಿಟ್ ಅನ್ನು ಜೀರೊ ಮಾಡಬೇಕೆಂದು ನಮ್ಮ ಉದ್ದೇಶ ಅದು ಸಫಲವಾಗಬಹುದು...

SRI B. BASAVALINGAPPA,—will you kindly explain what is Appropriation? ಅಧ್ಯಕ್ಷರೇ ತಾವು ಎಲ್ಲಾ ಹೇಳಿದ್ದೀರಿ. ಹೇಳಿದ್ದೆಲ್ಲಾ ಬರೆದಿದ್ದೀರಿ ಓದಿದ್ದೀರಿ, ಇಷ್ಟೆಲ್ಲಾ ವಿಚಾರ ಮಾಡಿದ್ದು ಆಗಿದೆ. ಅಪ್ರಾಪ್ರಿಯೇಶನ್ ಎಂದರೆ ಯಾವ ಬಾಬಿನಲ್ಲೂ ಖರ್ಚು ಮಾಡುವುದಿಲ್ಲ. ಈ ರೂಪದಲ್ಲಿ ಹಣ ವಾಪಾಸನ್ನು ತೆಗೆದುಕೊಳ್ಳಬೇಕು ಎಂದು ಸಮಂತಾಗಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ? ಇದನ್ನು ನಾವು ವಿಚಾರ ಮಾಡಬಾರದೇ?

SRI RAMAKRISHNA HEGDE.—The Appropriation is nothing but authorising the Government in an appropriate manner to incur the expenditure in the coming year, That is called appropriation.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ ಇವತ್ತು ಬೆಳಿಗ್ಗೆ ಬೇಗನೇ ಬಂದೆ. ಮುಖ್ಯಮಂತ್ರಿಗಳು ನಾವು ಎತ್ತಿದಂಥ ಹಲವಾರು ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ಕೊಡಬಹುದು ಎಂದು ನಿರೀಕ್ಷಿಸಿದ್ದೆ. ಅಧಿಕಾರಿಗಳ ಮೇಲೆ ಲಗಾಮು ಹಿಡಿದುಕೊಂಡು ಸವಾರಿ ಮಾಡಬೇಕು ಎಂದು ನಾನು ಹೇಳಿದ ಪ್ರಶ್ನೆಯೊಂದನ್ನು ಬಿಟ್ಟರೆ ಬಾಕಿ ಯಾವುದಕ್ಕೂ ಉತ್ತರ ಹೇಳಲಿಲ್ಲ. ನಾನು ಅನೇಕ ವಿಚಾರಗಳನ್ನು ಹೇಳಿದ್ದೆ. ಬಸವಲಿಂಗಪ್ಪನವರು ಹೇಳಿದ ತಕ್ಷಣ ನೂರು ಕೋಟಿ ಕೊಟ್ಟು ಹಾಸ್ಟೇಲ್ ಮಾಡುತ್ತೇವೆ, ಎಸ್‌ಸಿ:ಎಸ್‌ಟಿಗೆ ಅದು ಇದು ಮಾಡುತ್ತೇವೆ ಎಂದು ಹೇಳಿದರು. ನಾವು ೫೧ ಪರ್ಸೆಂಟ್ ಇದ್ದೇವೆ. ನಮಗೆ ಏನಾದರೂ ಪ್ರೋಗ್ರಾಂ ಮಾಡುತ್ತೇವೆ ಎಂದು ಹೇಳಬಾರದೇ? ಎಲ್ಲಾ ಹೆಣ್ಣು ಮಕ್ಕಳಿಗೆ ಹಾಸ್ಟೇಲ್, ಸ್ಕೂಲ್ ಮಾಡಲು ಇಷ್ಟು ಹಣ ಇಡುತ್ತೇವೆ, ಅವರಿಗೆ ಸ್ವಂತ ಉದ್ಯೋಗಕ್ಕೆ ಅನುಕೂಲ ಮಾಡುತ್ತೇವೆ ಎಂದು ಏನೂ ಹೇಳಲಿಕ್ಕೆ ತೋರಲಿಲ್ಲಾ? ನಿಮಗೆ ಏನೂ ಗೊತ್ತಾಗಲ್ಲವೇ?

ನಿಮ್ಮ ಅಧಿಕಾರಿಗಳು ಏನೇನು ಮಾಡುತ್ತಾರೋ, ಹಾಗಂತ ಲಗಾಮು ಹಿಡಿದುಕೊಂಡು ಸವಾರಿ ಮಾಡಲೇ ಎಂಬುದನ್ನು ಬಿಟ್ಟರೆ ದೊಡ್ಡ ಮರದಲ್ಲಿ ರಮಾ ಭಂಡಾರಿ ಅಂತಹವರನ್ನು ನೇಣು ಹಾಕುತ್ತೇವೆಂದು ಹೇಳುವುದಕ್ಕಾಗಲಿಲ್ಲ. ಅಂತಹವರು ಇರಬಾರದು. ಪ್ರಪಂಚದಲ್ಲಿ ಅಂತಹವರು ಇರುವುದು ತಪ್ಪು. ಸಿಡಿ ಶೂಲಕ್ಕೆ ಹಾಕುತ್ತೇವೆಂದು ಹೇಳುವುದಕ್ಕಾಗಲಿಲ್ಲ. ನಿಮ್ಮ ಪಕ್ಷದಲ್ಲಿ ರಾಚಯ್ಯನವರೂ ಇದ್ದರು, ಈ ಸಂದರ್ಭದಲ್ಲಿ ಯಾರೋ ಹೇಳಿದ ಒಂದು ಕಥೆ ನೆನಪಾಗುತ್ತದೆ. ಒಬ್ಬರು ದೊಡ್ಡ ಮಹಾರಾಜ ಹೆಗಡೆಯವರಂಥ ದೊಡ್ಡ ಮನುಷ್ಯ ಭಾರಿ ದೊಡ್ಡ ದೇವಸ್ಥಾನ ಕಟ್ಟಿಸಿದರಂತೆ. ದೇವಸ್ಥಾನಕ್ಕೆ ಚಿತ್ರ, ಕಂಬ, ಗೋಪುರ ಎಲ್ಲಾ ಮಾಡಿಸಿ, ದೇವರ ಹತ್ತಿರ ಹೋದನಂತೆ. ದೇವರ ಹತ್ತಿರ ಹೋಗಿ, ಅಪ್ಪಾ ನಾನು ಸ್ಥಾಪನೆ ಮಾಡಬೇಕು, ನೀವು ದಯವಿಟ್ಟು ಬಂದುಬಿಡಬೇಕು ಅಂದನಂತೆ ಆಯಿತು ಬರುತ್ತೇನೆ ಎಂದು ಹೇಳಿದರಂತೆ. ಇನ್ನೇನು ದೇವರು ಬರಬೇಕು, ನಾಳೆ ದಿವಸ ಸ್ಥಾಪನೆ ಆಗಬೇಕು. ಅಷ್ಟರಲ್ಲಿ ದೇವರು ಹೇಳಿಕಳುಹಿಸಿದನಂತೆ. ಅಪ್ಪಾ, ಇನ್ನೊಬ್ಬ ದೊಡ್ಡ ಭಕ್ತ ಇದ್ದಾನೆ. ಅವನು ನೀನು ಕಟ್ಟಿಸಿರುವುದಕ್ಕಿಂತ ದೊಡ್ಡ ದೇವಸ್ಥಾನ ಕಟ್ಟಿಬಿಟ್ಟು, ನೀವು ಬರದೇಹೋದರೆ ನಾನು ಉಳಿಯುವುದಿಲ್ಲವೆಂದು ಗಲಾಟೆ ಮಾಡುತ್ತಿದ್ದಾನೆ. ಆದ್ದರಿಂದ ಅಲ್ಲಿಗೆ ಮೊದಲು ಹೋಗಬೇಕು. ನಿಮ್ಮದು ಆಮೇಲೆ ಆಗಲಿ ಎಂದು ಹೇಳಿಕಳುಹಿಸಿದನಂತೆ. ಮಹಾರಾಜ, ಆ ದೊಡ್ಡ ಮನುಷ್ಯ ಯಾರು ಎಂದು ಹುಡುಕಿಸಿದನಂತೆ. ನಾನು ಎಂತಹ ದೊಡ್ಡ ದೇವಸ್ಥಾನ ಕಟ್ಟಿಸಿದ್ದೇನೆ ನನಗಿಂತ ದೊಡ್ಡ ದೇವಸ್ಥಾನ ಯಾರು ಕಟ್ಟಿಸಿದ್ದಾರೆ ಇದಕ್ಕಿಂತ ಸುಂದರವಾದ ದೇವಸ್ಥಾನ ಯಾರು ಕಟ್ಟಿಸಿದ್ದಾರೆ ಎಂದು ಡಂಗೂರ ಹೊಡೆಸಿ ಹುಡುಕಿಸಿದನಂತೆ. ಯಾರೂ ಸಿಕ್ಕಲಿಲ್ಲವಂತೆ. ಕೊನೆಗೆ ಯಾರೋ ಒಬ್ಬರು, ರಾಚಯ್ಯನಂತಹವರು ಅವರಿಗೆ ಕಿವಿಮಾತು ಹೇಳಿದರಂತೆ. ಹೌದು, ಅಲ್ಲೊಬ್ಬ ಇದ್ದ, ಅವನು ದೇವಸ್ಥಾನ ಕಟ್ಟಿಸುತ್ತೇನೆ ಎಂದು ಹೇಳುತ್ತಿದ್ದ, ಬಹುತೇಕ ಕಟ್ಟಿಸಿದ್ದಾನೋ ಏನೋ ಆಗ ಅವನನ್ನು ಕರೆದುಕೊಂಡು ಬಾ ಎಂದು ಆರ್ಡರ್ ಮಾಡಿದನಂತೆ. ಆಗ ಅಲ್ಲಿಗೆ ಒಬ್ಬ ಬಡವನನ್ನು ಕರೆದುಕೊಂಡು ಬಂದರಂತೆ. ಅವನನ್ನು ಏನಯ್ಯ ನೀವು ದೇವಸ್ಥಾನ ಕಟ್ಟಿಸಿದ್ದೀಯಾ ಎಂದು ಕೇಳಿದನಂತೆ, ಅದಕ್ಕೆ ಅವನು ಇದೇನು ಸ್ವಾಮಿ ಹೀಗೆ ಕೇಳುತ್ತಿದ್ದೀರಿ. ಅದಕ್ಕೆ ನಾನು ಪ್ಲಾನ್ ಎಷ್ಟು ದಿವಸದಲ್ಲಿ ಮಾಡಿಸಿದೆ, ಎಂತಹ ಕಂಬಗಳನ್ನು ಹಾಕಿಸಿದ್ದೇನೆ, ಎಷ್ಟು ಕೆತ್ತನೆ ಕೆಲಸ ಮಾಡಿಸಿದ್ದೇನೆ, ಎಷ್ಟು ದಂತದ ಕೆಲಸ ಮಾಡಿಸಿದ್ದೇನೆ, ಎಷ್ಟು ಚಿನ್ನದ ಕೆಲಸ ಮಾಡಿಸಿದ್ದೇನೆ. ಗೋಪುರ ಕಟ್ಟಿಸಿದ್ದೇನೆ ಇವು ನಿಮಗೆ ಜ್ಞಾಪಕಕ್ಕೆ ಬರಲಿಲ್ಲವೇ ? ಇವೆಲ್ಲವನ್ನು ಎಲ್ಲಿಂದ ತಂದೆ, ಎಂದು ಕೇಳಿದ್ದಕ್ಕೆ ಎಲ್ಲಿಂದ ಎಂದರೆ ಅವೆಲ್ಲವನ್ನೂ ನಿಮಗೆ ತೋರಿಸುವುದಕ್ಕಾ

ಗುತ್ತದೆಯೇ ? ನಾವು ತೋರಿಸುವುದಿಲ್ಲ. ಎಂದನಂತೆ ಏಕೆ ತೋರಿಸುವುದಿಲ್ಲ ಎಂದು ಕೇಳಿದ್ದಕ್ಕೆ, ಅವೆಲ್ಲವನ್ನೂ ಮನಸ್ಸಿನಲ್ಲೇ ಏರ್ಪಾಡು ಮಾಡಿಕೊಂಡಿದ್ದೇನೆ ಎಂದನಂತೆ. ಹಾಗೆ ನಮ್ಮ ಹೆಗಡೆಯವರು ಎಲ್ಲವನ್ನೂ ಚರ್ಚೆ ಇಲ್ಲದೇ ಪಾಸ್ ಮಾಡಿಸಿಕೊಂಡರು. ಮನಸ್ಸಿನಲ್ಲೇ ಎಲ್ಲಾ ಮಾಡಿಸಿಕೊಂಡರು, ೧೫ ದಿವಸದಿಂದ ಚರ್ಚೆಯಾಯಿತು, ಇದಕ್ಕೆಲ್ಲಾ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ, ಇದರಿಂದ ನಿಮಗೆಲ್ಲಾ ಸಮಾಧಾನವಾಗಿದೆ ಎಂದು ಈಗ ಅಪ್ರೋಪ್ರಿಯೇಷನ್ ಬಿಲ್ ಇದೆ, ದಯಮಾಡಿ ಇದನ್ನೂ ಪಾಸ್ ಮಾಡಿ ಎಂದು ಹೇಳುತ್ತಿದ್ದಾರೆ. ನಮ್ಮ ಕೆ. ಹೆಚ್. ಪಾಟೀಲ್‌ರು ಯಾವಾಗಲೂ ಹೇಳುತ್ತಿರುತ್ತಾರೆ. ಅಪ್ಪಾ, ಅಪ್ಪಾ ನಾನು ಜಾತ್ರೆಗೆ ಹೋಗುತ್ತೇನೆ, ನೀವು ಹೋಗು ಎಂದರೂ ಹೋಗುತ್ತೇನೆ ಬೇಡ ಎಂದರೂ ಹೋಗುತ್ತೇನೆ. ಹಾಗೆ ನೀವು, ನಾವು ಬೇಡ ಎಂದರೂ ತೆಗೆದುಕೊಳ್ಳುತ್ತೀರಿ. ಆದ್ದರಿಂದ ದಯಮಾಡಿ ಪಾಸ್ ಮಾಡಿಕೊಡಬಹುದೆಂದು ಹೇಳುತ್ತೇನೆ. ಆದರೆ ಈ ತರಹ ಯಾವತ್ತೂ ಮಾಡಬೇಡಿ. ಏಕೆಂದರೆ ಕೋಟ್ಯಾಂತರ ರೂಪಾಯಿ ದುಡ್ಡು, ನಮಗೆ ಬೇಕಾದಷ್ಟು ಹೇಳುವುದು ಇರುತ್ತದೆ ನೀವು ಮಾಡುವುದು ಮಾಡುತ್ತೀರಿ, ಆದರೆ ನಾವು ಹೇಳಬೇಕಾಗಿರುವ ಹಕ್ಕನ್ನು ಕಿತ್ತುಕೊಳ್ಳಬೇಡಿ.

ಶ್ರೀ ರಾಮಕೃಷ್ಣ ಹೆಗಡೆ.—ಈ ತರಹ ಮುಂದೆ ಎಂದೂ ಮಾಡುವುದಿಲ್ಲ. ನೀವು ಕಳೆದ ಒಂದು ವಾರದಿಂದ ಏನು ಮಾಡಿದಿರಿ, ಆ ತರಹ ಮಾಡದೇ ಇದ್ದಿದ್ದರೆ......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅದನ್ನು ಚರ್ಚೆ ಮಾಡಬೇಡಿ. ಚರ್ಚೆಗೆ ಹೋದರೆ ಅಸಹ್ಯವಾಗುತ್ತದೆ......

ಶ್ರೀ ರಾಮಕೃಷ್ಣ ಹೆಗಡೆ.—ಎರಡು ಮಾತು ಹೇಳಿದರು. ಮಾನ್ಯ ನಾಗರತ್ನಮ್ಮನವರು ಅವರಿಗೆ ಇಷ್ಟು ಮಾಡಿದಿರಿ, ಇವರಿಗೆ ಇಷ್ಟು ಮಾಡಿದಿರಿ, ಅವೆಲ್ಲಾ ನಿಜ. ಆದರೆ ಶೇಕಡ ೫೧ರಷ್ಟು ಇರತಕ್ಕ ಮಹಿಳೆಯರಿಗೆ ಏನು ಮಾಡಿದ್ದೀರಿ ಎಂದು ಪ್ರಶ್ನೆ ಅವರದು. ಶೇಕಡ ೫೧ ಮಹಿಳೆಯರಲ್ಲಿ ಶೇಕಡ ೧೫ರಷ್ಟು ಎಸ್.ಸಿ. ಎಸ್.ಟಿ ಯವರು, ನಾವು ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿದ್ದೇವೆ. ಶೇಕಡ ೩೦ರಷ್ಟು ಬ್ಯಾಕ್‌ವರ್ಡ್‌ಕ್ಲಾಸ್, ಅವರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವೆಲ್ಲಾ ಬ್ಯಾಕ್‌ವರ್ಡ್‌ಕ್ಲಾಸೇ, ನಮಗೆಲ್ಲಾ ಏನು ಮಾಡಿದ್ದೀರಿ, ಏನೂ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇದಾದಮೇಲೆ ನಮ್ಮ ಸ್ತ್ರೀಯರು ಮಂತ್ರಿ ಮಕ್ಕಳ ವಿಭಾಗದಲ್ಲಿ ಸುಮಾರು ೧೦ ಪರ್ಸೆಂಟ್ ಬರುತ್ತದೆ. ಇನ್ನು ಉಳಿದಿದ್ದು ಎಷ್ಟು ಪರ್ಸೆಂಟ್ ಎಂಬುದನ್ನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಸ್. ಸಿ. ಎಸ್. ಟಿ. ಅವರಿಗೆ ಮಾಡಿರುವುದನ್ನೆಲ್ಲಾ ಖರ್ಗೆ, ಬಸವಲಿಂಗಪ್ಪನವರು ತೆಗೆದುಕೊಳ್ಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಆಮೇಲೆ ರಮಾಭಂಡಾರಿಯವರ ವಿಚಾರದಲ್ಲಿ ಮಾತನಾಡುತ್ತಾ, ಏತಕ್ಕೆ ಅವರನ್ನು ಗಲ್ಲಿಗೆ ಹಾಕಲಿಲ್ಲ ಏತಕ್ಕೆ ನಿಮ್ಮ ಬಾಯಲ್ಲಿ ಇದು ಬರಲಿಲ್ಲ ಎಂದು ಕೇಳಿದರು, ಏತಕ್ಕೆ ಬರಲಿಲ್ಲ ಎಂದು ಹೇಳಿದರೆ, ಅವಳು ಮಹಿಳೆ ಎಂದು ಬರಲಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವಳು ಮಹಿಳೆ ಅಲ್ಲ, ರಾಕ್ಷಸಿ, ಮಹಿಳೆಯರ ವರ್ಗಕ್ಕೆ ಅವರನ್ನು ಸೇರಿಸಬೇಡಿ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ೧೯೮೭ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ಕ್ರಮಾಂಕ ೨) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

———————

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨ ಮತ್ತು ೩

ಅಧ್ಯಕ್ಷರು.—ಖಂಡ ೨ ಮತ್ತು ೩ ಎರಡೂ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿತು

(ಖಂಡ ೨ ಮತ್ತು ೩ ಎರಡೂ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವವನ್ನು ಅಂಗೀಕರಿಸಲಾಯಿತು

(ಮೊದಲನೆ ಖಂಡ, ದೀರ್ಘಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ನಾಗರೀಕ ಸರಬರಾಜ ಮಂತ್ರಿಗಳು).—

೧೯೮೭ನೇ ಇಸವಿಯ ಕರ್ನಾಟಕ ಧನವಿನಿಯೋಗ, (ಕ್ರಮಾಂಕ ೨) ವಿಧೇಯಕವನ್ನು ಅಂಗೀಕರಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ

೧೯೮೭ನೇ ಇಸವಿಯ ಕರ್ನಾಟಕ ಧನ ವಿನಿಯೋಗ (ಕ್ರಮಾಂಕ ೨) ವಿಧೇಯಕವನ್ನು ಅಂಗೀಕರಿಸುವುದು,

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಹೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು.—ಇಂದಿನ ಸಭೆಯನ್ನು ನಾಳೆ ಮಧ್ಯಾಹ್ನ ೧೨ ಗಂಟೆಗೆ ಮುಂದೂಡಲಾಗಿದೆ.

(ಸಭೆಯು ರಾತ್ರಿ ೮ ಗಂಟೆ ೩ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ ೨೭ನೇ ಮಾರ್ಚ್ ೧೯೮೭ನೇ ಶುಕ್ರವಾರ ಮಧ್ಯಾಹ್ನ ೧೨. ೦೦ ಗಂಟೆಗೆ ಸೇರಲು ನಿಶ್ಚಯಿಸಿತು.)